
ಸಂಪುಟ: 37 ಸಂಚಿಕೆ: 07 | ಸೆಪ್ಟೆಂಬರ್ 2024
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ



**09 ಸೆಪ್ಟೆಂಬರ್ - ಮಾವೋ ಝೆಡಾಂಗ್ ಸ್ಮರಣ ದಿನ**

ನಮ್ಮ ಬಳಿ ಸರಿಯಾದ ಸಿದ್ಧಾಂತವಿದ್ದರೂ, ನಾವು ಅದರ ಬಗ್ಗೆ ಕೇವಲ ಕೊಚ್ಚಿಕೊಳ್ಳುತ್ತಾ, ಅದನ್ನು ಬರೀ ಸಂಗ್ರಹಿಸಿಕೊಂಡು, ಅದನ್ನು ಆಚರಣೆಯಲ್ಲಿ ತರದಿದ್ದರೆ, ಆ ಸಿದ್ಧಾಂತವು ಎಷ್ಟೇ ಒಳ್ಳೆಯದಾದರೂ, ಅದಕ್ಕೆ ಯಾವ ಮಹತ್ವವೂ ಇಲ್ಲ.

– ಮಾವೋ ಝೆಡಾಂಗ್
(ಆಚರಣೆಯ ಕುರಿತು, ಆಯ್ದ ಕೃತಿಗಳು, ಭಾಗ 1)

**ಒಳ ಪುಟಗಳಲ್ಲಿ............**

ಪ್ರಬಲ ಹೋರಾಟದ ದಾರಿಯಲ್ಲಿ ವಿದ್ಯುತ್‌ಗ್ರಾಹಕರು-------3
ಕಾರ್ಪೊರೇಟ್ ಕಂಪೆನಿಗಳ ಲಾಭದಾಹಕ್ಕೆ ಕಾಡುಗಳು ಮತ್ತು ಅರಣ್ಯವಾಸಿಗಳ ಬಲಿ---4
ಗಲ್ಫ್ ರಾಷ್ಟ್ರಗಳಲ್ಲಿ ಭಾರತೀಯ ಮೂಲದ ವಲಸಿಗರ ಚಿಂತಾಜನಕ ಪರಿಸ್ಥಿತಿ-------------5
ಕೇರಳದ ಪ್ರಕೃತಿ ವಿಕೋಪ – ಒಂದು ರಾಷ್ಟ್ರೀಯ ದುರಂತ-----------------------6
ಕಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆಯ ಪೈಶಾಚಿಕ ಘಟನೆ--------10
ಭಾರತೀಯ ರೈಲ್ವೆಯ ಭಯಾನಕ ಪ್ರಯಾಣ-------------11



**ಮೈಸೂರು: ವಲಯಮಟ್ಟದ ಕಾಮ್ರೇಡ್ ಶಿವದಾಸ್ ಘೋಷ್‌ರವರ 48ನೇ ಸ್ಮರಣ ವರ್ಷಾಚರಣೆ:**

## ಮಾರ್ಕ್ಸ್‌ವಾದ ಆರ್ಥಿಕ, ರಾಜಕೀಯ ಸಿದ್ಧಾಂತ ಮಾತ್ರವಲ್ಲದೇ ಜೀವನದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ನೀಡುವ ಏಕೈಕ ತತ್ವಶಾಸ್ತ್ರ

**– ಕಾ|| ಅಮಿತಾವ್ ಚಟರ್ಜಿ**

ಆಗಸ್ಟ್ 11ರಂದು ಮೈಸೂರಿನಲ್ಲಿ, ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರು, ನಮ್ಮ ಶಿಕ್ಷಕರು, ಮಾರ್ಗದರ್ಶಿಗಳು ಹಾಗೂ ನಮ್ಮ ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಿವದಾಸ್ ಘೋಷ್ ಅವರ 48ನೇ ಸ್ಮರಣ ವರ್ಷಾಚರಣೆಯ ಪ್ರಯುಕ್ತ ಸಾರ್ವಜನಿಕ ಸಭೆಯನ್ನು ಸಂಘಟಿಸಲಾಗಿತ್ತು. ಇದು ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ, ಹಾಸನ ಜಿಲ್ಲೆಗಳ ವಲಯ ಮಟ್ಟದ ಕಾರ್ಯಕ್ರಮವಾಗಿತ್ತು.



**ಕಾ|| ಅಮಿತಾವ್ ಚಟರ್ಜಿ**
**ಪಾಲಿಟ್ ಬ್ಯೂರೋ ಸದಸ್ಯರು, ಎಸ್‌ಯುಸಿಐ(ಸಿ)**

ಈ ಸಭೆಯ ಮುಖ್ಯ ಭಾಷಣಕಾರರಾಗಿ **ಎಸ್‌ಯುಸಿಐ(ಸಿ)ಪಕ್ಷದ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ|| ಅಮಿತಾವ್ ಚಟರ್ಜಿ** ಅವರು ಮಾತನಾಡಿದರು. ಅವರ ಸುದೀರ್ಘ ಭಾಷಣದ ಸಾರಾಂಶ ಇಲ್ಲಿದೆ:

"ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನವಿರೋಧಿಯಾಗಿದ್ದು, ಬಂಡವಾಳಶಾಹಿ- ಪರ ನೀತಿ ಜಾರಿಗೊಳಿಸುವಲ್ಲಿ ತೊಡಗಿವೆ. ಆದ್ದರಿಂದ ದುಡಿಯುವ ಜನರು ಜಾಗೃತರಾಗಿ ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಸಂಘಟಿತರಾಗಬೇಕು. ಜನರನ್ನು ಸಂಘಟಿಸಿ ಕ್ರಾಂತಿಯ ಕಡೆಗೆ ನಡೆಯುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಕಾಮ್ರೇಡ್ ಶಿವದಾಸ್ ಘೋಷ್ ಹೇಳುತ್ತಿದ್ದರು, 'ನಾವು ಎಲ್ಲಾ ಮಹಾನ್ ಮಾರ್ಕ್ಸ್‌ವಾದಿ ನಾಯಕರ ಸ್ಮರಣದಿನಗಳನ್ನು ಆಚರಿಸುವುದು ಕೇವಲ ಸಂಪ್ರದಾಯಕ್ಕಾಗಿ ಅಲ್ಲ. ನಾವು ಅವರ ವಿಚಾರಗಳನ್ನು ಸರಿಯಾಗಿ ಗ್ರಹಿಸಿದ್ದೇವೆಯೇ? ಅವುಗಳನ್ನು ನಮ್ಮ ಬದುಕಿನಲ್ಲಿ ಸರಿಯಾಗಿ ಅಳವಡಿಸಿಕೊಂಡಿದ್ದೇವೆಯೇ ಎಂಬುದರ ಆತ್ಮಾವಲೋಕನಕ್ಕೆ ಇದು ಸೂಕ್ತವಾದ ದಿನ' ಎಂದು. ಅವರ ಮಹಾನತೆ ಈ ಮಾತಿನಲ್ಲಿದೆ. ಓರ್ವ ಮಾರ್ಕ್ಸ್‌ವಾದಿಯಾಗ ಬೇಕೆಂದರೆ ಕಾರ್ಲ್‌ಮಾರ್ಕ್ಸ್‌ರಿಂದ ಹಿಡಿದು ಮಾವೋವರೆಗಿನ ಎಲ್ಲಾ ಮಾರ್ಕ್ಸ್‌ವಾದಿ ಚಿಂತಕರ ಪುಸ್ತಕಗಳನ್ನು ಓದಿದರೆ ಸಾಲದು. ಅವರ ವಿಚಾರಗಳನ್ನು ಅರ್ಥೈಸಿಕೊಂಡು ಅಳವಡಿಸಿಕೊಂಡಾಗ ಮಾತ್ರ ಅದು ಸಾಧ್ಯ. ಈ ವಿಷಯದಲ್ಲಿ ನಾವು ಎಲ್ಲಿದ್ದೇವೆ ಎಂಬುದರ ಆಂತರಿಕ ಹುಡುಕಾಟಕ್ಕಾಗಿ ಅವರ ಸ್ಮರಣದಿನವನ್ನು ನಾವು ಆಚರಿಸಬೇಕು.

"ದೇವರ ಅಸ್ತಿತ್ವವನ್ನೇ ಪ್ರಶ್ನಿಸಿದ್ದ ಬುದ್ಧನನ್ನೇ ದೇವರನ್ನಾಗಿಸಿದ ದೇಶ ನಮ್ಮದು. ವೈಚಾರಿಕತೆ, ವಿಚಾರ, ಪರಸ್ಪರ ಚರ್ಚೆಗಳನ್ನು ಪ್ರೋತ್ಸಾಹಿಸಿದ್ದು ಬುದ್ಧನ ಚಳುವಳಿ. ನಮ್ಮ ನಾಯಕರಾದ ಕಾ|ಶಿವದಾಸ್ ಘೋಷ್ ಅದನ್ನೇ ಹೇಳುತ್ತಿದ್ದರು. 'ಮಾರ್ಕ್ಸ್‌ವಾದ ಹೇಳುವಂತೆ, ನಾಯಕತ್ವವನ್ನು ಕುರುಡಾಗಿ ಅನುಸರಿಸಬಾರದು, ಬದಲಾಗಿ ಸೈದ್ಧಾಂತಿಕವಾಗಿ ಗಟ್ಟಿಗೊಳ್ಳುವ ಮೂಲಕ ಪಕ್ಷವನ್ನು ಆಂತರಿಕವಾಗಿ ಬಲಪಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.' ಶಿವದಾಸ್ ಘೋಷರು ಸ್ಟಾಲಿನ್, ಮಾವೋ ಅವರನ್ನು ನಾಯಕರೆಂದು ಪರಿಗಣಿಸಿದ್ದರು. ಆದರೆ ಕುರುಡಾಗಿ ಅವರನ್ನು ಅನುಸರಿಸಲಿಲ್ಲ. 1948ರ ವೇಳೆಗೆ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೂ ಸಹ ಅದರೊಳಗಿನ ದೋಷಗಳನ್ನು ಕುರಿತು ಶಿವದಾಸ್ ಘೋಷ್ ನಿಚ್ಚಳವಾಗಿ ವಿಶ್ಲೇಷಿದ್ದಾರೆ. ಚೀನಾದ ಸಾಂಸ್ಕೃತಿಕ ಕ್ರಾಂತಿಯ ಇತಿಮಿತಿಯ ಕುರಿತಾಗಿಯೂ ಮಾತನಾಡಿದ್ದಾರೆ. ಹೀಗೆ ಯಾವುದೇ ನಾಯಕತ್ವವನ್ನು ಅಂಧವಾಗಿ ಒಪ್ಪಬಾರದೆಂಬ ತಮ್ಮ ಹೇಳಿಕೆಗೆ ಬದ್ಧರಾಗಿ ಅವರು

2ನೇ ಪುಟಕ್ಕೆ




**ಬೆಂಗಳೂರು**

**ಕಾ|| ಕೆ. ಉಮಾ**
**ಕೇಂದ್ರ ಸಮಿತಿ ಸದಸ್ಯರು**
**ಹಾಗೂ ರಾಜ್ಯ ಕಾರ್ಯದರ್ಶಿ ಎಸ್‌ಯುಸಿಐ(ಸಿ)**

# ಶಿವದಾಸ್ ಘೋಷ್‌ರವರ 48ನೇ ಸ್ಮರಣ ವರ್ಷಾಚರಣೆ

1ನೇ ಪುಟದಿಂದ ಜೀವಿಸಿದ್ದರು. ಹಾಗೆಯೇ ನಾವು ಪಕ್ಷದ ನಾಯಕರ ತಪ್ಪುಗಳೇನಾದರೂ ಕಂಡರೆ ದಿಟ್ಟತನದಿಂದ ಪ್ರಶ್ನಿಸಬೇಕು. ಅಧ್ಯಯನಶೀಲತೆಯಲ್ಲಿ ಯಾವುದೇ ಸಡಿಲತೆ ಇರಕೂಡದು. ನಾಯಕರಲ್ಲಿ ಅದರ ಕೊರತೆ ಕಂಡಾಗಲೂ ನಾವದನ್ನು ಪ್ರಶ್ನಿಸಬೇಕು. ಕಾರ್ಯಕರ್ತರು ಪಕ್ಷದ ನಾಯಕರೊಂದಿಗೂ ಸಂವಾದ ನಡೆಸಬೇಕು. ಆದರೆ ಆ ಸಂವಾದ ಕೇವಲ ವಾದಕ್ಕಾಗಿ ಅಲ್ಲ; ಅದು


ತಲ್ಲೀನತೆಯಿಂದ ಆಲಿಸುತ್ತಿರುವ ಸಭೆ

ತಾರ್ಕಿಕವಾಗಿರಬೇಕು. ಅದರಲ್ಲೂ ನಮ್ಮ ಮಹಿಳಾ ಸಂಗಾತಿಗಳು ಆತ್ಮವಿಶ್ವಾಸದಿಂದ ತಲೆಯೆತ್ತಿ ನಾಯಕರೊಂದಿಗೆ ಚರ್ಚೆ ಸಂವಾದಗಳಲ್ಲಿ ತೊಡಗಬೇಕು.

"ಕಾಮ್ರೇಡ್ ಶಿವದಾಸ್ ಘೋಷ್ ಅವರನ್ನು ನಾವು ಏಕೆ ನೆನಪಿಸಿಕೊಳ್ಳಬೇಕು? ಭಾರತ ಸ್ವಾತಂತ್ರ್ಯ ಗಳಿಸುವ ಮುಂಚೆಯಿಂದಲೂ ದೇಶದಲ್ಲಿ ಎಡಪಕ್ಷಗಳು ಅಸ್ತಿತ್ವದಲ್ಲಿದ್ದವು. ಆದರೆ ಅವು ಭಾರತದ ಪರಿಸ್ಥಿತಿಯ ಕುರಿತು, ಸ್ವಾತಂತ್ರ್ಯದ ನಂತರವೂ ನಮ್ಮಲ್ಲಿ ಅರೆ ಊಳಿಗಮಾನ್ಯ, ಅರೆ ವಸಾಹತುಶಾಹಿ ವ್ಯವಸ್ಥೆಯು ಅಸ್ತಿತ್ವದಲ್ಲಿದೆ ಎಂದು ತಪ್ಪು ವಿಶ್ಲೇಷಣೆ ನೀಡಿದವು. ಆದರೆ ಕಾಮ್ರೇಡ್ ಶಿವದಾಸ್ ಘೋಷ್ ಅವರು ಊಳಿಗಮಾನ್ಯ ಪದ್ಧತಿ ಹೋಗಿ ಹೊಸ ವ್ಯವಸ್ಥೆಯು ರಚನೆಯಾಗಿದೆ. ಅದೇ ದೇಶಾದಾದ್ಯಂತ ಬೇರೂರಿರುವ ಬಂಡವಾಳಶಾಹಿ ವ್ಯವಸ್ಥೆ. ಪ್ರಸ್ತುತ ಅದು ಸಾಮ್ರಾಜ್ಯವಾದದ ಹಂತಕ್ಕೆ ಬೆಳೆದಿದೆ ಎಂಬ ಸತ್ಯವನ್ನು ತೋರಿಸಿಕೊಟ್ಟರು. ಕಾರ್ಮಿಕವರ್ಗದ ಮೇಲೆ ನಡೆಯುತ್ತಿರುವ ಈ ವ್ಯವಸ್ಥೆಯ ಶೋಷಣೆಯನ್ನು ಕೊನೆಗಾಣಿಸಲು ಸಮಾಜವಾದಿ ಕ್ರಾಂತಿ ನೆರವೇರಬೇಕು ಎಂದು ಭಾರತದ ಕ್ರಾಂತಿಯ ಸರಿಯಾದ ಮಾರ್ಗವನ್ನು ತೋರಿಸಿದರು. ಅವರ ವಿಚಾರಗಳು ಭಾರತದ ಸಮಾಜವಾದಿ ಕ್ರಾಂತಿಗಲ್ಲದೇ, ಜಗತ್ತಿನ ದುಡಿಯುವ ವರ್ಗದ ವಿಮುಕ್ತಿಗೆ ದಾರಿದೀಪವಾಗಿವೆ. ಅವರ ವಿಚಾರವನ್ನು ಗುರುತಿಸಿ, ಗ್ರಹಿಸಿ ಸರಿಯೆಂದು ಒಪ್ಪಿಕೊಳ್ಳುವ ಕಮ್ಯುನಿಸ್ಟ್ ಹೋರಾಟಗಾರರು ನೆರೆಯ ಶ್ರೀಲಂಕಾದಿಂದ ಮಾತ್ರವಲ್ಲದೇ ದೂರದ ಜರ್ಮನಿ, ಸ್ಪೇನ್, ಅಮೆರಿಕಾ ಮೊದಲಾದ ಕಡೆಗಳಿಂದಲೂ ನಮ್ಮ ಸಂಪರ್ಕಕ್ಕೆ ಬರುತ್ತಿದ್ದಾರೆ.

"ನಮ್ಮ ದೇಶದಲ್ಲಿ ವೇದಾಂತ, ದ್ವೈತ, ಅದ್ವೈತ, ಹೀಗೆ ಹಲವಾರು ಸಿದ್ಧಾಂತಗಳಿದ್ದರೂ ಇವುಗಳನ್ನು ಬಿಟ್ಟು ಕಾಮ್ರೇಡ್ ಶಿವದಾಸ್ ಘೋಷ್ ಅವರು ಮಾರ್ಕ್ಸ್‌ವಾದವನ್ನು ಆಯ್ಕೆ ಮಾಡಿಕೊಂಡರು. ಏಕೆಂದರೆ, ಅವೆಲ್ಲವೂ ಸತ್ಯವನ್ನು ಗ್ರಹಿಸಲು ಓರ್ವ ವ್ಯಕ್ತಿಯ ವ್ಯಕ್ತಿಗತ ಅನುಭವ ಮತ್ತು ಗ್ರಹಿಕೆಯನ್ನು ಅವಲಂಬಿಸಿವೆ. ಆದರೆ ಮಾರ್ಕ್ಸ್‌ವಾದವು ವಿಜ್ಞಾನವನ್ನು ಆಧರಿಸಿದೆ. ಪ್ರಯೋಗ, ಪರಿಶೀಲನೆಯ ವೈಜ್ಞಾನಿಕ ತತ್ವವನ್ನಾಧರಿಸಿದ ಮಾರ್ಕ್ಸ್‌ವಾದವು ಸತ್ಯದ ಸಾಕ್ಷಾತ್ಕಾರಕ್ಕಿರುವ ಏಕೈಕ ಮಾರ್ಗವಾಗಿದೆ. ಅದು ಕೇವಲ ಆರ್ಥಿಕ, ರಾಜಕೀಯ ಸಿದ್ಧಾಂತ ಮಾತ್ರವಲ್ಲದೇ ವೈಯಕ್ತಿಕ ಜೀವನಕ್ಕೂ ದಾರಿ ತೋರಿಸುವ ತತ್ವಶಾಸ್ತ್ರವಾಗಿದ್ದು, ಇಂದಿನ ಎಲ್ಲಾ ಸಮಸ್ಯೆಗಳ ವಿರುದ್ಧ ಹೋರಾಡಲು ಸೂಕ್ತವಾದ ಅಸ್ತ್ರವಾಗಿದೆ. ಮಾರ್ಕ್ಸ್‌ವಾದ ತತ್ವಶಾಸ್ತ್ರದ ಆಧಾರದಲ್ಲಿ ಮಾತ್ರವೇ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸಲು ಸಾಧ್ಯ ಎಂದು ಕಾಮ್ರೇಡ್ ಶಿವದಾಸ್ ಘೋಷ್ ತೋರಿಸಿಕೊಟ್ಟರು.

"ಮಾರ್ಕ್ಸ್‌ವಾದವು ಪರಿಪೂರ್ಣವಾದ ತತ್ವಶಾಸ್ತ್ರ. ನಮ್ಮ ಬದುಕಿಗೆ ಅದನ್ನು ಅಳವಡಿಸಿಕೊಳ್ಳದಿದ್ದರೆ ನಾವು ಅದರ ಸಾರವನ್ನು ಗ್ರಹಿಸಲು ಸಾಧ್ಯವಿಲ್ಲ. ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ನಾವದನ್ನು ಅಳವಡಿಸಿಕೊಳ್ಳಬೇಕು. ಕುಟುಂಬದೊಂದಿಗೆ, ನಮ್ಮ ಮಡದಿ–ಪತಿ–ಮಕ್ಕಳೊಂದಿಗಿನ ನಮ್ಮ ಸಂಬಂಧವು ಮಾರ್ಕ್ಸ್‌ವಾದದ ತತ್ವವನ್ನಾಧರಿಸಿದೆಯೇ ಎಂಬುದು ಮುಖ್ಯ. ನಾವು ಎಚ್ಚರಿಕೆಯಿಂದಿರದಿದ್ದರೆ ಯಾವಾಗ ಬೇಕಾದರೂ ದಾರಿ ತಪ್ಪುತ್ತೇವೆ. ನಾಯಕರಾಗಿದ್ದರೂ ಸಹ ಎಚ್ಚರ ತಪ್ಪಿದರೆ ಕುಸಿತ ಅನಿವಾರ್ಯ. ಆದ್ದರಿಂದ ಮಾರ್ಕ್ಸ್‌ವಾದವನ್ನು ಪುಸ್ತಕಗಳಿಂದ ಓದಿ ಗ್ರಹಿಸಲು ಸಾಧ್ಯವಿಲ್ಲ. ಅದನ್ನು ಜೀವನದಲ್ಲಿ ಆಚರಣೆಗೆ ತರಬೇಕು ಹಾಗೂ ಈ ಹೋರಾಟ ಯಾವಾಗಲೂ ಜೀವಂತವಾಗಿರಬೇಕು.

"ಶಿವದಾಸ್ ಘೋಷ್‌ರು ಈ ನೆಲದಲ್ಲಿ ಒಂದು ನೈಜ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಬುನಾದಿ ಕೆಲಸದಿಂದ ತಮ್ಮ ಹೋರಾಟವನ್ನು ಪ್ರಾರಂಭಿಸಿದರು. ಕೆಲವೇ ಕೆಲವು ಬೆರಳೆಣಿಕೆಯ ಸಹಯೋಧರೊಂದಿಗೆ ಪಕ್ಷವನ್ನು ಆರಂಭಿಸಿದರು. ಆಗ ಎದುರಾಗಿದ್ದ ಅನೇಕ ಪ್ರಶ್ನೆಗಳಿಗೆ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಿಂದಲೂ ಯಾವುದೇ ಉತ್ತರಗಳು ಸಿಗದಾಗ ಅವರು, ತಮ್ಮ ಆಳವಾದ ವೈಜ್ಞಾನಿಕ ಜ್ಞಾನ ಮತ್ತು ಶೋಧನೆಯ ಮೂಲಕ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಸೂಕ್ತವಾದ ಉತ್ತರಗಳನ್ನು ಕಂಡುಕೊಂಡರು. ನಂತರದ ದಿನಗಳಲ್ಲಿ ಅಂದಿನ ಅವರ ಮುನ್ನೋಟ ಎಷ್ಟು ಸಮಂಜಸವಾಗಿತ್ತು ಎಂಬುದು ಸಾಬೀತಾಗಿದೆ. "ಯಾವುದೇ ದೇಶದಲ್ಲಿ ತಾಂತ್ರಿಕ ಕ್ರಾಂತಿಗೆ ಮುನ್ನವೇ ಸಾಂಸ್ಕೃತಿಕ ಕ್ರಾಂತಿ ನೆರವೇರಬೇಕು ಮತ್ತು ಕ್ರಾಂತಿಯ ನಂತರವೂ ಅದು ಮುಂದುವರೆಯಬೇಕು" ಎಂಬ ಲೆನಿನ್‌ರವರ ವಿಶ್ಲೇಷಣೆಯನ್ನು ಸರಿಯಾಗಿ ಗ್ರಹಿಸಿದ ಕಾಮ್ರೇಡ್ ಶಿವದಾಸ್ ಘೋಷ್‌ರವರು, ಈ ನೆಲದಲ್ಲಿ ನವೋದಯದ ಹರಿಕಾರರು ಆರಂಭಿಸಿದ ಸಾಮಾಜಿಕ–ಸಾಂಸ್ಕೃತಿಕ ಕ್ರಾಂತಿಯನ್ನು ಮುನ್ನಡೆಸಿಕೊಂಡು ಹೋಗುವ ಹೊಣೆ ಕ್ರಾಂತಿಕಾರಿಗಳ ಹೆಗಲ ಮೇಲಿದೆ ಎಂದು ಅದಕ್ಕೆ ಬಲವಾದ ಒತ್ತು ನೀಡಿದ್ದಾರೆ. ಕಾ. ಘೋಷ್‌ರವರು ತಿಳಿಸಿಕೊಟ್ಟಂತೆ, ನಾವು ಕಾರ್ಮಿಕವರ್ಗದ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು, ಇಲ್ಲವಾದಲ್ಲಿ ನಮ್ಮ ಪಕ್ಷವೂ ಒಂದು ಕಮ್ಯುನಿಸ್ಟ್ ಪಕ್ಷವಾಗಿ ಉಳಿಯುವುದಿಲ್ಲ. ನಮ್ಮ ಪಕ್ಷಕ್ಕೂ ಇನ್ನಿತರ ನಾಮಮಾತ್ರ ಕಮ್ಯುನಿಸ್ಟ್ ಪಕ್ಷಗಳಿಗಿರುವ ಪ್ರಮುಖ ವ್ಯತ್ಯಾಸ ಇದೇ ಆಗಿದೆ. ಕಾರ್ಮಿಕವರ್ಗ ಸಂಸ್ಕೃತಿಯನ್ನು ಸರಿಯಾಗಿ ಗ್ರಹಿಸದೇ ಕೇವಲ ಮಾತಿನಲ್ಲೇ ಕಾಲ ಕಳೆದರೆ ಆಗ ಪಕ್ಷ ಕೇವಲ ಒಂದು ಚರ್ಚಾಕೂಟವಾಗುತ್ತದೆ. ಲೆನಿನ್‌ರ ವಿಶ್ಲೇಷಣೆಯಂತೆ ಯಾವುದೇ ದೇಶದಲ್ಲಿ ಕ್ರಾಂತಿಯು ನೆರವೇರಲು ಕ್ರಾಂತಿಕಾರಿ ಪಕ್ಷ ಅನಿವಾರ್ಯ. ಆ ಪಕ್ಷಕ್ಕೆ ಕ್ರಾಂತಿಕಾರಿ ಸಿದ್ಧಾಂತ ಅತ್ಯಾವಶ್ಯಕ. ಇಲ್ಲಿ ಕ್ರಾಂತಿಕಾರಿ ಸಿದ್ಧಾಂತವೆಂದರೆ ಕೇವಲ ಕ್ರಾಂತಿಯ ರಣನೀತಿ ಮತ್ತು ರಣಕೌಶಲ್ಯಗಳ ಬಗೆಗಿನ ಸಿದ್ಧಾಂತವಲ್ಲ. ಕ್ರಾಂತಿಕಾರಿ ಸಂಸ್ಕೃತಿ ಅತ್ಯಂತ ಪ್ರಧಾನವಾಗಿದೆ. ಆದ್ದರಿಂದ ಬಂಡವಾಳಶಾಹಿ–ವಿರೋಧಿ ಸಮಾಜವಾದಿ ಕ್ರಾಂತಿಯ ಯಶಸ್ಸಿಗೆ ಕಾರ್ಮಿಕವರ್ಗದ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಇದರ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯನ್ನು ಕೊಟ್ಟವರು ಕಾಮ್ರೇಡ್ ಶಿವದಾಸ್ ಘೋಷ್. ಹಾಗಾಗಿಯೇ, ನಮ್ಮ ಪಕ್ಷದಲ್ಲಿ ಮಾರ್ಕ್ಸ್‌ವಾದಿ ವೈಚಾರಿಕತೆಯೊಂದಿಗೆ ಉನ್ನತ ಸಂಸ್ಕೃತಿಯೂ ಮೇಳೈಸಿದೆ.

"ಶಿವದಾಸ್ ಘೋಷರು ನುಡಿದಂತೆ ಕ್ರಾಂತಿಕಾರಿ ಜೀವನವೇ ಅತ್ಯಂತ ಗೌರವಯುತವಾದ ಜೀವನ. ಅದಕ್ಕಿರುವ ಏಕೈಕ ಮಾರ್ಗವೆಂದರೆ ಪ್ರಸ್ತುತದಲ್ಲಿ ನಡೆಯುವ ಕ್ರಾಂತಿಕಾರಿ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು. ಹಾಗೆ ಪಾಲ್ಗೊಳ್ಳಲು ನಮಗೆ ವೈಚಾರಿಕ ತಿಳುವಳಿಕೆ ತುಂಬಾ ಮುಖ್ಯ. ಸತತವಾದ ಅಧ್ಯಯನದಿಂದ ಮಾತ್ರವೇ ವೈಚಾರಿಕತೆಯನ್ನು ಸರಿಯಾಗಿ ಗ್ರಹಿಸಲು ಸಾಧ್ಯ. ಅದಕ್ಕಾಗಿ ಮಾರ್ಕ್ಸ್‌ವಾದಿ ಕೃತಿಗಳನ್ನು ಅಧ್ಯಯನ–ಮರು ಅಧ್ಯಯನ ಮಾಡಬೇಕು. ಪ್ರಸಕ್ತ ವಿದ್ಯಮಾನಗಳ ತಿಳುವಳಿಕೆಗಾಗಿ ಕೇವಲ ಪಕ್ಷದ ಪತ್ರಿಕೆ ಮತ್ತು ಇನ್ನಿತರ ಪ್ರಕಟಣೆಗಳನ್ನು ಮಾತ್ರವಲ್ಲದೇ ರಾಷ್ಟ್ರೀಯ–ಅಂತರರಾಷ್ಟ್ರೀಯ ವೃತ್ತ ಪತ್ರಿಕೆಗಳನ್ನು ಮತ್ತು ನಿಯತ ಕಾಲಿಕಗಳನ್ನು ಆಳವಾಗಿ ಓದಬೇಕು, ನಾಯಕರೊಂದಿಗೆ ಚರ್ಚಿಸಬೇಕು. ತನ್ಮೂಲಕ ಒಂದು ಕ್ರಾಂತಿಕಾರಿ ಪಕ್ಷದ ಕಾರ್ಯಕರ್ತರಾಗಿ ನಾವು ಎಲ್ಲಾ ವಿಷಯಗಳನ್ನು ಕುರಿತು ಸರಿಯಾದ ಜ್ಞಾನವನ್ನು ಗಳಿಸಬೇಕು, ಮತ್ತದನ್ನು ಜನತೆಯ ಬಳಿ ಕೊಂಡೊಯ್ಯಬೇಕು.

"ಮಾರ್ಕ್ಸ್ ಮತ್ತು ಎಂಗೆಲ್ಸ್ ಕಮ್ಯುನಿಸಂನ ಅಸ್ಥಿಭಾರವನ್ನು ಹಾಕಿಕೊಟ್ಟಿದ್ದಾರೆ. ಅದನ್ನು ಮುಂದುವರೆಸಿಕೊಂಡು ಹೋಗುವ ಹೊಣೆ ನಮ್ಮ ಮೇಲಿದೆ" ಎಂದು ಲೆನಿನ್ ಹೇಳಿದ್ದಾರೆ. ಹಾಗೆಯೇ ನಮ್ಮ ಜವಾಬ್ದಾರಿಯೂ ಗುರುತರವಾಗಿದೆ. ಜಗತ್ತು ಹೊಸಹೊಸ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ನಾವು ಆ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು ಮುನ್ನಡೆಯಬೇಕು. ಪ್ರತಿವರ್ಷ ಆಗಸ್ಟ್ 5ರಂದು ಕಾ। ಶಿವದಾಸ್ ಘೋಷ್‌ರವರಿಗೆ ಗೌರವವನ್ನು ಸಲ್ಲಿಸುವುದೆಂದರೆ ನಾವು ಕ್ರಾಂತಿಕಾರಿ ಮಾರ್ಗದಲ್ಲಿ ಮುನ್ನುಗ್ಗುವುದೇ ಆಗಿದೆ. ಪಕ್ಷಕ್ಕೆ ಇಂದು ಸಾಮೂಹಿಕ ಆಯಾಮ ಬಂದಿದೆ. ಜನರ ಪಕ್ಷವಾಗಿ ಹೊರಹೊಮ್ಮುತ್ತಿದೆ. ಆದ್ದರಿಂದ ಪಕ್ಷದ ಕಾರ್ಯಕರ್ತರು ಇಂದು ಜನರೊಳಗೊಂದಾಗಿ ಅವರಲ್ಲಿ ಪಕ್ಷದ ವಿಚಾರಧಾರೆಯನ್ನು ಬೆಳೆಸಿ ಪಕ್ಷದ ವಿಚಾರವು ಜನರ ವಿಚಾರವಾಗುವಂತೆ ಹಾಗೂ ನಾವು ಕೇವಲ ಪಕ್ಷದ ಸದಸ್ಯರೆನಿಸದೆ ಜನರೊಳಗೊಬ್ಬರಾಗಿ ಬೆಳೆದು ಕ್ರಾಂತಿಕಾರಿ ಹೋರಾಟಕ್ಕೆ ಒಂದು ಮುಂಜಗಿತವನ್ನು ತರುವಲ್ಲಿ ಯಶಸ್ವಿಯಾಗಬೇಕು. ಇದು ಪಕ್ಷದ ಕರೆಯಾಗಿದೆ".

ಈ ಸಂದರ್ಭದಲ್ಲಿ ಪಕ್ಷದ ರಾಜ್ಯ ಸೆಕ್ರಟೇರಿಯೇಟ್ ಸದಸ್ಯರಲ್ಲೊಬ್ಬರಾದ ಕಾಮ್ರೇಡ್ ಎಂ.ಎನ್. ಶ್ರೀರಾಮ್ ಅವರು ಮಾತನಾಡಿ, "1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಬಂಡವಾಳಶಾಹಿಗಳಿಗೇ ಹೊರತು, ಈ ದೇಶದ ದುಡಿಯುವ ವರ್ಗಕ್ಕಲ್ಲ ಎಂಬುದನ್ನು ಗ್ರಹಿಸಬೇಕು. ಇದರ ಪರಿಣಾಮವೇ ಸಾಮಾನ್ಯ ಜನರು, ರೈತ ಕಾರ್ಮಿಕರ ಮೇಲಿನ ಶೋಷಣೆಯು ಮುಂದುವರೆಯುತ್ತಿದೆ. ಯಾವುದೇ ಪಕ್ಷಗಳು ಕೂಡ ಇದರ ವಿರುದ್ಧ ಮಾತನಾಡುತ್ತಿಲ್ಲ. ಬದಲಿಗೆ, ಎಲ್ಲರೂ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಇತ್ತೀಚೆಗೆ ಶಿಕ್ಷಣ ಕ್ಷೇತ್ರದಲ್ಲಿ ನೀಟ್ ಸೇರಿದಂತೆ ಹಲವಾರು ಪರೀಕ್ಷೆಗಳಲ್ಲಿ ಬಹಳ ದೊಡ್ಡ ಹಗರಣ ನಡೆದಿದೆ. ಹಾಗೆಯೇ ಇನ್ನೂ ಸುದ್ದಿಯಲ್ಲಿರುವ ಮುಡಾ ಹಗರಣದಲ್ಲಿ ಕೂಡ ಈ ಎಲ್ಲಾ ಪಕ್ಷಗಳು ಭಾಗಿದಾರರೇ ಆಗಿದ್ದಾರೆ. ಈ ವರ್ಗ ವಿಭಜಿತ ಸಮಾಜದಲ್ಲಿ ಎಲ್ಲಾ ಆಳುವ ಪಕ್ಷಗಳು ದೇಶದ ಬಂಡವಾಳಶಾಹಿ ವರ್ಗದ ಪರವಾಗಿ ಕೆಲಸ ಮಾಡುತ್ತಿವೆ. ಹಾಗಾಗಿ ಸಮಾಜದಲ್ಲಿ ಮೂಲಭೂತ ಬದಲಾವಣೆಯ ಅವಶ್ಯಕತೆ ಇದೆ. ಅಂತಹ ಸಮಾಜವಾದಿ ಕ್ರಾಂತಿ ನೆರವೇರಿಸಲು ಈ ಯುಗದ ಕಾರ್ಮಿಕ ವರ್ಗದ ಮಹಾನ್ ನಾಯಕ ಕಾಮ್ರೇಡ್ ಶಿವದಾಸ್ ಘೋಷ್ ಅವರ ವಿಚಾರಗಳ ಆಧಾರದ ಮೇಲೆ ಚಳುವಳಿಗಳನ್ನು ಬೆಳಸಬೇಕಿದೆ" ಎಂದರು.

ಪಕ್ಷದ ರಾಜ್ಯ ಸಮಿತಿ ಸದಸ್ಯರು ಹಾಗೂ ಮೈಸೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಬಿ.ರವಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯರಾದ ಕಾ. ವಿ. ಜ್ಞಾನಮೂರ್ತಿ, ಕಾ. ವಿ.ಎನ್. ರಾಜಶೇಖರ್, ವೇದಿಕೆಯ ಮೇಲಿದ್ದರು. ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ, ಚಾಮರಾಜನಗರ ಮತ್ತು ಹಾಸನದ ಕಾರ್ಯಕರ್ತರು, ಬೆಂಬಲಿಗರು, ರೈತ– ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ, ಕಾ.ಘೋಷ್‌ರವರ ಕನಸಿನ ಭಾರತವನ್ನು ಸಾಕಾರ ಮಾಡುವ ಪಣ ತೊಟ್ಟರು.


ಬಳ್ಳಾರಿ


ಧಾರವಾಡ


ದಾವಣಗೆರೆ


ತುಮಕೂರು


ಯಾದಗಿರಿ

# ಪ್ರಬಲ ಹೋರಾಟದ ದಾರಿಯಲ್ಲಿ ವಿದ್ಯುತ್‌ಗ್ರಾಹಕರು

ವಿದ್ಯುತ್ ಶಕ್ತಿಯು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಕೆಲವು ಅರ್ಥಶಾಸ್ತ್ರಜ್ಞರಂತೂ ವಿದ್ಯುತ್ ಶಕ್ತಿಯ ಬಳಕೆಯ ಆಧಾರದ ಮೇಲೆ ದೇಶದ ಪ್ರಗತಿಯನ್ನು ಅಳೆಯುತ್ತಾರೆ. ಹೀಗಾಗಿ, ಜನಕಲ್ಯಾಣ ಕಾರ್ಯಕ್ರಮಕ್ಕೆ ಅತ್ಯವಶ್ಯಕವಾದ ವಿದ್ಯುತ್ ಉತ್ಪಾದನೆ ಮತ್ತು ಸರಬರಾಜನ್ನು ಸರ್ಕಾರವೇ ನೋಡಿಕೊಳ್ಳಬೇಕು. ಆದರೆ, ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಾರ್ವಜನಿಕ ವಲಯದಲ್ಲಿದ್ದ ವಿದ್ಯುತ್ ಕ್ಷೇತ್ರವು, ಈಗ ಇತರೆ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ರಾಷ್ಟ್ರಗಳಂತೆಯೇ ಶೀಘ್ರಗತಿಯಲ್ಲಿ ಖಾಸಗೀಕರಣಗೊಳ್ಳುತ್ತಿದೆ. ಈ ಮೂಲಕ ಅದನ್ನು ಬಂಡವಾಳಶಾಹಿಗಳ ಅಧಿಕ ಲಾಭಗಳಿಕೆಯ ಸರಕಾಗಿಸಲು ರಹದಾರಿ ನೀಡಲಾಗಿದೆ. ಕಾಲ ಕಳೆದಂತೆಯೇ, ವಿದ್ಯುತ್ ದರವನ್ನು ಗಗನಕ್ಕೇರಿಸಿ ಸಾಮಾನ್ಯ ಗ್ರಾಹಕರನ್ನು ಸಂಕಷ್ಟಕ್ಕೆ ಸಿಲುಕಿಸುವ ಖಾಸಗಿ ಕಂಪೆನಿಗಳು ಅತ್ಯಧಿಕ ಲಾಭ ಗಳಿಸಲು ಹೊಸ ವ್ಯವಸ್ಥೆಗಳನ್ನು ಮಾಡಿಕೊಂಡಿವೆ. ಬಂಡವಾಳಶಾಹಿ ದೈತ್ಯರ ಏಕಸ್ವಾಮ್ಯ ಹಿಡಿತದಿಂದಾಗಿ ವಿದ್ಯುತ್ ಕ್ಷೇತ್ರವು ಒಂದು ಅಗತ್ಯ ಸೇವೆಯ ಬದಲಿಗೆ ವಾಣಿಜ್ಯ ಕ್ಷೇತ್ರವಾಗಿ ಬದಲಾಗುತ್ತಿದೆ.

### ವಿದ್ಯುತ್ (ತಿದ್ದುಪಡಿ) ಮಸೂದೆ 2023

2003ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರವು ಶೇಕಡಾ 50ರಷ್ಟು ವಿದ್ಯುತ್ ಉತ್ಪಾದನೆಯನ್ನು ಖಾಸಗಿಯವರಿಗೆ ಒಪ್ಪಿಸುವ ಜನವಿರೋಧಿ **ವಿದ್ಯುತ್ ಕಾಯ್ದೆ 2003**ನ್ನು ಜಾರಿಗೊಳಿಸಿತು. ಅಂತೆಯೇ ಈಗಾಗಲೇ, ಹಲವು ರಾಜ್ಯಗಳಲ್ಲಿ ಖಾಸಗಿ ಬಂಡವಾಳಿಗರು ಸಂಪೂರ್ಣವಾಗಿ ಸರಬರಾಜು ಮತ್ತು ವಿತರಣೆಯನ್ನು ನಿಯಂತ್ರಿಸುತ್ತಿದ್ದಾರೆ ಮತ್ತು ಕೆಲವು ರಾಜ್ಯಗಳಲ್ಲಿ ಅವರು ಸರಬರಾಜಿನ ಮೇಲೆ ಭಾಗಶಃ ನಿಯಂತ್ರಣ ಹೊಂದಿದ್ದಾರೆ. ಆದರೆ ಈಗ ಪ್ರಮುಖ ವಲಯಗಳನ್ನು ಖಾಸಗೀಕರಣಗೊಳಿಸುವ ತನ್ನ ಧೂರ್ತ ಉದ್ದೇಶದ ಭಾಗವಾಗಿ ಪ್ರಸ್ತುತ ಬಿಜೆಪಿ ಸರ್ಕಾರವು, **ವಿದ್ಯುತ್ (ತಿದ್ದುಪಡಿ) ಮಸೂದೆ 2022**ನ್ನು ಜಾರಿಗೊಳಿಸಲು ಹೊರಟಿದೆ. ಆದರೆ ಗ್ರಾಹಕರ ಪ್ರಬಲ ಪ್ರತಿರೋಧದಿಂದಾಗಿ, ಅದರಲ್ಲೂ ದೇಶವ್ಯಾಪಿ ರೈತರ ಪ್ರತಿರೋಧದಿಂದಾಗಿ ಅದನ್ನು ಜಾರಿಗೊಳಿಸಲಾಗಲಿಲ್ಲ. ಸರ್ಕಾರಿ ಸ್ವಾಮ್ಯದ ವಿದ್ಯುತ್ ಸರಬರಾಜು ಕಂಪೆನಿಗಳ ಇಂಜಿನಿಯರ್‌ಗಳು ಮತ್ತು ಕಾರ್ಮಿಕರ ಉದ್ಯೋಗಗಳಿಗೆ ಕುತ್ತು ಬಂದಿದ್ದರಿಂದ ಅವರು ಕೂಡ ಅದನ್ನು ವಿರೋಧಿಸಿದರು. ಗೃಹಬಳಕೆ, ವಾಣಿಜ್ಯ, ಕೈಗಾರಿಕೆ ಮತ್ತು ಕೃಷಿ ಗ್ರಾಹಕರಿಗೆ ಬೇರೆ ಬೇರೆ ದರದ ಚಾರ್ಟ್ ಪ್ರಸ್ತುತ ಅಸ್ತಿತ್ವದಲ್ಲಿದೆ. ಆದರೆ ಹೊಸ ಮಸೂದೆಯು ಎಲ್ಲರಿಗೂ ಸಮಾನ ದರದ ಚಾರ್ಟಿನ ಪ್ರಸ್ತಾವನೆಯನ್ನು ಹೊಂದಿದೆ. ಇದೇ ಗುರಿಯ ಮೇಲೆ ಕಣ್ಣಿಟ್ಟಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ವಿತರಣಾ ವಲಯವನ್ನು ಪರಿಷ್ಕರಿಸಲು ಮುಂದಾಗಿದೆ ಮತ್ತು ಗ್ರಾಹಕರ ಜೀವನದಲ್ಲಿ ವ್ಯಾಪಕ ಹಾನಿ ಉಂಟು ಮಾಡಬಹುದಾದ **ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು (ಕೃತಕ ಬುದ್ಧಿಮತ್ತೆಯ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವ) ಅಳವಡಿಸಲು ನಿರ್ದೇಶನ ನೀಡಿದೆ.** ಇದರ ಸಹಾಯದಿಂದ ಸುಂಕವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. **ಪಕ್ಷಾತೀತವಾಗಿ ಯಾವ ರಾಜ್ಯ ಸರ್ಕಾರವು ಕೂಡ ಈ ಜನವಿರೋಧಿ ನೀತಿಯನ್ನು ಆಕ್ಷೇಪಿಸಿಲ್ಲ ಎಂಬುದನ್ನು ಓದುಗರು ಗಮನಿಸಬೇಕು.** ವಾಸ್ತವದಲ್ಲಿ, ಸಂಜೀವ್ ಗೋಯಂಕ ಮಾಲಿಕತ್ವದ ಸಿಇಎಸ್‌ಸಿಯು ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿ ಗ್ರಾಹಕರಿಂದ ಈಗಾಗಲೇ ಹೆಚ್ಚುವರಿ ಶುಲ್ಕವನ್ನು ಸಂಗ್ರಹಿಸಲು ಪ್ರಾರಂಭಿಸಿದೆ.

### ಸ್ಮಾರ್ಟ್ ಮೀಟರ್ ಪಿತೂರಿ

ಪೋಸ್ಟ್ ಪೇಯ್ಡ್, ಪ್ರಿಪೇಯ್ಡ್, **ಟಿ ಓ ಡಿ** (ಟೈಮ್ ಆಫ್ ದಿ ಡೇ) ವ್ಯವಸ್ಥೆ (ಅಂದರೆ ಒಂದೇ ದಿನದಲ್ಲಿ ಬೇರೆಬೇರೆ ಸಮಯಕ್ಕೆ ಬೇರೆ ಬೇರೆ ಶುಲ್ಕ), ಸಕ್ರಿಯ ಶುಲ್ಕ ವ್ಯವಸ್ಥೆ (ಬೇಡಿಕೆ ಹೆಚ್ಚಿದಂತೆ ಬೆಲೆಯಲ್ಲಿ ಹೆಚ್ಚಳ); ಒಂದು ಗುಂಪಿನ ಎಲ್ಲಾ ಮೀಟರ್‌ಗಳ ನಿಯಂತ್ರಣವನ್ನು ಒಂದು ಸೂಪರ್ ಕಂಪ್ಯೂಟರ್ ನೋಡಿಕೊಳ್ಳುತ್ತದೆ. **ಮೀಟರ್ ರೀಡಿಂಗ್‌ನ ಅವಶ್ಯಕತೆಯೇ ಇರುವುದಿಲ್ಲ** ಮತ್ತು ಗ್ರಾಹಕರಿಗೆ ಯಾವುದೇ ರೀತಿಯ ಕರೆಂಟ್ ಬಿಲ್ ಕೊಡುವುದಿಲ್ಲ. ಬದಲಿಗೆ ಪಾವತಿಸಬೇಕಾದ ಮೊತ್ತವು ಮೊಬೈಲ್ ಸ್ಕ್ರೀನ್ ಮೇಲೆ ಕಾಣಿಸುತ್ತದೆ. ಒಂದು ವೇಳೆ ಪ್ರೀಪೇಯ್ಡ್ ಮೀಟರ್‌ನಲ್ಲಿನ ಮೊತ್ತವು ಮಧ್ಯರಾತ್ರಿಯಲ್ಲಿ ಖಾಲಿಯಾದರೆ, ಸ್ವಯಂಚಾಲಿತವಾಗಿ ವಿದ್ಯುತ್ ಕಡಿತಗೊಳ್ಳುತ್ತದೆ ಅಥವಾ ಕಂಪನಿಯು ಕೃಪೆ ಮಾಡಿದರೆ 24 ರಿಂದ 48 ಗಂಟೆಗಳವರೆಗೆ ವಿಸ್ತರಣೆ ದೊರೆಯಬಹುದು. ಕೆಟ್ಟುಹೋದ ಮೀಟರ್ ಬದಲಾವಣೆ ಮಾಡಬೇಕಾದಲ್ಲಿ ಅಥವಾ ಕರೆಂಟ್ ಬಿಲ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಬೇಕಾದಲ್ಲಿ ಗ್ರಾಹಕರು ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಒಂದು ವೇಳೆ ಜನವಿರೋಧಿ **ವಿದ್ಯುತ್ ಮಸೂದೆ–2022** ಜಾರಿಯಾಗದಿದ್ದರೂ, ಈ ಸ್ಮಾರ್ಟ್ ಮೀಟರ್ ಅಳವಡಿಕೆಯು ವಿದ್ಯುತ್ ವಲಯದ ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತದೆ.




### ಈಗಾಗಲೇ ಶುಲ್ಕಗಳನ್ನು ಹೆಚ್ಚಿಸಲಾಗಿದೆ

ಹಲವು ರಾಜ್ಯ ಸರ್ಕಾರಗಳು ಹೊಸ ಮಸೂದೆಯು ಜಾರಿಗೊಳ್ಳಲು ಕಾಯುತ್ತಿಲ್ಲ. ಈಗಾಗಲೇ ಮಧ್ಯಪ್ರದೇಶ ಸರ್ಕಾರವು ಓವರ್ ಲೋಡ್ ದಂಡ ವಸೂಲಿ ಆರಂಭಿಸಿದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಲೋಡ್ ವಿದ್ಯುತ್ ಬಳಸಿದಲ್ಲಿ, ಗ್ರಾಹಕರು ದೊಡ್ಡ ಮೊತ್ತದ ದಂಡ ತರಬೇಕಾಗಿದೆ. ಇದನ್ನು ಸ್ಮಾರ್ಟ್ ಮೀಟರ್ ಮುಖಾಂತರ ನಿಯಂತ್ರಿಸಬಹುದಾಗಿದೆ. ಪಶ್ಚಿಮ ಬಂಗಾಳದಲ್ಲಿ, ಗ್ರಾಮೀಣ ವಾಣಿಜ್ಯ ವಲಯ ಶುಲ್ಕವನ್ನು ತೆಗೆದು ಹಾಕಲಾಗಿದೆ ಮತ್ತು 300 ಯೂನಿಟ್ ಮಿತಿಯವರೆಗೆ ಪ್ರತೀ ಯೂನಿಟ್‌ಗೆ 18 ಪೈಸೆಯಂತೆ ದರ ಹೆಚ್ಚಿಸಲಾಗಿದೆ.

ಕೆಲವು ರಾಜ್ಯಗಳಲ್ಲಿ **ಎಂವಿಸಿಎ (ಮಂತ್ಲಿ ವೇರಿಯಬಲ್ ಕಾಸ್ಟ್ ಅಡ್ಜಸ್ಟ್ಮೆಂಟ್)** ಮತ್ತು **ಎಫ್ ಪಿ ಸಿ ಎ (ಫ್ಯೂಯೆಲ್ ಅಂಡ್ ಪರ್ಚೇಸ್ ಕಾಸ್ಟ್ ಅಡ್ಜಸ್ಟ್ಮೆಂಟ್) ಹೆಸರಿನಲ್ಲಿ** ಹೆಚ್ಚುವರಿ ಮೀಟರ್ ಬಾಡಿಗೆ, ನಿಗದಿತ ಕನಿಷ್ಠ ಶುಲ್ಕ, ಸಿಬ್ಬಂದಿ ಹೆಚ್ಚುವರಿ ಶುಲ್ಕ ಇತ್ಯಾದಿ ಹೆಚ್ಚುವರಿ ಶುಲ್ಕವನ್ನು ಜಾರಿಗೊಳಿಸಿವೆ.

ಪಶ್ಚಿಮ ಬಂಗಾಳದಲ್ಲಿ, ರಾಜ್ಯ ವಿದ್ಯುತ್ ಸರಬರಾಜು ಕಂಪನಿಯು ಪ್ರತಿ ಯೂನಿಟ್‌ಗೆ ರೂ 2.16–2.70ರಂತೆ ಸಿ ಇ ಎಸ್ ಸಿ ಗೆ ವಿದ್ಯುತ್ ನೀಡಲು ಒಪ್ಪಿಕೊಂಡಿದೆ. ತನ್ಮೂಲಕ ಶೇಕಡಾ 16ರಷ್ಟು ಲಾಭವನ್ನು ತಾನು ಇಟ್ಟುಕೊಂಡು ಉಳಿದ 16% ಲಾಭವನ್ನು ರಾಜ್ಯ ಸಾರಿಗೆ ಇಲಾಖೆಗೆ ನೀಡುವುದಾಗಿ ಹೇಳಿದೆ.

### ಉತ್ಪಾದನಾ ವೆಚ್ಚದ ಉಬ್ಬರವನ್ನು ತೋರಿಸುವ ಕೈಚಳಕ

ಉಪಕರಣ, ಯಂತ್ರಗಳು ಮತ್ತು ಕಲ್ಲಿದ್ದಲು ಖರೀದಿಯಲ್ಲಿ ಅತಿ ಹೆಚ್ಚಿನ ಬೆಲೆಯನ್ನು ದಾಖಲಿಸಿ ಉತ್ಪಾದನಾ ವೆಚ್ಚವು ಹೆಚ್ಚಳಗೊಂಡಿದೆ ಎಂದು ತೋರಿಸಲಾಗುತ್ತಿದೆ. ಅದಾನಿ ಸಮೂಹ ಮತ್ತು ಎಸ್ಸಾರ್ ಸಮೂಹಗಳು ಈಗಾಗಲೇ ಈ ಕುರಿತು ಆಪಾದನೆಯನ್ನು ಎದುರಿಸುತ್ತಿವೆ ಮತ್ತು ಈ ವಿಷಯವಾಗಿ ವಿಸ್ತೃತ ತನಿಖೆ ಆರಂಭಿಸುವಂತೆ **ಸಿಬಿಐ ಮತ್ತು ಡಿ ಬಿ ಐ** ಗೆ ದೆಹಲಿ ಹೈಕೋರ್ಟು ನಿರ್ದೇಶಿಸಿದೆ. ವಿದ್ಯುತ್ ಉತ್ಪಾದನೆ ನಡೆಸಲು ದೇಶಕ್ಕೆ ಬೇಕಿರುವ ಒಟ್ಟು ಕಲ್ಲಿದ್ದಲನ್ನು ಸರಬರಾಜು ಮಾಡಲು ಸರ್ಕಾರವು ಸನ್ನದ್ಧವಾಗಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವರು ಹೇಳಿದ್ದಾರೆ. 5 ಡಿಸೆಂಬರ್ 2023ರಂದು ರಾಜ್ಯಸಭೆಯಲ್ಲಿ ಮಾತನಾಡುತ್ತ, ವಿದ್ಯುತ್ ಉತ್ಪಾದಕರು ಕನಿಷ್ಠ 6% ಕಲ್ಲಿದ್ದಲನ್ನು ವಿದೇಶದಿಂದ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ಕೇಂದ್ರ ವಿದ್ಯುತ್ ಸಚಿವರು ಹೇಳಿದ್ದಾರೆ. ಆದರೆ ವಿದ್ಯುತ್ ಉತ್ಪಾದನೆಗೆ ಬೇಕಾದ ಒಟ್ಟು ಕಲ್ಲಿದ್ದಲನ್ನು ತಾವು ವಿದೇಶಗಳಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಎಂದು ಅದಾನಿ, ಎಸ್ಸಾರ್ ಮತ್ತು ಇತರೆ ಖಾಸಗಿ ಉತ್ಪಾದಕರು ಯಾವಾಗಲೂ ಸುಳ್ಳು ಹೇಳುತ್ತಾರೆ. ಖಾಸಗಿಯವರೊಂದಿಗೆ ಪೈಪೋಟಿ ಕಾಯ್ದುಕೊಳ್ಳಲು ಹಲವು ಸರ್ಕಾರಿ ವಿದ್ಯುತ್ ಸರಬರಾಜು ಮತ್ತು ವಿತರಣಾ ಮಂಡಳಿಗಳು ಶುಲ್ಕವನ್ನು ಹೆಚ್ಚಿಸಿವೆ. ಉದಾಹರಣೆಗೆ, ಆರಂಭದಲ್ಲಿ 12% ಶುಲ್ಕ ಹೆಚ್ಚಿಸಲು ಬಯಸಿದ್ದ ಮಹಾರಾಷ್ಟ್ರ ವಿದ್ಯುತ್ ನಿಗಮವು 2024–25ನೇ ಸಾಲಿನಲ್ಲಿ 24% ಶುಲ್ಕ ಹೆಚ್ಚಿಸುವಂತೆ ಟಾಟಾ ವಿದ್ಯುತ್ ವಿತರಣಾ ಕಂಪನಿಗೆ ನಿರ್ದೇಶನ ನೀಡಿದೆ.

### ಬೆಳೆಯುತ್ತಿರುವ ವಿದ್ಯುತ್ ಗ್ರಾಹಕರ ಪ್ರಬಲ ಪ್ರತಿರೋಧ ಚಳವಳಿ

ಪಶ್ಚಿಮ ಬಂಗಾಳದಲ್ಲಿ **ಆಲ್ ಬೆಂಗಾಲ್ ಎಲೆಕ್ಟ್ರಿಸಿಟಿ ಕನ್ಸ್ಯೂಮರ್ಸ್ ಅಸೋಸಿಯೇಷನ್(ಅಬೆಕಾ),** ಎಂಬ ಸಾರ್ವಜನಿಕ ಸಮಿತಿಯು ಜನರ ಹಿತಾಸಕ್ತಿಗೆ ವಿರುದ್ಧವಾಗಿರುವ ವಿದ್ಯುತ್ ನೀತಿ ಮತ್ತು ನಿಯಮಾವಳಿಗಳ ವಿರುದ್ಧ ನಿರಂತರ ಹೋರಾಟಗಳನ್ನು ಬೆಳೆಸುತ್ತಿದೆ. ಜನರ ಪ್ರತಿರೋಧದಿಂದಾಗಿ ಹಲವೆಡೆ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ಜಾರಿಗೊಳಿಸಲಾಗಿಲ್ಲ. ಇದರೊಂದಿಗೆ, ನಿಗದಿತ ಶುಲ್ಕದಲ್ಲಿ ಎರಡು ಪಟ್ಟು ಹೆಚ್ಚಳ ಮತ್ತು ಕನಿಷ್ಠ ಶುಲ್ಕದಲ್ಲಿ ಮೂರು ಬಾರಿ ಹೆಚ್ಚಳ, ಅದರಲ್ಲೂ ಸಣ್ಣ ಕೈಗಾರಿಕೆ (ಪ್ರತಿ ತಿಂಗಳು ಪ್ರತಿ ಕೆವಿಎ ಗೆ ರೂ. 200) ಮತ್ತು ಕೃಷಿಯ ಶುಲ್ಕಗಳಲ್ಲಿನ (ಪ್ರತಿ ತಿಂಗಳು ಪ್ರತಿ ಕೆವಿಎ ಗೆ ರೂ. 75) ಹೆಚ್ಚಳದ ವಿರುದ್ಧ ಚಳವಳಿಯನ್ನು ಸಂಘಟಿಸಲಾಗಿದೆ. **ಎಫ್ ಪಿ ಪಿ ಸಿ ಎ ಮತ್ತು ಎ ಪಿ ಆರ್** ಖಾತೆಗಳ ದುರುಪಯೋಗ ಮತ್ತು ಗ್ರಾಹಕರಿಂದ ಹೆಚ್ಚಿನ ಮೊತ್ತ ವಸೂಲಿಯ ವಿರುದ್ಧ ಕೊಲ್ಕತ್ತಾದ ಸಿಇಎಸ್‌ಸಿ **ಪ್ರಧಾನ ಕಚೇರಿಯ ಎದುರುಗಡೆ ಪ್ರತಿಭಟನೆ ನಡೆಸಲಾಗಿದೆ.**

ಅಸ್ಸಾಂನಲ್ಲಿ ಕಳೆದ ಎರಡು ವರ್ಷಗಳಿಂದ ಗ್ರಾಹಕರ ಪ್ರತಿಭಟನಾ ಚಳುವಳಿಯು ಮುಂದುವರೆದಿದೆ. ಕಳೆದ ಮೂರು ತಿಂಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಸಹಿ ಸಂಗ್ರಹಿಸಿ ಅಲ್ಲಿನ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ. ಫೀಡರ್ ಲೈನ್‌ನಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಯ ವಿರುದ್ಧ ಜನಸಮೂಹದಿಂದ ಪ್ರತಿರೋಧ ವ್ಯಕ್ತವಾಗಿದೆ. ಇದರ ಒತ್ತಡಕ್ಕೆ ಮಣಿದು ಅಸ್ಸಾಂ ಸರ್ಕಾರವು ಪ್ರತಿಯೂನಿಟ್‌ಗೆ 1ರೂ. ಶುಲ್ಕವನ್ನು ಇಳಿಸಿದೆ.

ಕರ್ನಾಟಕದಲ್ಲಿ ವಿದ್ಯುತ್ ಬಳಕೆದಾರರ ಹೋರಾಟವನ್ನು ಸಂಘಟಿಸಲು ಜಿಲ್ಲಾ ಸಮಿತಿಗಳನ್ನು ರಚಿಸಲಾಗಿದೆ. ಗ್ರೆಗೋರ್ ಕಮಿಟಿಯ ನೇತೃತ್ವದಲ್ಲಿ ಕರ್ನಾಟಕ ವಿದ್ಯುತ್ ಆಯೋಗದೊಂದಿಗೆ ಹಲವಾರು ಸಭೆಗಳು ನಡೆದಿದೆ. ಹಲವು ಸಣ್ಣ ವ್ಯಾಪಾರಿಗಳು ಮತ್ತು ಉದ್ಯಮಿಗಳು ಚಳುವಳಿಯನ್ನು ಸೇರಲು ಮುಂದೆ ಬಂದಿದ್ದಾರೆ. ತತ್ಪರಿಣಾಮವಾಗಿ ನಿತ್ಯ ಬಳಕೆಗೆ 200 ಯೂನಿಟ್ ಮತ್ತು ಕೃಷಿ ಬಳಕೆಗಾಗಿ 10 ಎಚ್ ಪಿ ಲೋಡ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಘೋಷಿಸಬೇಕಾಯಿತು.

ಮಧ್ಯಪ್ರದೇಶದ ಗ್ವಾಲಿಯರ್, ಗುನಾ ಮತ್ತು ಭೂಪಾಲ್‌ನಲ್ಲಿ ಚರ್ಚೆಗಳನ್ನು ಸಂಘಟಿಸಲಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಜಿಲ್ಲಾ ಗ್ರಾಹಕರ ಸಮಿತಿಗಳನ್ನು ರಚಿಸಲಾಗಿದೆ.

ಕರ್ನಾಟಕ ಮತ್ತು ಮಧ್ಯಪ್ರದೇಶ ಎರಡರಲ್ಲೂ ಹಲವಾರು ಪ್ರಖ್ಯಾತ ಬುದ್ಧಿಜೀವಿಗಳು ಮತ್ತು ನಿವೃತ್ತ ಇಂಜಿನಿಯರ್‌ಗಳು ಹೋರಾಟವನ್ನು ಸೇರಿಕೊಂಡಿದ್ದಾರೆ.

ಹರಿಯಾಣದಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಲಾಗಿದೆ ಮತ್ತು ಮುಖ್ಯಮಂತ್ರಿ ಹಾಗೂ ಹಲವಾರು ಜಿಲ್ಲಾಧಿಕಾರಿಗಳ ಕಚೇರಿಗಳಿಗೆ ನಿಯೋಗವು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದೆ.

ಕೇರಳದಲ್ಲಿ ಚರ್ಚೆಗಳನ್ನು ಆಯೋಜಿಸಲಾಗುತ್ತಿದೆ ಮತ್ತು ಸ್ಮಾರ್ಟ್ ಮೀಟರ್ ವಿರುದ್ಧ ಜನರ ಅಭಿಪ್ರಾಯವನ್ನು ಸಂಗ್ರಹಿಸಲಾಗುತ್ತಿದೆ.

ದೆಹಲಿಯಲ್ಲಿ ಇಲ್ಲಿಯವರೆಗೂ ಸ್ಮಾರ್ಟ್ ಮೀಟರ್ ಅಳವಡಿಸದೆ ಇರುವ ಮೂರು ಸ್ಥಳಗಳಲ್ಲಿ ಗ್ರಾಹಕ ಸಂಘಟನೆಗಳನ್ನು ರಚಿಸಲಾಗುತ್ತದೆ.

ಪಾಂಡಿಚೇರಿಯಲ್ಲಿ ಸರ್ಕಾರಿ ಒಡೆತನದ ವಿದ್ಯುತ್ ಘಟಕಗಳ 51% ಷೇರುಗಳನ್ನು ಖಾಸಗಿಯವರಿಗೆ ಮಾರುವುದರ ಮೂಲಕ ಖಾಸಗೀಕರಣಕ್ಕೆ ಚಾಲನೆ ನೀಡಲಾಗಿತ್ತು. ಆದರೆ, ಗ್ರಾಹಕರ ಪ್ರತಿಭಟನೆಯಿಂದಾಗಿ ಸರ್ಕಾರವು ಈ ಪ್ರಸ್ತಾವನೆಯನ್ನು ಮುಂದೂಡಬೇಕಾಯಿತು.

ತಮಿಳುನಾಡಿನಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಲು ಸರ್ಕಾರ ಅಸಮ್ಮತಿಯನ್ನು ಸೂಚಿಸಿದೆ. ರಾಜ್ಯದಲ್ಲಿ 100 ಯೂನಿಟ್‌ವರೆಗೆ ವಿದ್ಯುತ್ ಉಚಿತವಾಗಿ ದೊರೆಯುತ್ತಿದೆ.

ಉತ್ತರ ಪ್ರದೇಶದ ಹಲವು ಭಾಗಗಳಲ್ಲಿ ಮೀಟರ್ ಹೊಂದಿರದ ವಿದ್ಯುತ್ ಸಂಪರ್ಕಗಳಿವೆ. ಪ್ರತಿ ತಿಂಗಳು ನಿಗದಿತ ಮೊತ್ತವನ್ನು ಚಾರ್ಜ್ ಮಾಡಲಾಗುತ್ತಿದೆ. ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ಆರಂಭಿಸಲಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಗ್ರಾಹಕರಿಂದ ಪ್ರತಿರೋಧಾತ್ಮಕ ಕೆಲಸಗಳು ಆರಂಭವಾಗಿವೆ.

ತ್ರಿಪುರಾದಲ್ಲಿ ಸಂಪರ್ಕ ಲೋಡ್‌ನ ನವೀಕರಣವನ್ನು ಆರಂಭಿಸಲಾಗಿದೆ ಮತ್ತು ಹೆಚ್ಚುವರಿ ಸುರಕ್ಷಾ ಇಡುಗಂಟ (ಡಿಪಾಸಿಟ್)ನ್ನು ವಿಧಿಸಲಾಗಿದೆ. ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ಆರಂಭಿಸಲಾಗಿದೆ. ಎರಡು ತಿಂಗಳ ಆನ್‌ಲೈನ್ ಪಾವತಿಯ ನಂತರ ಮೂರನೆಯ ಆಫ್ ಲೈನ್ ಪಾವತಿಯ ವೇಳೆಯಲ್ಲಿ ಮೂರು ತಿಂಗಳ ಜಿಎಸ್‌ಟಿಯನ್ನು ಪಾವತಿಸುವಂತೆ ಗ್ರಾಹಕರಿಗೆ ಒತ್ತಾಯಿಸಲಾಗಿದೆ. ಅಲ್ಲಿಯೂ ಪ್ರತಿರೋಧ ಭಗಿಲೆದ್ದಿದೆ.

ಮುಂಬರುವ ದಿನಗಳಲ್ಲಿ, **ಅಖಿಲ ಭಾರತ ವಿದ್ಯುತ್ ಗ್ರಾಹಕರ ಅಸೋಸಿಯೇಷನ್ (ಆಲ್‌ಇಂಡಿಯಾ ಎಲೆಕ್ಟ್ರಿಸಿಟಿ ಕನ್ಸ್ಯೂಮರ್ಸ್ ಅಸೋಸಿಯೇಷನ್)** ಮತ್ತು ಅದರ ಅಡಿಯಲ್ಲಿ ವಿವಿಧ ರಾಜ್ಯ ಮಟ್ಟದ ಕಮಿಟಿಗಳು ಹೋರಾಟವನ್ನು ಉನ್ನತ ಮಟ್ಟಕ್ಕೆ ಬೆಳೆಸುವ ಮತ್ತು ಈ ಮೂಲಕ ಈ ಕರಾಳ ನಡೆಯನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರಗಳನ್ನು ಮಣಿಸುವ ಸಂಕಲ್ಪ ಹೊಂದಿವೆ.

# ಕಾರ್ಪೊರೇಟ್ ಕಂಪೆನಿಗಳ ಲಾಭದಾಹಕ್ಕೆ ಕಾಡುಗಳು ಮತ್ತು ಅರಣ್ಯವಾಸಿಗಳ ಬಲಿ

ದೇಶದ 20 ಕೋಟಿಗೂ ಹೆಚ್ಚು ಜನರು ತಮ್ಮ ಕನಿಷ್ಠ ಬದುಕಿಗಾಗಿ ಕಾಡುಗಳನ್ನು ನೇರವಾಗಿ ಅವಲಂಬಿಸಿದ್ದಾರೆ. ಸಮಯ ಬಂದಂತೆಲ್ಲಾ, ಎಲ್ಲಾ ಪಕ್ಷಗಳೂ ಇವರ ಉದ್ಧಾರದ ಹಗಲುಗನಸನ್ನು ಅವರಿಗೆ ತೋರಿಸುತ್ತಾ ಅವರನ್ನು ತಮ್ಮ ಮತಬ್ಯಾಂಕ್‌ಗಳಾಗಿ ಪರಿವರ್ತಿಸಿಟ್ಟುಕೊಂಡಿದ್ದಾರೆಯೇ ವಿನ: ಅವರ ನಿಜವಾದ ಉದ್ಧಾರಕ್ಕೆ ತಮ್ಮ ಕಿರುಬೆರಳನ್ನೂ ಎತ್ತಿಲ್ಲ.

ಅರಣ್ಯ ನೈಸರ್ಗಿಕ ಸಂಪನ್ಮೂಲದ ಖಜಾನೆ. ದೇಶದ ಎಲ್ಲಾ ಏಕಸ್ವಾಮ್ಯಾಧಿಪತಿ ಬಂಡವಾಳಶಾಹಿ ಮನೆತನಗಳು ಈ ಖಜಾನೆಗಳಿಗೆ ಕೈಹಾಕಿ ಅವನ್ನು ತಮ್ಮ ಖಾಸಗಿ ಸ್ವತ್ತನ್ನಾಗಿಸಿಕೊಳ್ಳುವ ತವಕದಲ್ಲಿವೆ. ಈ ಉದ್ದೇಶಕ್ಕಾಗಿ ಆದಿವಾಸಿಗಳನ್ನು ಅವರ ಮನೆಗಳಿಂದ ಒಕ್ಕಲೆಬ್ಬಿಸುವುದಲ್ಲದೇ, ಎಗ್ಗುಸಿಗ್ಗಿಲ್ಲದೆ ಅರಣ್ಯನಾಶ ಮಾಡಲೂ ಸಹ ಅವರಿಗೆ ಕಿಂಚಿತ್ತೂ ಹಿಂಜರಿಕೆಯಿಲ್ಲ. ಕಳೆದ 30 ವರ್ಷಗಳಲ್ಲಿ ಕಾಡುಗಳು ವಿಪರೀತವಾಗಿ ನಾಶವಾಗಿವೆ. 2015–2020ರ ನಡುವೆ ಈ ವಿನಾಶದ ಪ್ರಕ್ರಿಯೆಯ ಗತಿಯು ತಾರಕಕ್ಕೇರಿತ್ತು. 'ಯುಟಿಲಿಟಿ ಬಿಡ್ಡರ್' ಎಂಬ ಇಂಧನ ಮತ್ತು ಬಳಕೆ ವೆಚ್ಚಗಳನ್ನು ಹೋಲಿಸಿ ಅಧ್ಯಯನ ನಡೆಸುವ ಇಂಗ್ಲೆಂಡ್‌ನ ಸಂಸ್ಥೆಯೊಂದರ ಪ್ರಕಾರ ಜಗತ್ತಿನಲ್ಲೇ ಬ್ರೆಜಿಲ್ ನಂತರ ವರ್ಷಕ್ಕೆ 6,68,400 ಹೆಕ್ಟೇರ್ ಅರಣ್ಯ ನಾಶವನ್ನು ಅನುಭವಿಸುತ್ತಿರುವ ದೇಶವೆಂದರೆ ಅದು ಭಾರತವಾಗಿದೆ.

ಉದಾಹರಣೆಗೆ, ಛತ್ತೀಸ್‌ಗಡದ ಅರಣ್ಯಗಳಲ್ಲಿ ಅಂದಾಜಿನಂತೆ ಸರಿಸುಮಾರು 6 ಶತಕೋಟಿ ಟನ್ ಕಲ್ಲಿದ್ದಲು ಸ್ಥಾವರವಿದೆ. ಮೇಲ್ಪದರಕ್ಕೆ ಹತ್ತಿರವಾಗಿಯೇ ಖನಿಜವು ಇರುವುದರಿಂದ ಗಣಿಗಾರಿಕೆ ಸುಲಭ. ಇಡೀ ಪ್ರದೇಶವನ್ನು 23 'ಕಲ್ಲಿದ್ದಲು ವಿಭಾಗ'ಗಳನ್ನಾಗಿ ವಿಂಗಡಿಸಿ 6 ವಿಭಾಗಗಳಲ್ಲಿ ಗಣಿಗಾರಿಕೆಗಾಗಿ ಅನುಮತಿ ನೀಡಲಾಗಿದೆ. ಅವುಗಳಲ್ಲಿ 4 ವಿಭಾಗಗಳ ಗುತ್ತಿಗೆಯನ್ನು ಅದಾನಿ ಕಂಪೆನಿಯು ಈಗಾಗಲೇ ಬಾಚಿಕೊಂಡಿದೆ. ಈ ಗಣಿಗಾರಿಕೆಯಿಂದಾಗಿ 1898 ಹೆಕ್ಟೇರ್ ಪ್ರದೇಶದ ಅರಣ್ಯವು ನಾಶವಾಗಲಿದೆ. ಈಗಾಗಲೇ ಸುಮಾರು 4 ಲಕ್ಷಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದೆ. ಆದಿವಾಸಿಗಳ ಬದುಕು ಮರಗಳನ್ನು ಅವಲಂಬಿಸಿರುತ್ತದೆ. ಹೀಗೆ, ಅವರ ಬದುಕಿನ ಮೂಲ ಪರಿಕರವನ್ನೇ ಕಸಿದುಕೊಂಡಂತಾಗಿದೆ. ಕೆಲವೊಮ್ಮೆ ಹಣದ ಆಮಿಷ ತೋರಿಸಿ, ಇನ್ನು ಕೆಲವೊಮ್ಮೆ ಪೊಲೀಸ್ ಅಟ್ಟಹಾಸ ಮೆರೆದು ಕುತಂತ್ರ, ನಿರ್ಲಜ್ಜ ವಿಧಾನಗಳಿಂದ ಅದಾನಿ ಕಂಪೆನಿಯು ಆ ನೆಲವನ್ನೆಲ್ಲಾ ಕಬಳಿಸಿದೆ.

ಕಳೆದ ಒಂದು ದಶಕದಿಂದ ಆದಿವಾಸಿಗಳು ಕಲ್ಲಿದ್ದಲು ಗಣಿಗಾರಿಕೆ ವಿರೋಧಿಸಿ ಹೋರಾಟದ ಕಣದಲ್ಲಿದ್ದಾರೆ. ಸ್ಥಳೀಯರ ಬದುಕು ಕಸಿದುಕೊಳ್ಳುವ ಹಾಗೂ ಅರಣ್ಯನಾಶದ ಕುರಿತಾಗಿ ಸ್ವತಃ ಸರ್ಕಾರಿ ಸಂಸ್ಥೆಗಳೇ ಮುನ್ನೆಚ್ಚರಿಕೆಯನ್ನು ನೀಡಿಯೂ ಸಹ, ಅವನ್ನು ಕಡೆಗಣಿಸಿ, ಕಳೆದ ವರ್ಷ ಗಣಿಗಾರಿಕೆಗೆ ಅಂತಿಮ ಹಸಿರು ನಿಶಾನೆ ತೋರಿಸಲಾಗಿದೆ. ಇದನ್ನು ವಿರೋಧಿಸಿ ಕಳೆದ 2022ರ ಮಾರ್ಚ್ 2ರಿಂದ ಆದಿವಾಸಿಗಳ ಹೋರಾಟ ನಡೆಯುತ್ತಿದೆ. ಸುರ್‌ಗುಜಾ ಜಿಲ್ಲೆಯಲ್ಲಿರುವ ಹರಿಹರಪುರ ಎಂಬ ಹಳ್ಳಿಗೆ ಸಾಗುವ ಹೆದ್ದಾರಿಯ ಬದಿಯಲ್ಲಿ ಟೆಂಟ್‌ನ್ನು ಹಾಕಿ ಫತೇಪುರ್, ಘಾಟ್‌ಬರ್ರಾ ಹಾಗೂ ಸಾಲ್ಹಿ ಎಂಬ ಹಳ್ಳಿಗಳಿಂದ ನಿವಾಸಿಗಳು ಪ್ರತಿದಿನವೂ ಬಂದು ಪ್ರತಿಭಟನೆ ನಡೆಸುತ್ತಾರೆ. ವಾರಕ್ಕೊಮ್ಮೆ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿ 'ಅದಾನಿ ವಾಪಸ್ಸಾಗಲಿ' ಎಂಬ ಘೋಷಣೆ ಕೂಗುತ್ತಾರೆ. ಇತ್ತೀಚೆಗೆ ಜಾರಿಗೆ ತರಲಾದ ಅರಣ್ಯ ಕಾಯಿದೆಯು ಈ ಮಟ್ಟದ ಅರಣ್ಯನಾಶಕ್ಕೆ ಸಂಪೂರ್ಣ ಅಸ್ತು ನೀಡಿದೆ. ಎರಡು ವರ್ಷಗಳ ಹಿಂದೆ ಪ್ರಧಾನಿ ಮೋದಿ ಭಾರತವನ್ನು 'ಹಸಿರು ಶಕ್ತಿ ಕೇಂದ್ರ'ವನ್ನಾಗಿಸುವ ಮಾತನ್ನಾಡಿದ್ದರು. 2070ರ ಒಳಗೆ ಇಂಗಾಲದ ಡಯಾಕ್ಸೈಡ್ ಹೊರಸೂಸುವಿಕೆಯನ್ನು ಸಂಪೂರ್ಣ ಕಡಿಮೆ ಮಾಡಿ ಹಸಿರು ಮನೆ ಅನಿಲಗಳ ಉತ್ಪತ್ತಿ ಪ್ರಮಾಣವನ್ನು ಶೂನ್ಯಕ್ಕೆ ಕುಗ್ಗಿಸುವ 'ಶಪಥ' ಮಾಡಿದ್ದರು. 2030ರ ಹೊತ್ತಿಗೆ ಭಾರತದ ಒಟ್ಟಾರೆ ಇಂಧನದ ಅವಶ್ಯಕತೆಯನ್ನು ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳಿಂದಲೇ ಭರಿಸುವ ಹಾಗೂ ಅಂದಾಜು ಇಂಗಾಲದ ಉತ್ಪತ್ತಿಯನ್ನು ಒಂದು ಶತಕೋಟಿ ಟನ್‌ನಷ್ಟು ಇಳಿಸುವ ಆಶ್ವಾಸನೆ ನೀಡಿದ್ದರು. ಆದರೆ ನಿರ್ಗತಿಕರಾಗುತ್ತಿರುವ ಆದಿವಾಸಿಗಳ ಆಕ್ರಂದನಕ್ಕೆ ಕಿವಿಗೊಡದೆ, ನೈಸರ್ಗಿಕ ಹಾನಿ ಕುರಿತಾಗಿ ಕಳಕಳಿಯಿಲ್ಲದೆ ಅದಾನಿ ಕಂಪನಿಯು ಇಂದು ಅರಣ್ಯಗಳ ಲೂಟಿ ನಡೆಸುತ್ತಿದೆ.

ಆದಿವಾಸಿಗಳಿಗೆ ಗೌರವ ಸೂಚಕವೆಂಬಂತೆ ಕೇಂದ್ರ ಬಿಜೆಪಿ ಸರ್ಕಾರವು 'ಆದಿವಾಸಿಗಳ ವೈಭವದ ದಿನ'ವನ್ನು ಆಚರಿಸಿತು. ಮೂಲನಿವಾಸಿಗಳ ಉದ್ಧಾರಕ್ಕಾಗಿ "ಜನಮನ ಮಿಷನ್" ಎಂಬ ಯೋಜನೆಯನ್ನೂ ಘೋಷಿಸಲಾಗಿದೆ. ಅವರ ಸಬಲೀಕರಣಕ್ಕಾಗಿ ಮತ್ತು ಅವರ ಆರ್ಥಿಕ ಅಭಿವೃದ್ಧಿಗಾಗಿ ಅರಣ್ಯ ಉತ್ಪತ್ತಿಗಳನ್ನು ಮಹಿಳಾ ಸ್ವಸಹಾಯ ಗುಂಪುಗಳು ಮಾರಿ ಅವರ ಆದಾಯಕ್ಕೆ ಅವಕಾಶ ಕಲ್ಪಿಸುವ ಯೋಜನೆಗಳನ್ನು ಕೇಂದ್ರ ಸರ್ಕಾರವು ಘೋಷಣೆಯೇನೋ ಮಾಡಿ ಆಗಿದೆ. ಆದರೆ, ಈ ಎಲ್ಲಾ ಘೋಷಣೆ ಭಾಷಣಗಳ ಹಿಂದಿರುವುದು ಮಾತ್ರ ಅರಣ್ಯದ ಮೇಲಿನ ಅರಣ್ಯವಾಸಿಗಳ ಹಕ್ಕುಗಳಿಂದ ಅವರನ್ನು ವಂಚಿಸುವ ಹುನ್ನಾರ. ಇಲ್ಲಿಯವರೆಗೂ, ಈ ಹಕ್ಕು ಅವರಿಗೆ ಕನಿಷ್ಠ ಬದುಕನ್ನು ಸೃಷ್ಟಿಸಿಕೊಳ್ಳುವ ಒಂದು ದಾರಿಯಾಗಿತ್ತು. ಆದರೆ ಕೇಂದ್ರ ಬಿಜೆಪಿ ಸರ್ಕಾರವು ಸಂಸತ್ತಿನಲ್ಲಿ ಯಾವ ಚರ್ಚೆಗೂ ಅವಕಾಶ ನೀಡದೆ 26 ಜುಲೈ 2023ರಲ್ಲಿ ಹೊಸ ಅರಣ್ಯ ಕಾಯಿದೆಯನ್ನು ಜಾರಿಗೆ ತಂದು ತನ್ನ ಕಾರ್ಪೊರೇಟ್ ಮಿತ್ರರಿಗೆ ಅರಣ್ಯವನ್ನೂ ಲೂಟಿ ಮಾಡಲು ಅನುಕೂಲ ಮಾಡಿಕೊಟ್ಟಿತು.

ಈ ವಿಧೇಯಕವನ್ನು ಅಂಗೀಕರಿಸಿದ 15 ದಿನಗಳೊಳಗೆ ನಡೆದ ಕೆಲವು ಘಟನಾವಳಿಗಳು ಬಿಜೆಪಿ ಸರ್ಕಾರ ಮತ್ತು ಏಕಸ್ವಾಮ್ಯ ಬಂಡವಾಳಶಾಹಿ ದೈತ್ಯರ ಕುತ್ಸಿತ ಯೋಜನೆಯನ್ನು ಬಯಲಿಗೆಳೆದಿವೆ. ಪರಿಸರ ಮಾಲಿನ್ಯ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಈಗಾಗಲೇ ಮೊಕದ್ದಮೆಯನ್ನು ಎದುರಿಸುತ್ತಿರುವ ಕುಖ್ಯಾತ ವೇದಾಂತ ಸಮೂಹವು ಒಡಿಶಾ ರಾಜ್ಯದ ರಾಯಗಢ ಜಿಲ್ಲೆಯ ಸಿಜ್ಮಾಲಿ ಪರ್ವತದ ಅರಣ್ಯವನ್ನು ಸಂಪೂರ್ಣ ಕಬಳಿಸಲು ಮುಂದಾಗಿದೆ. ಅದಾನಿ ಗುಂಪು ರಾಯಗಢ ಮತ್ತು ಒಡಿಶಾದ ಕಾಳಹಂಡಿಯ ಕುಕ್ರೊಮಾಲಿ ಪರ್ವತದ ಮೇಲಿರುವ ಅರಣ್ಯವನ್ನು ಆಕ್ರಮಿಸಿಕೊಳ್ಳಲು ಮುಂದಾಗಿದೆ. ಅಲ್ಲಿನ ಗ್ರಾಮಸ್ಥರ ಪ್ರತಿರೋಧ ವ್ಯಕ್ತವಾಗುತ್ತಿದ್ದಂತೆ ಪೊಲೀಸರು ಪ್ರತಿಭಟನಾನಿರತ ಮೂಲನಿವಾಸಿ ಯುವಕರಿಗೆ ಚಿತ್ರಹಿಂಸೆ ನೀಡಿದ್ದಲ್ಲದೇ ಅವರ ವಿರುದ್ಧ ವಿವಿಧ ಜಾಮೀನು ರಹಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ. ಈ ಎರಡು ಯೋಜನೆಗಳನ್ನು ಕಾರ್ಯಗತಗೊಳಿಸಲು ಮೂಲನಿವಾಸಿಗಳ 180 ಹಳ್ಳಿಗಳೂ ಒಳಗೊಂಡಂತೆ 2 ಕೆರೆಗಳನ್ನೂ ಸಹ ಅವರು ತೆರವುಗೊಳಿಸಲಿದ್ದಾರೆ. ಬುಡಕಟ್ಟು ಆದಿವಾಸಿ ಜನಾಂಗದ ಬದುಕಿಗೆ ಮಾರಕವಾಗುತ್ತಿರುವ ಈ ಯೋಜನೆಗಳ ವಿರುದ್ಧ ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್, ಗುಜರಾತ್, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಜನಹೋರಾಟಗಳು ಭುಗಿಲೆದ್ದಿವೆ. ಅರಣ್ಯವಾಸಿಗಳ ಹಕ್ಕು ಸಂರಕ್ಷಿಸುವ ಹಾಗೂ ಪರಿಸರ ಸಮತೋಲನ ಕಾಪಾಡುವ ಆಂದೋಲನಗಳು ಒಂದಕ್ಕೊಂದು ಪೂರಕವಾಗಿವೆ. ಆದರೆ ತಾರ್ಕಿಕ ಪರಾಕಾಷ್ಠೆಯನ್ನು ತಲುಪಲು ಸರಿಯಾದ ಸೈದ್ಧಾಂತಿಕ–ರಾಜಕೀಯ ನಾಯಕತ್ವದ ಅಡಿಯಲ್ಲಿ ಸಂಘಟಿತರಾಗಿ ನಿರಂತರ ಪ್ರಬಲ ಹೋರಾಟ ಬೆಳೆಸಬೇಕು.

# ಎಐಡಿಎಸ್‌ಓ ರಾಜ್ಯ ಮಟ್ಟದ ಕಾರ್ಯಕರ್ತರ ಶಿಬಿರ

## ಸಮಾಜದಲ್ಲಿರುವ ಅಸಮಾನತೆಯನ್ನು ತೊಲಗಿಸಲು ವಿದ್ಯಾರ್ಥಿಗಳು ಹೋರಾಟವನ್ನು ಕಟ್ಟಬೇಕು – ಕೆ.ರಾಧಾಕೃಷ್ಣ

ದೊಡ್ಡ ಬಳ್ಳಾಪುರದ ಸ್ಕೌಟ್ ಅಂಡ್ ಗೈಡ್ಸ್ ಕ್ಯಾಂಪಸ್‌ನಲ್ಲಿ ನಡೆದ ಎಐಡಿಎಸ್‌ಓ ರಾಜ್ಯ ಮಟ್ಟದ ಕಾರ್ಯಕರ್ತರ ಶಿಬಿರವನ್ನು ಎಐಡಿಎಸ್‌ಓನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾ. ಸೌರವ್ ಘೋಷ್ ಉದ್ಘಾಟಿಸಿದರು. ಸಾರ್ವಜನಿಕ ಶಿಕ್ಷಣ ಉಳಿಸಲು, ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ




ಕಾ.ಅಜಯ್ ಕಾಮತ್, ಕಾ.ಅಶ್ವಿನಿ ಕೆ.ಎಸ್, ಕಾ. ಕೆ.ರಾಧಾಕೃಷ್ಣ, ಕಾ. ಕೆ.ಉಮಾ, ಕಾ.ಸೌರವ್ ಘೋಷ್ (ಎಡದಿಂದ ಬಲಕ್ಕೆ)

ಹೋರಾಡಲು, ಈ ದೇಶದ ಮಹಾನ್ ಕ್ರಾಂತಿಕಾರಿಗಳ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಂಡು ಮಾನವತೆ ಮತ್ತು ಸಂಸ್ಕೃತಿ ಉಳಿಸುವ ಜವಬ್ದಾರಿಯನ್ನು ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕೆಂದು ಅವರು ಕರೆ ನೀಡಿದರು.

ಅಖಿಲ ಭಾರತ ಅಧ್ಯಕ್ಷರಾದ ಕಾ. ವಿ. ಎನ್ ರಾಜಶೇಖರ್ ಅವರು 'ಸಾಮಾಜಿಕ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ' ವಿಷಯದ ಕುರಿತು ಮಾತನಾಡಿ, ಇತ್ತೀಚೆಗೆ ನಡೆದ ಐತಿಹಾಸಿಕ ಬಾಂಗ್ಲಾದೇಶದ ವಿದ್ಯಾರ್ಥಿಗಳ ನೈಜ ಹೋರಾಟ ನಮಗೆಲ್ಲರಿಗೂ ಸ್ಫೂರ್ತಿ ತುಂಬಿದೆ. ಇದು ಪ್ರತಿ ಅನ್ಯಾಯದ ವಿರುದ್ಧ ನ್ಯಾಯ ಸ್ಥಾಪಿಸಲು ನಿರಂತರವಾದ ಒಗ್ಗಟ್ಟಿನ ಹೋರಾಟ ಮಹತ್ವಪೂರ್ಣ ಪಾತ್ರ ವಹಿಸುತ್ತದೆ ಎಂಬುದನ್ನು ತೋರಿಸಿದೆ ಎಂದರು.

'ವಿದ್ಯಾರ್ಥಿ ಜೀವನದಲ್ಲಿ ಸಾಹಿತ್ಯದ ಪಾತ್ರ' ಎಂಬ ವಿಷಯದ ಕುರಿತು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ಮಾತನಾಡಿದರು. ಸಾಂಸ್ಕೃತಿಕವಾಗಿ ಹದಗೆಡುತ್ತಿರುವ ಇಂದಿನ ಸಮಾಜದ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಚಿಕ್ಕವಯಸ್ಸಿನ ಮಕ್ಕಳು ಸಹ ಅನೇಕ ದುಶ್ಚಟಗಳಿಗೆ ಬಲಿಯಾಗಿ ಕುಸಂಸ್ಕೃತಿ ಹೆಚ್ಚುತ್ತಿದ್ದು, ಅಪರಾಧಿ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ದುರಂತ. ಪ್ರಸ್ತುತ ವ್ಯವಸ್ಥೆಯು ವಿದ್ಯಾರ್ಥಿಗಳ ಸಾಂಸ್ಕೃತಿಕ ಬೆನ್ನೆಲುಬನ್ನು ಮುರಿಯಲು ದೃಶ್ಯ ಮಾಧ್ಯಮದ ಮೂಲಕ ಅಶ್ಲೀಲತೆಯನ್ನು ಬಿತ್ತುತ್ತಿದೆ. ಇದಕ್ಕೆ ಪರ್ಯಾಯವಾಗಿ ಉನ್ನತ ನೀತಿ– ನೈತಿಕತೆಯನ್ನು ಬಿತ್ತಲು ಶರತ್ ಚಂದ್ರರ ಸಾಹಿತ್ಯವು ಮಹತ್ವದ ಪಾತ್ರ ವಹಿಸುತ್ತದೆ ಎಂದು ವಿವರಿಸಿದರು.

ಇಂತಹ ಸಂದರ್ಭದಲ್ಲಿ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಿಕೊಳ್ಳುವ ಜೊತೆಗೆ ನಿಸ್ವಾರ್ಥ ಮೌಲ್ಯಗಳನ್ನು ರೂಢಿಸಿಕೊಳ್ಳುವ ಉದ್ದೇಶದಿಂದ ಶರತ್ ಚಂದ್ರರ ಪ್ರಖ್ಯಾತ ಕಾದಂಬರಿಗಳಾದ ಅಧಿಕಾರ, ಶ್ರೀಕಾಂತ, ಹೀಗೆ ಹಲವು ಕಥೆಗಳನ್ನು ಮಕ್ಕಳಿಗೆ ಹೇಳುತ್ತಾ, ಸಾಹಿತ್ಯದಲ್ಲಿರುವ ಶ್ರೇಷ್ಠ ವ್ಯಕ್ತಿತ್ವಗಳು ನಮ್ಮ ವ್ಯಕ್ತಿತ್ವವನ್ನು ಸಹ ಬದಲಾಯಿಸುತ್ತವೆ. ಹಾಗಾಗಿ ಸಮಾಜಮುಖಿಯಾಗಿರುವ ಕಥೆ, ಕಾದಂಬರಿಗಳನ್ನು ಓದುವ ಮೂಲಕ ಅನ್ಯಾಯದ ವಿರುದ್ಧ ಹೋರಾಟವನ್ನು ಬಲಿಷ್ಠವಾಗಿ ಕಟ್ಟಲು ಅಸ್ತ್ರವನ್ನಾಗಿಸಿಕೊಳ್ಳಬೇಕು ಎಂದರು.

ಇಂದಿನ ಸಮಾಜವು ಅಸಮಾನತೆಯಿಂದ ಕೂಡಿದೆ. ಬಡವ–ಶ್ರೀಮಂತ, ಹೆಣ್ಣು–ಗಂಡು, ಮೇಲು–ಕೀಳು ಮುಂತಾದ ಅಸಮಾನತೆಗಳಿಂದ ಸಮಾಜವು ನರಳುತ್ತಿದೆ. ಈ ಸಮಾಜವನ್ನು ಬದಲಾಯಿಸುವ ಹೊಣೆ ಇಂದಿನ ವಿದ್ಯಾರ್ಥಿಗಳ ಮೇಲಿದೆ. ಈ ಜವಾಬ್ದಾರಿಯನ್ನು ನಿಭಾಯಿಸಲು ಜ್ಞಾನ ಅತ್ಯವಶ್ಯಕ. ನಿಸರ್ಗದ ಲಕ್ಷಾಂತರ ಜೀವಿ ಸಂಕುಲಗಳ ಮಧ್ಯೆ ಚಿಂತನಾಶಕ್ತಿಯನ್ನು ಹೊಂದಿರುವ ಮನುಷ್ಯ ಮಾತ್ರ ಜ್ಞಾನವನ್ನು ಸಂಪಾದಿಸಿ ತನ್ನ ಪ್ರಜ್ಞಾವಂತಿಕೆಯ ಆಧಾರದ ಮೇಲೆ ಸಮಾಜವನ್ನು ಬದಲಾಯಿಸಲು ಸಾಧ್ಯ ಎಂದು ಶಿಬಿರದ ಸಮಾರೋಪ ಸಂದರ್ಭದಲ್ಲಿ ಮಾತನಾಡಿದ ಕಾಮ್ರೇಡ್ ಕೆ. ರಾಧಾಕೃಷ್ಣ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಿಸರ್ಗದಲ್ಲಿ ನಡೆಯುವ ಹಲವಾರು ಘಟನೆಗಳನ್ನು ಅರಿತುಕೊಳ್ಳುವ ಪ್ರಯತ್ನದಲ್ಲಿ ಮನುಷ್ಯನು ಪಂಚೇಂದ್ರಿಯಗಳ ಸಹಾಯದಿಂದ ಜ್ಞಾನವನ್ನು ಸಂಪಾದಿಸಿದನು. ನಿಸರ್ಗದ ಅನೇಕ ಘಟನೆಗಳ ಹಿಂದಿನ ನಿಯಮಗಳ ತಿಳುವಳಿಕೆ ಇರದಿದ್ದ ಸಂದರ್ಭದಲ್ಲಿ ಮೌಢ್ಯ ಬೆಳೆದು ಬಂತು. ಆದರೆ ಅನೇಕ ಪ್ರಶ್ನೆಗಳಿಗೆ ಉತ್ತರದ ಹುಡುಕಾಟದಲ್ಲಿ ಬೆಳೆದು ಬಂದದ್ದು ವಿಜ್ಞಾನ. ಈ ವಿಜ್ಞಾನದ ಆಧಾರದಲ್ಲಿ ಮನುಷ್ಯನು ಕೃಷಿ, ಉತ್ಪಾದನೆ, ಕಾರ್ಖಾನೆ, ಸಾರಿಗೆ ಎಲ್ಲವನ್ನೂ ಅಭಿವೃದ್ಧಿಪಡಿಸಿದನು. ನಿಸರ್ಗದ ಅನೇಕ ಬದಲಾವಣೆಗಳು ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟಿರುವಂತೆಯೇ. ಮಾನವ ನಾಗರಿಕತೆಯಲ್ಲಿನ ಬದಲಾವಣೆಗಳು ಕೂಡ ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟಿವೆ. ಈ ನಿಯಮಗಳನ್ನು ಅರಿತುಕೊಂಡಾಗ ಮಾತ್ರ ಸಮಾಜವನ್ನು ಬದಲಾಯಿಸಲು ಸಾಧ್ಯ. ಇದೇ ನಿಜವಾದ ಜ್ಞಾನ ಎಂದರು.

ಭಗತ್ ಸಿಂಗ್, ನೇತಾಜಿ ಸುಭಾಷ್ ಚಂದ್ರ ಬೋಸ್, ಬುದ್ಧ, ಅಂಬೇಡ್ಕರ್ ಮುಂತಾದವರು ಈ ಜ್ಞಾನಕ್ಕಾಗಿ ಕೇವಲ ಪಠ್ಯಪುಸ್ತಕಗಳ ಮೇಲೆ ಅವಲಂಬಿತರಾಗಲಿಲ್ಲ. ಬದಲಾಗಿ, ಜನರ ಮೇಲಿನ ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಅವರು ಜ್ಞಾನವನ್ನು 9ನೇ ಪುಟಕ್ಕೆ



ಆಸಕ್ತಿಯಿಂದ ಆಲಿಸುತ್ತಿರುವ ಶಿಬಿರಾರ್ಥಿಗಳು

# ಗಲ್ಫ್ ರಾಷ್ಟ್ರಗಳಲ್ಲಿ ಭಾರತೀಯ ಮೂಲದ ವಲಸಿಗರ ಚಿಂತಾಜನಕ ಪರಿಸ್ಥಿತಿ

ಕಳೆದ ಜೂನ್ 12ರಂದು 23 ಕೇರಳಿಗರು, 7 ಜನ ತಮಿಳುನಾಡಿನವರು ಸೇರಿದಂತೆ ಒಟ್ಟಾರೆ 45 ಜನ ಭಾರತೀಯರು ಕುವೈತ್‌ನ ಮಂಗಾಫ್ ಎಂಬಲ್ಲಿ ನಡೆದ ಕಟ್ಟಡಕ್ಕೆ ಬೆಂಕಿ ಬಿದ್ದ ದುರಂತದಲ್ಲಿ ಮೃತಪಟ್ಟರು. ದುರಂತದಲ್ಲಿ ಮಡಿದವರ ಪೈಕಿ ಎಂಜಿನಿಯರ್‌ಗಳು, ಚಾಲಕರು, ಮೇಲ್ವಿಚಾರಕರು ಸೇರಿದಂತೆ ವಿವಿಧ ವೃತ್ತಿಯಲ್ಲಿ ತೊಡಗಿಕೊಂಡವರಿದ್ದರು. ಅದರಲ್ಲಿ ಬಹುತೇಕರು ಎನ್‌ಬಿಟಿಸಿ ಗ್ರೂಪ್‌ನ ಸಿಬ್ಬಂದಿಯಾಗಿದ್ದವರು. ಕಟ್ಟಡಕ್ಕೆ ತಕ್ಷಣ ಹರಡಿಕೊಂಡ ಬೆಂಕಿ ಹಾಗೂ ಮೃತರ ಸಂಖ್ಯೆ ಹೆಚ್ಚಾಗಿರುವುದನ್ನು ನೋಡಿದರೆ ಆ ಆರು ಅಂತಸ್ತಿನ ಕಟ್ಟಡ ನಿರ್ಮಾಣ ಸಂಧರ್ಭದಲ್ಲಿ ಬೆಂಕಿ ಅವಘಡ ತಡೆಯಲು ಬೇಕಾದ ಸುರಕ್ಷಾ ಕ್ರಮಗಳನ್ನು ಕೈಗೊಳ್ಳದಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಬಹುತೇಕ ಭಾರತೀಯರು ದೇಶದಲ್ಲಿ ತಮ್ಮ ಮನೆ ನಡೆಸಲು ಬೇಕಾಗುವಷ್ಟು ದುಡಿಮೆ ಸಿಗದೇ ಇದ್ದಾಗ ಅನಿವಾರ್ಯವಾಗಿ ಗಲ್ಫ್ ರಾಷ್ಟ್ರಗಳಿಗೆ ಉತ್ತಮ ಸಂಬಳದ ಆಸೆಗೆ ಹೋಗುತ್ತಾರೆ. ಆದರೆ, ಅಲ್ಲಿ ವಾಸಕ್ಕೆ ಯೋಗ್ಯವಲ್ಲದ ಕಿರಿದಾದ, ಅರ್ಧ ಪೂರ್ಣಗೊಂಡ ಕಟ್ಟಡಗಳು ಹಾಗೂ ಕಾರ್ಮಿಕರ ಶಿಬಿರಗಳಲ್ಲಿ ವಾಸಿಸುತ್ತಾರೆ. ಸ್ವಚ್ಛ ಶೌಚಾಲಯಗಳ ಕೊರತೆ, ಪ್ರಾಥಮಿಕ ಆರೋಗ್ಯ ಸೇವೆಗಳ ಕೊರತೆ ಹಾಗೂ ಶುದ್ಧ ಕುಡಿಯುವ ನೀರಿನ ಕೊರತೆ ಇಂತಹ ಶಿಬಿರಗಳಲ್ಲಿ ಇರುತ್ತದೆ. ಇಂತಹ ಅಮಾನವೀಯ ಪರಿಸ್ಥಿತಿಯಲ್ಲೇ ಕಾರ್ಮಿಕರು ಕೆಲಸ ಮಾಡಬೇಕಾಗುತ್ತದೆ. ಇದು ಬರೀ ವಾಸ್ತವ್ಯದ ಸಮಸ್ಯೆ ಅಷ್ಟೇ ಅಲ್ಲ, ಕೆಲಸ ಮಾಡುವ ಪರಿಸ್ಥಿತಿಯೂ ಅಷ್ಟೇ ಭೀಕರವಾಗಿದೆ.

2022ರಲ್ಲಿ ಕತಾರ್ ದೇಶವು ಆಯೋಜಿಸಿದ್ದ ಫಿಫಾ ವಿಶ್ವಕಪ್ ಫುಟ್ಬಾಲ್‌ಗೆ ಕ್ರೀಡಾಂಗಣ ಹಾಗೂ ಕ್ರೀಡಾ ಗ್ರಾಮ, ರಸ್ತೆಗಳು, ಹೋಟೆಲ್‌ಗಳನ್ನು ನಿರ್ಮಿಸುವ ಸಲುವಾಗಿ ಕಾರ್ಮಿಕರನ್ನು 38 ಡಿಗ್ರಿ ಸೆಲ್ಸಿಯಸ್ ಬಿಸಿಲಿನ ತಾಪದಲ್ಲಿ ಕೆಲಸ ಮಾಡುವಂತೆ ಅಲ್ಲಿನ ಸರ್ಕಾರ ಒತ್ತಡ ಹೇರಿತ್ತು ಎಂಬ ಆರೋಪಗಳು ಕೇಳಿ ಬಂದಿದ್ದವು. ಈ ಬಿಸಿಲಿನ ಝಳ ತಾಳದೇ ಸಾವಿರಾರು ವಲಸಿಗ ಕಾರ್ಮಿಕರು ಮೃತಪಟ್ಟಿದ್ದರು ಎಂಬ ಆರೋಪಗಳೂ ಕೇಳಿ ಬಂದಿದ್ದವು. ಟೀಕೆಗಳು ಹೆಚ್ಚಾಗುತ್ತಿದ್ದಂತೆಯೇ ಉಷ್ಣತೆಯನ್ನು ತಡೆಯುವ ನಿಟ್ಟಿನಲ್ಲಿ ಕಾರ್ಮಿಕರಿಗೆ ನಿರ್ಜಲೀಕರಣ ತಡೆಗಾಗಿ ವಿಶ್ರಾಂತಿ ನೀಡುವ ಕ್ರಮವನ್ನು ಜಾರಿಗೆ ತರಲಾಯಿತು. ಬಹುತೇಕ ಎಲ್ಲಾ ಗಲ್ಫ್ ರಾಷ್ಟ್ರಗಳಲ್ಲಿ ಕಾರ್ಮಿಕರು ತೈಲ ಘಟಕಗಳಲ್ಲಿ 50 ಡಿಗ್ರಿ ಸೆಂಟಿಗ್ರೇಡ್ ತಾಪಮಾನದಲ್ಲಿ ಕೆಲಸ ಮಾಡಬೇಕಾಗುತ್ತಿದೆ.

### ಗಲ್ಫ್ ರಾಷ್ಟ್ರಗಳಿಗೆ ವಲಸೆ ಶುರುವಾದ ಕಥನ

ಗಲ್ಫ್ ರಾಷ್ಟ್ರಗಳಿಗೆ ಭಾರತದಿಂದ ಅದರಲ್ಲೂ ಕೇರಳ ಮತ್ತು ತಮಿಳುನಾಡಿನಿಂದ ಕಾರ್ಮಿಕರನ್ನು ಕರೆದೊಯ್ಯುವುದು ದೊಡ್ಡ ದಂಧೆಯಾಗಿ ಬದಲಾಗಿದೆ. ಕಾನೂನು ಪ್ರಕಾರ ಹಾಗೂ ಕಾನೂನು ಬಾಹಿರವಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಈ ರಾಷ್ಟ್ರಗಳಿಂದ ದೇಶದಿಂದ ಕಾರ್ಮಿಕರನ್ನು ಕರೆದೊಯ್ಯಲು ಏಜೆಂಟರು, ಬ್ರೋಕರ್‌ಗಳು ಹುಟ್ಟಿಕೊಂಡಿದ್ದಾರೆ. ಸುಮಾರು 3ರಿಂದ 10 ಲಕ್ಷ ಹಣವನ್ನು ವಹಿವಾಟು ಶುಲ್ಕವೆಂದು ಕಾರ್ಮಿಕರಿಂದ ವಸೂಲಿ ಮಾಡಲಾಗುತ್ತದೆ ಆದರೆ, ಅವರಿಗೆ ಸಂಕೀರ್ಣವಾದ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. ಅವರಲ್ಲಿ ಕೆಲವೇ ಕೆಲವರಿಗೆ ಕಾನೂನುಬದ್ಧ ದಾಖಲೆಗಳನ್ನು ಸಿದ್ಧಪಡಿಸಿಕೊಡಲಾಗುತ್ತದೆ. ಉದ್ಯೋಗ ಗುತ್ತಿಗೆ, ಉದ್ಯೋಗದಾತರ ಖಚಿತಪಡಿಸುವಿಕೆ, ವೇತನ ಮತ್ತು ಕೆಲ ಗ್ಯಾರಂಟಿಯಾಗಿ ದೊರೆಯುವ ಹಕ್ಕುಗಳ ಬಗ್ಗೆ ಕಡಿಮೆ ಗಮನ ನೀಡಲಾಗುತ್ತದೆ.

ಕಫಾಲ ಅಥವಾ ಪ್ರಾಯೋಜಕತ್ವ ಎಂದು ಕರೆಯಲಾಗುವ ವ್ಯವಸ್ಥೆಯೊಂದಿದೆ. ಇದರ ಪ್ರಕಾರ ಖಾಸಗಿ ವ್ಯಕ್ತಿಗಳು ಹಾಗೂ ಕಂಪೆನಿಗಳು ವಲಸೆ ಕಾರ್ಮಿಕರ ಉದ್ಯೋಗ ಮತ್ತು ವಲಸೆ ಸ್ಥಿತಿಯ ಬಗ್ಗೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತವೆ. ಕಡಿಮೆ ವೇತನಕ್ಕೂ ದುಡಿಯಲು ಸಿದ್ಧರಿರುವ ಹಾಗೂ ಮನೆ, ಮಕ್ಕಳ ಜವಾಬ್ದಾರಿಯನ್ನು ಹೊತ್ತಿರುವ ಕಾರ್ಮಿಕರು ಅನಿವಾರ್ಯವಾಗಿ ಇಂಥವರ ಕೈಗೆ ಸಿಕ್ಕಿಬಿದ್ದು ನರಕಯಾತನೆ ಅನುಭವಿಸುತ್ತಾರೆ. ಇದರಲ್ಲಿ ಬಹುತೇಕರು ಭಾರತದ ಉಪಖಂಡಕ್ಕೆ ಸೇರಿದವರಾಗಿರುತ್ತಾರೆ. ವ್ಯಕ್ತಿಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳುವುದಕ್ಕಿಂತ ಪ್ರಾಯೋಜಕತ್ವ ಕಂಪೆನಿಗಳು ಖಾಸಗಿ ನೇಮಕಾತಿ ಏಜೆನ್ಸಿಗಳ ಮೂಲಕ ಮಾನವ ಸಂಪನ್ಮೂಲಗಳನ್ನು ಪಡೆದುಕೊಳ್ಳುತ್ತಾರೆ. ಶೋಷಣೆಗೊಳಗಾಗುವ ಸಾಧ್ಯತೆಯ ಬಗ್ಗೆ ಮಾಹಿತಿ ಇದ್ದರೂ ಬಹುತೇಕ ಕಾರ್ಮಿಕರು ಇಂತಹ ಕಫಾಲ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಕಾರಣ ತಮ್ಮ ದೇಶಗಳಿಗಿಂತ ಗಲ್ಫ್ ರಾಷ್ಟ್ರಗಳಲ್ಲಿ ಉತ್ತಮ ಸಂಬಳ ಸಿಗುತ್ತದೆ ಎಂಬುದು. ಹೀಗೆ ದುಡಿದ ಹಣವನ್ನು ಕಾರ್ಮಿಕರು ಭಾರತದಲ್ಲಿರುವ ತಮ್ಮ ಕುಟುಂಬಗಳಿಗೆ ಕಳಿಸಿಕೊಡುತ್ತಾರೆ. ಗಲ್ಫ್‌ನಲ್ಲಿ ಅನಾಗರಿಕ ಶೋಷಣೆ ಇರುವುದು ಗೊತ್ತಾದರೂ ಭಾರತ ಸರ್ಕಾರ ಮಾತ್ರ ಕಣ್ಣು ಮುಚ್ಚಿ ಕೂತಿದೆ, ಏಕೆಂದರೆ ಭಾರತ ದೇಶಕ್ಕೆ ಗಲ್ಫ್ ರಾಷ್ಟ್ರಗಳಿಂದ ರೂ.30 ಸಾವಿರ ಕೋಟಿ ಹಣ ಬರುತ್ತದೆ. ಗಲ್ಫ್ ರಾಷ್ಟ್ರಗಳಲ್ಲಿ ಸುಮಾರು 50 ಲಕ್ಷ ಜನರು ಅತ್ಯಂತ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಸೌದಿ ಅರೇಬಿಯಾದಲ್ಲಿ 12 ಲಕ್ಷ ಜನರು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ.

ಮುಖ್ಯವಾಗಿ ಕಟ್ಟಡ ನಿರ್ಮಾಣ, ಹೋಟೆಲ್, ಹೌಸ್ ಕೀಪಿಂಗ್ ಮತ್ತು ಮನೆಗೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಕುವೈತ್ ದೇಶವೊಂದರಲ್ಲೇ ಭಾರತದ 10 ಲಕ್ಷ ಜನರು ನೆಲೆಸಿದ್ದಾರೆ. ಕುವೈತ್ ಜನಸಂಖ್ಯೆಯ ಪೈಕಿ ಶೇ 21ರಷ್ಟು ಜನರು ಭಾರತೀಯರೇ ಆಗಿದ್ದಾರೆ. ಒಟ್ಟಾರೆ ಕಾರ್ಮಿಕರ ಪೈಕಿ ಭಾರತೀಯರು ಶೇ 30ರಷ್ಟು ಎಂದು ಅಂಕಿ ಅಂಶಗಳು ಹೇಳುತ್ತವೆ. ಗಲ್ಫ್ ರಾಷ್ಟ್ರಗಳಿಗೆ ಅತೀ ಹೆಚ್ಚು ಹೋಗುವ ಕಾರ್ಮಿಕರು ಭಾರತೀಯರೇ ಆಗಿದ್ದಾರೆ. ಬಹುತೇಕ ಸಂಧರ್ಭಗಳಲ್ಲಿ ಕಾರ್ಮಿಕರು ಕೆಲಸದ ಬದಲಾವಣೆ ಮಾಡಬೇಕು, ಉದ್ಯೋಗಕ್ಕೆ ರಾಜೀನಾಮೆ ನೀಡಬೇಕು ಅಥವಾ ಅತಿಥೇಯ ದೇಶಕ್ಕೆ ಹೋಗಬೇಕೆಂದರೆ ಅಥವಾ ವಾಪಸ್ ಬರಬೇಕೆಂದರೆ ಇವರನ್ನು ಪ್ರಾಯೋಜಿಸಿದ ಕಂಪನಿಗಳ ಅನುಮತಿಯನ್ನು ಪಡೆಯಲೇಬೇಕಾಗುತ್ತದೆ.

ಪೂರ್ವಾನುಮತಿ ಪಡೆಯದೇ ಕೆಲಸದ ಸ್ಥಳವನ್ನು ಬಿಟ್ಟು ಹೋಗುವುದು ಗಂಭೀರವಾದ ಅಪರಾಧವಾಗಿದೆ. ಹೀಗೆ ಬಿಟ್ಟು ಹೋದರೆ ಆ ಕಾರ್ಮಿಕರ ಕಾನೂನುಬದ್ಧ ಹಕ್ಕನ್ನು ರದ್ದುಗೊಳಿಸಬಹುದು, ಜೈಲಿಗೆ ಹಾಕಬಹುದು ಅಥವಾ ಗಡೀಪಾರು ಮಾಡಬಹುದು. ಕಾರ್ಮಿಕರು ಹಲವು ಬಾರಿ ಪ್ರತಿಕೂಲ ಸಂಧರ್ಭಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಅತಿಯಾಗಿ ಶೋಷಣೆಗೆ ಗುರಿಯಾಗಬೇಕಾಗುತ್ತದೆ. ಇದೊಂದು ಬಗೆಯಲ್ಲಿ ಆಧುನಿಕ ಜೀತಪದ್ಧತಿ ಇದ್ದಂತಿದ್ದು, ಒತ್ತಾಯಪೂರ್ವಕವಾಗಿ ಕೆಲಸ ಮಾಡಿಸುವುದು, ಮಾನವ ಕಳ್ಳಸಾಗಣಿಕೆಯೂ ನಡೆಯುತ್ತದೆ. ಕಾರ್ಮಿಕರನ್ನು ದುಡಿಸಿಕೊಳ್ಳುವ ಯಾವುದೇ ದೇಶವೂ ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐಎಲ್‌ಒ)ದ ಸಮಾವೇಶದ ನಿರ್ಣಯಗಳನ್ನು ಜಾರಿಗೆ ತರುವುದಾಗಿ ಸಹಿ ಹಾಕಿದಾಗಲೂ ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಯತ್ನಗಳನ್ನು ನಾವು ನೋಡುತ್ತೇವೆ. ಒಪ್ಪಂದದ ಪ್ರಕಾರ ಕನಿಷ್ಠ ವೇತನವನ್ನು ನೀಡಬೇಕು. ಒತ್ತಾಯಪೂರ್ವಕವಾಗಿ ಕೆಲಸ ಮಾಡಿಸುವುದನ್ನು ನಿಲ್ಲಿಸಬೇಕು. ಕೆಲಸದ ಸ್ಥಳಗಳು ಕಾರ್ಮಿಕ ಸ್ನೇಹಿಯಾಗಿರಬೇಕು ಎಂಬುದು ಸೇರಿದಂತೆ ಹಲವಾರು ನಿಯಮಗಳಿವೆ. ಆದರೆ, ಅವುಗಳನ್ನು ಜಾರಿಗೆ ತರುವ ಸಾಧ್ಯತೆಗಳು ಬಹಳ ಕಡಿಮೆ.

### ಗಲ್ಫ್ ರಾಷ್ಟ್ರಗಳೊಂದಿಗೆ ಭಾರತದ ಒಪ್ಪಂದ

ಭಾರತವು ಕುವೈತ್ ಸೇರಿದಂತೆ ಪಶ್ಚಿಮ ಏಷ್ಯಾ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅದರಂತೆ ಕಾರ್ಮಿಕರ ನೇಮಕಾತಿ ಸರಳೀಕರಣ ಮಾಡುವುದು, ಕಾನೂನುಬದ್ಧ ರಕ್ಷಣೆಯನ್ನು ನೀಡುವುದು ಸೇರಿವೆ. ಆದಾಗ್ಯೂ, ದೀರ್ಘಕಾಲದವರೆಗೆ ನ್ಯಾಯಾಲಯದಲ್ಲಿ ವಿಚಾರಣೆಗಳು, ದುಬಾರಿಯಾದ ಕಾನೂನು ಸೇವೆಗಳಿಂದಾಗಿ ದೀರ್ಘಕಾಲದಿಂದ ನ್ಯಾಯಕ್ಕಾಗಿ ಮೊರೆ ಇಡುತ್ತಿರುವ ಬಡ ಕಾರ್ಮಿಕರಿಗೆ ನ್ಯಾಯ ಸಿಕ್ಕಿಲ್ಲ. ಇದಕ್ಕೆ ಮೂಲ ಕಾರಣ ಭಾರತವು 40 ವರ್ಷಗಳಷ್ಟು ಹಳೆಯದಾದ ವಲಸೆ ಕಾಯ್ದೆಯನ್ನೇ ನೆಚ್ಚಿಕೊಂಡು ವ್ಯವಹರಿಸುತ್ತಿದೆ. ಈ ಕಾಯ್ದೆಯ ಪ್ರಕಾರ ದುಡಿಯಲು ಈ ದೇಶಗಳಿಗೆ ಬಂದ ಕಾರ್ಮಿಕರೇ ಎಲ್ಲದಕ್ಕೂ ಜವಾಬ್ದಾರಿ ತೆಗೆದುಕೊಳ್ಳಬೇಕು. ಇತ್ತೀಚೆಗೆ ವಿದೇಶಾಂಗ ಸಚಿವಾಲಯವು ವಲಸೆಗಾರರ ಪ್ರಸ್ತುತ ಸಂದರ್ಭದ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಒಂದು ಸುಧಾರಿತ ಕಾಯ್ದೆಯನ್ನು ಜಾರಿಗೆ ತರುವ ಚಿಂತನೆ ನಡೆಸಿದೆ. ಕುವೈತ್‌ನ ಅಗ್ನಿ ಅವಘಡವು ದೇಶದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಸರ್ಕಾರಕ್ಕೆ ಒಂದು ಪಾಠವಾಗಬೇಕು. ವಿದೇಶದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಕಾರ್ಮಿಕರ ರಕ್ಷಣೆಗೆ ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಅಲ್ಲದೇ, ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಹಾಗೂ ಸಂಸ್ಥೆಗಳು ಆಗಾಗ ಕಾರ್ಮಿಕರ ಶಿಬಿರಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿ ಅಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ಅಲ್ಲಿನ ಸರ್ಕಾರದ ಗಮನಕ್ಕೆ ತರಬೇಕು. ಅಲ್ಲದೇ, ಭಾರತದ ಸಂಸತ್ತು ವಿದೇಶದ ಕಾರ್ಮಿಕರ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಒಂದು ಜಂಟಿ ಸದನ ಸಮಿತಿಯನ್ನು ರಚಿಸಲು ಮುಂದಾಗಬೇಕು.

ವಿದೇಶಗಳಲ್ಲಿ ಭಾರತೀಯ ಮೂಲದ ಕಾರ್ಮಿಕರು ಅನುಭವಿಸುತ್ತಿರುವ ಸಂಕಟಗಳ ಕುರಿತು ಉದಾಹರಣೆಯೊಂದನ್ನು ಗಮನಿಸುವುದಾದರೆ, ರಿಯಾದ್‌ನಲ್ಲಿ ತಮಿಳುನಾಡಿನ ವೆಲಂಕಣಿ ಮೂಲದ ಗ್ರೇಸ್ ವನಿತಾ (37) ಎಂಬುವವರು ಅಲ್ಲಿನ ಮನೆಯೊಂದರಲ್ಲಿ ವಯಸ್ಸಾದ ವ್ಯಕ್ತಿಯನ್ನು ನೋಡಿಕೊಳ್ಳಲು ಹೋಮ್ ನರ್ಸ್ ಆಗಿ ತೆರಳಿದ್ದರು. ಆದರೆ, ಆ ಕೆಲಸದ ಜೊತೆಗೆ ಮನೆಯಲ್ಲಿ ಅಡುಗೆ ಮಾಡುವ ಹಾಗೂ ಇತರೆ ಮನೆಗೆಲಸಗಳನ್ನು ಅಲ್ಲಿನ ಮಾಲೀಕರು ಹಚ್ಚಿದರು. ಗ್ರೇಸ್ ವನಿತಾ 21 ಜನರಿರುವ ಕುಟುಂಬಕ್ಕೆ ಅಡುಗೆ ಮಾಡಿಕೊಡಬೇಕಿತ್ತು. ಇವರನ್ನು ಅಲ್ಲಿಗೆ ಕಳುಹಿಸಿದ್ದ ಉದ್ಯೋಗದಾತ ಸಂಸ್ಥೆಯು ಪಾಸ್‌ಪೋರ್ಟ್ ಅನ್ನು ತನ್ನ ಬಳಿಯೇ ಇರಿಸಿಕೊಂಡಿತ್ತು. ಅಲ್ಲದೇ, ಆಕೆಗೆ ಮಾತುಕೊಟ್ಟಂತೆ ಪ್ರತಿ ತಿಂಗಳು ರೂ.22 ಸಾವಿರದಂತೆ ಆರು ತಿಂಗಳವರೆಗೆ ಸಂಬಳವನ್ನೇ ನೀಡಿರಲಿಲ್ಲ. 'ದಿನಾಲೂ 20 ಗಂಟೆ ಕೆಲಸ ಮಾಡಬೇಕಿತ್ತು. ನಿರಂತರ ಕೆಲಸದಿಂದಾಗಿ ನನಗೆ ಸುಸ್ತು ಕಾಡುತ್ತಿತ್ತು' ಎಂದು ಸಂಕಟ ತೋಡಿಕೊಂಡಿದ್ದರು. ತನ್ನ ಸಂಬಳ ಕೊಡಬೇಕು ಎಂದು ಬೇಡಿಕೆ ಇಟ್ಟಾಗ ಕುಟುಂಬದವರು ಹಣ ಕೊಡಲು ನಿರಾಕರಿಸಿದರು. ಅಲ್ಲದೇ, ಆಕೆಯನ್ನು ಗೃಹಬಂಧನದಲ್ಲಿ ಇರಿಸಿಕೊಂಡಿದ್ದರು. ರಿಯಾದ್ ತೊರೆಯಬೇಕು ಎಂದು ಬಯಸಿದಾಗ ಅಲ್ಲಿಂದ ತೆರಳಲು ಅಗತ್ಯವಾದ ಅನುಮತಿ ಬೇಕು ಎಂದು ಅಲ್ಲಿನ ಆಡಳಿತ ಹೇಳಿತು. ಗ್ರೇಸ್ ವನಿತಾಗೆ ಇದನ್ನು ಕೇಳಿ ಗಾಬರಿಯಾಗಿತ್ತು. ನಂತರ ರಿಯಾದ್‌ನ ಸ್ವಯಂಸೇವಾ ಸಂಸ್ಥೆಯೊಂದು ಪಾಸ್‌ಪೋರ್ಟ್ ಮರಳಿ ಕೊಡಿಸಿತು. ಅಗತ್ಯವಾದ ಅನುಮತಿಗಳನ್ನು ಕೊಡಿಸಿ ಅಲ್ಲಿಂದ ವಾಪಸ್ ಬರಲು ಸಹಾಯ ಮಾಡಿತು.

ಇಂತಹ ಘಟನೆಗಳ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕರ ಸಂಕಟಕ್ಕೆ ಸಂಬಂಧಿಸಿದಂತೆ ಮೂಕಪ್ರೇಕ್ಷಕರಾಗದೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕುವೈತ್‌ನಲ್ಲಿ ಈ ದುರಂತ ನಡೆದ ನಂತರವೂ ನಮ್ಮ ಸರ್ಕಾರ ಸೂಕ್ತ ಕ್ರಮಗಳನ್ನೇನೂ ಕೈಗೊಂಡಿಲ್ಲ. ರಷ್ಯಾ, ಇಸ್ರೇಲಿನ ಯುದ್ಧಭೂಮಿಗಳಿಗೆ ಭಾರತದ ಯುವಕರನ್ನು ರಫ್ತು ಮಾಡುವುದನ್ನು ನಿಲ್ಲಿಸಲೂ ಇಲ್ಲ. ಮರಣಶಯ್ಯೆಯಲ್ಲಿರುವ ಬಂಡವಾಳವಾದದ ಕ್ರೂರ ಮುಖಗಳಲ್ಲಿ ಇದೂ ಒಂದು.

## ಎಐಎಮ್‌ಎಸ್‌ಎಸ್ : ಮಹಾನ್ ಮಾನವತಾವಾದಿ ಈಶ್ವರಚಂದ್ರ ವಿದ್ಯಾಸಾಗರ್‌ರವರ 133ನೇ ಸ್ಮರಣಾಚರಣೆ

**ಬೆಂಗಳೂರು:** ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಶೋಭಾ ಎಸ್. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು




**ಬಳ್ಳಾರಿ:** ಮಹಿಳೆಯರ ಮತ್ತು ಮಕ್ಕಳ ಮೇಲಿನ ಸಾಮಾಜಿಕ ದೌರ್ಜನ್ಯಗಳನ್ನು ತಡೆಗಟ್ಟಲು ಆಗ್ರಹಿಸಿ ಪ್ರತಿಭಟನೆ



# ಕೇರಳದ ಪ್ರಕೃತಿ ವಿಕೋಪ–ಒಂದು ರಾಷ್ಟ್ರೀಯ ದುರಂತ

ಕೇರಳದ ಗಿರಿ ಜಿಲ್ಲೆ ವಯನಾಡ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕುಸಿತವು ಭಾರೀ ಅನಾಹುತವನ್ನು ಸೃಷ್ಟಿಸಿದೆ. ಆ ಜಿಲ್ಲೆಯ ಗ್ರಾಮಗಳಾದ ಚೂರಲ್‌ಮಲ, ಅಟ್ಟಮಲ ಮತ್ತು ಮುಂಡಕ್ಕೈ ಗ್ರಾಮಗಳಲ್ಲಿ ಈ ಗುಡ್ಡ ಕುಸಿತದಿಂದಾಗಿ ಜುಲೈ 30ರಂದು ನಸುಕಿನ ಜಾವ ನೂರಾರು ಅಮೂಲ್ಯ ಜೀವಗಳು ಕೊನೆಯುಸಿರೆಳೆದಿವೆ. ಮೊದಲ ಘಟನೆ ಬೆಳಗಿನ ಜಾವ 2 ಗಂಟೆಯಲ್ಲಿ ನಡೆದಿದ್ದು, ಆ ಸಂದರ್ಭದಲ್ಲಿ ಬಹುತೇಕ ಗ್ರಾಮಸ್ಥರು ನಿದ್ದೆಯ ಮಂಪರಿನಲ್ಲಿದ್ದರು. ಗುಡ್ಡ ಕುಸಿದ ರಭಸಕ್ಕೆ ಭಾರೀ ಪ್ರಮಾಣದ ಕಲ್ಲು ಬಂಡೆಗಳು, ಕೆಸರು, ಮರಗಳು ಕುಸಿಯುತ್ತಾ ರಭಸದಿಂದ ಬಂದು ಗ್ರಾಮವನ್ನು ನಾಮಾವಶೇಷ ಮಾಡಿದವು. ಕುಸಿತದ ದಾರಿಯಲ್ಲಿ ಬಂದ ಮನುಷ್ಯರು ಸೇರಿದಂತೆ ಎಲ್ಲವನ್ನೂ ಆಪೋಶನ ತೆಗೆದುಕೊಂಡವು. ಗುಡ್ಡ ಕುಸಿತ ಆರಂಭವಾದ ಪ್ರದೇಶದಿಂದ ಸುಮಾರು 40 ಕಿ.ಮೀ. ದೂರದಲ್ಲಿರುವ ಚಲಿಯಾರ್ ನದಿಯ ಒಳಗೆ ಗುಡ್ಡದ ಅವಶೇಷಗಳನ್ನು ಅವು ಕೊಂಡೊಯ್ದವು. ಗುಡ್ಡ ಕುಸಿತದಿಂದ ಉಂಟಾದ ಭಾರೀ ಪ್ರಮಾಣದ ಕೆಸರು ನದಿಯತ್ತ ಸಾಗುತ್ತಿದ್ದ ತನ್ನ ಪಥವನ್ನು ಬದಲಿಸಿ ಜನದಟ್ಟಣೆ ಇರುವ ಗ್ರಾಮಗಳ ಕಡೆಗೆ ಸಾಗಿದ್ದರಿಂದ ಭಾರೀ ಪ್ರಮಾಣದ ಜೀವ ಹಾನಿ ಸಂಭವಿಸಿತು. ದುರಂತ ಸಂಭವಿಸಿದ ಕೆಲವೇ ಗಂಟೆಗಳಲ್ಲಿ 256 ಜನ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಘೋಷಿಸಿದರು. ನಂತರದ ದಿನಗಳಲ್ಲಿ ಈ ಪ್ರಮಾಣ ಇನ್ನೂ ಜಾಸ್ತಿಯಾಯಿತು. (ಅನಧಿಕೃತ ವರದಿಯ ಪ್ರಕಾರ 400ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ) ನೂರಾರು ಜನರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇನ್ನೂ ಹಲವಾರು ಮೃತದೇಹಗಳು ಕೆಸರು, ಕಲ್ಲು ಹಾಗೂ ಅವಶೇಷಗಳ ಅಡಿಯಲ್ಲಿ ಸಿಲುಕಿರಬಹುದು ಎಂದು ಅಂದಾಜಿಸಲಾಗಿದೆ. ಭೀಕರ ಭೂಕುಸಿತದಿಂದಾಗಿ ಸೇತುವೆಗಳು, ಕಲ್ವರ್ಟ್‌ಗಳು, ರಸ್ತೆಗಳು ಕಿತ್ತುಕೊಂಡು ಹೋಗಿವೆ. ಸೇನೆ, ವಾಯುದಳ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳನ್ನು ನಿಯೋಜಿಸಲಾಗಿದ್ದರೂ ಪರಿಹಾರ ಕಾರ್ಯಾಚರಣೆ ವಿಳಂಬಗತಿಯಲ್ಲಿ ಸಾಗಿತ್ತು. ಸೇನೆ, ಎನ್‌ಡಿಆರ್‌ಎಫ್ ಬರುವುದಕ್ಕಿಂತ ಮುಂಚೆಯೇ ಗ್ರಾಮಸ್ಥರು ಸ್ವಯಂಪ್ರೇರಣೆಯಿಂದ ಎಲ್ಲರೂ ಒಗ್ಗಟ್ಟಾಗಿ ಹಲವು ಜೀವಗಳನ್ನು ಉಳಿಸಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಹಲವಾರು ಜನರು ತಮ್ಮ ಸಂಬಂಧಿಕರು ಈ ಭೂಕುಸಿತದಲ್ಲಿ ಕಣ್ಮರೆಯಾಗಿದ್ದಾರೆ ಎಂದು ನೂರಾರು ಹೆಸರುಗಳನ್ನು ಕಾರ್ಯಾಚರಣೆಯಲ್ಲಿ ತೊಡಗಿದ್ದ ಅಧಿಕಾರಿಗಳಿಗೆ ನೀಡಿದ್ದಾರೆ. ಸೂಕ್ತ ತರಬೇತಿ ಇಲ್ಲದೇ ಹಾಗೂ ಅಗತ್ಯ ಸಲಕರಣೆ ಇಲ್ಲದೇ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಜನರಿಗೆ ಅದು ಅಪಾಯಕಾರಿಯಾಗಿತ್ತು. ನಿರಂತರವಾಗಿ ಸುರಿಯುತ್ತಿದ್ದ ಮಳೆ ಹಾಗೂ ಪ್ರತಿಕೂಲ ಹವಾಮಾನವೂ ಕಾರ್ಯಾಚರಣೆಯನ್ನು ವಿಳಂಬಗೊಳಿಸಿತು.

ಭೂಕುಸಿತ ಸಂಭವಿಸಿದ ವಯನಾಡ್ ಜಿಲ್ಲೆಯ ಈ ಪ್ರದೇಶವು ಪ್ರವಾಸಿ ತಾಣವಾಗಿ ಬೆಳೆಯುವ ಸಾಧ್ಯತೆ ಇರುವುದರಿಂದ ಕಳೆದ 20 ವರ್ಷಗಳಿಂದ ಇಲ್ಲಿ ಅನಿಯಂತ್ರಿತವಾಗಿ ಹೋಟೆಲ್, ರೆಸಾರ್ಟ್‌ನಂತಹ ಕಟ್ಟಡಗಳ ನಿರ್ಮಾಣ ಭರದಿಂದ ಸಾಗಿದೆ. ಕಲ್ಲು ಬಂಡೆಗಳೊಂದಿಗೆ ಸಹಜವಾಗಿ ಬೆಸೆದುಕೊಂಡಿದ್ದ ಮಣ್ಣು ಸಡಿಲಗೊಂಡು ತನ್ನ ಕಸುವನ್ನು ಕಳೆದುಕೊಂಡು ಬಂಡೆಯ ಮೇಲೆ ಜಾರುವ ಸಾಧ್ಯತೆ ಹೆಚ್ಚಾಗಿತ್ತು.




ಕೇರಳದ ಮೆಪ್ಪಾಡಿ ಪ್ರದೇಶದಲ್ಲಿ ಮೆಡಿಕಲ್ ಸರ್ವಿಸ್ ಸೆಂಟರ್(MSC) ಆರಂಭಿಸಿದ ಉಚಿತ ವೈದ್ಯಕೀಯ ತಪಾಸಣಾ ಕೇಂದ್ರ

ಭಾರಿ ಪ್ರಮಾಣದ ಮಳೆ ಸುರಿಯುವ ಪಶ್ಚಿಮ ಘಟ್ಟ ಶ್ರೇಣಿಯ ತರಹದ ಸ್ಥಳಗಳಲ್ಲಿ ಕಾಡುಗಳು ಕೊಚ್ಚಿಹೋಗುವುದರಿಂದ ಭೂಪ್ರದೇಶ ದುರ್ಬಲವಾಗುತ್ತದೆ.

ಅರಬ್ಬಿ ಸಮುದ್ರದಲ್ಲಿ ವಿಪರೀತ ಶಾಖ ಉಂಟಾಗುವುದು ಭಾರಿ ಪ್ರಮಾಣದ ಹಾಗೂ ಅನಿರೀಕ್ಷಿತ ಮಳೆ ಬರಲು ಒಂದು ಕಾರಣ ಎಂದು ಪರಿಸರ ವಿಜ್ಞಾನಿಗಳು ಅಂದಾಜಿಸಿದ್ದಾರೆ.

"ನೈರುತ್ಯ ಅರಬ್ಬಿ ಸಮುದ್ರವು ಬಿಸಿಯಾಗುತ್ತಿದೆ, ಇದರಿಂದಾಗಿ ಕೇರಳ ಸೇರಿದಂತೆ ಈ ಪ್ರದೇಶದ ಮೇಲಿನ ಭಾಗಗಳು ಉಷ್ಣಬಲವಾಗಿ ಅಸ್ಥಿರವಾಗಿವೆ ಎಂಬುದು ನಮ್ಮ ಸಂಶೋಧನೆಗಳಿಂದ ಸಾಬೀತಾಗಿದೆ" ಎಂದು ಸಿಯುಸ್ಯಾಟ್‌ನ ಪರಿಸರ ವಿಜ್ಞಾನಿಗಳು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ್ದಾರೆ. ಅರಬ್ಬಿ ಸಮುದ್ರದಲ್ಲಿ ವಿಪರೀತ ಬಿಸಿ ಇರುವುದರಿಂದಲೇ ದಟ್ಟ ಮೋಡಗಳು ಕಟ್ಟುವ ಕ್ರಮದಲ್ಲಿ ಏರುಪೇರಾಗುತ್ತಿವೆ ಎಂಬ ಹೊಸ ಬೆಳವಣಿಗೆಯನ್ನು ವಿಜ್ಞಾನಿಗಳು ಗುರುತಿಸಿದರು. ಇವು ಅತಿ ಕಡಿಮೆ ಸಮಯದಲ್ಲಿಯೇ ಭಾರಿ ಗಾತ್ರದ ಮಳೆಗಳನ್ನು ಸುರಿಸುತ್ತವೆ. ಈ ವಿದ್ಯಮಾನ ಗುಡ್ಡ ಕುಸಿತಗಳ ಅಪಾಯಕ್ಕೆ ಕಾರಣವಾಗುತ್ತದೆ. ಈ ಭಾರಿ ಗಾತ್ರದ ಮೋಡಗಳು ವಿಶಿಷ್ಟವಾಗಿ ನೆಲದ ಮೇಲೆ ಹಾದುಹೋಗುವಾಗ ಇದು ಹೆಚ್ಚು ಸಂಭವಿಸುತ್ತದೆ. 2018 ರಲ್ಲಿ ಕೇರಳದಲ್ಲಿ ಪ್ರವಾಹ ಬಂದಾಗಿನಿಂದಲೂ ಈ ಬಗೆಯ ಮಳೆಯಲ್ಲಿನ ಬದಲಾವಣೆಯನ್ನು ಗುರುತಿಸಲಾಗಿದೆ. ಭಾರತದ ಪಶ್ಚಿಮ ಕರಾವಳಿಯಲ್ಲಿ ಸಂವಹನ ಪ್ರಕ್ರಿಯೆಯಿಂದಾಗಿ ಅಲ್ಪ ಅವಧಿಯಲ್ಲಿ ಹೆಚ್ಚಿನ ಮಳೆ ಸುರಿಯುತ್ತಿದೆ ಎಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ.



ವಯನಾಡ್ ಬಳಿಯ ರಿಪನ್‌ನಲ್ಲಿ ಮೆಡಿಕಲ್ ಸರ್ವಿಸ್ ಸೆಂಟರ್(MSC) ಆಯೋಜಿಸಿದ ವೈದ್ಯಕೀಯ ಶಿಬಿರ

ಭಾರತ ಸರ್ಕಾರವು 2011ರಲ್ಲಿ "ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿ"ಯೊಂದನ್ನು ಪರಿಸರ ವಿಜ್ಞಾನಿ ಪ್ರೊ. ಮಾಧವ ಗಾಡ್ಗೀಳ್ ಅವರ ನೇತೃತ್ವದಲ್ಲಿ ರಚಿಸಿತ್ತು. ಅವರು ಇನ್ನಿತರ ಅಂಶಗಳೊಂದಿಗೆ ವಯನಾಡಿನ ಬೆಟ್ಟ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯ ಎಂಬುದಾಗಿ ಘೋಷಿಸಿದರು. ಅಲ್ಲದೇ, ಇಲ್ಲಿನ ಘಟ್ಟಗಳನ್ನು ಅವುಗಳ ಸೂಕ್ಷ್ಮತೆಯನ್ನು ಆಧರಿಸಿ ವಲಯಗಳನ್ನಾಗಿ ವಿಭಜಿಸಬೇಕು. ಅದರಲ್ಲಿ ಅತ್ಯಂತ ಗಂಭೀರ ಸ್ಥಿತಿಯಲ್ಲಿರುವ ಪ್ರದೇಶಗಳನ್ನು ನಿರಂತರವಾಗಿ ಮೇಲ್ವಿಚಾರಣೆಗೆ ಒಳಪಡಿಸಬೇಕು ಹಾಗೂ ಅಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳು ನಡೆಯದಂತೆ ನಿರಂತರ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಪ್ರದೇಶದಲ್ಲಿ ನಡೆಯುತ್ತಿರುವ ಎಲ್ಲಾ ಬಗೆಯ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಅಲ್ಲದೇ, ಥರ್ಮಲ್ ವಿದ್ಯುತ್ ಸ್ಥಾವರ, ಹೈಡ್ರೋ ವಿದ್ಯುತ್ ಉತ್ಪಾದನೆ ಹಾಗೂ ಪವನ ವಿದ್ಯುತ್ ಉತ್ಪಾದನೆಗೆ ವಲಯ 1ರಲ್ಲಿ ಬರುವ ಈ ಪ್ರದೇಶ ಬಳಕೆಯಾಗದಂತೆ ಅಗತ್ಯ ನಿರ್ಬಂಧಗಳನ್ನು ಹೇರಬೇಕು ಎಂದು ಸಮಿತಿಯು ಶಿಫಾರಸು ಮಾಡಿತ್ತು. ತಜ್ಞರ ಸಮಿತಿ ನೀಡಿದ್ದ ಶಿಫಾರಸುಗಳನ್ನು 14 ವರ್ಷಗಳ ಬಳಿಕವೂ ಜಾರಿ ಮಾಡಿಲ್ಲ. ಹೀಗಾಗಿ, ಈ ದುರಂತ ಮಾನವ ನಿರ್ಮಿತ ಎಂದೇ ಹೇಳಬೇಕಾಗುತ್ತದೆ. ಇದಕ್ಕೆ ಕಾರಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಪೊರೇಟ್ ಸ್ನೇಹಿ ನೀತಿಗಳೇ ಎಂಬುದನ್ನು ಖಚಿತವಾಗಿ ಹೇಳಬಹುದಾಗಿದೆ.

ದುರಂತದ ಚಿತ್ರಣಗಳನ್ನು ಪತ್ರಿಕೆ, ಎಲೆಕ್ಟ್ರಾನಿಕ್ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಿದ ದೇಶದ ಜನತೆ ಸಹಾನುಭೂತಿ ವ್ಯಕ್ತಪಡಿಸಿದ್ದಲ್ಲದೇ ತಮ್ಮ ಕೈಯಿಂದ ಸಾಧ್ಯವಾದ ನೆರವನ್ನು ನೀಡಿದರು. ಆದರೆ, ರಾಜ್ಯ ಸರ್ಕಾರ ಮಾತ್ರ ಬೇರೆ ರಾಜ್ಯಗಳಿಂದ ರಕ್ಷಣಾ ಕಾರ್ಯದಲ್ಲಿ ಕೈಜೋಡಿಸಲು ಬರುವವರನ್ನು ತಡೆಯುವ ಮೂಲಕ ಅಚ್ಚರಿಯ ಧೋರಣೆಯನ್ನು ಅನುಸರಿಸುತ್ತಿದೆ. ವಯನಾಡ್ ಲೋಕಸಭೆಗೆ ಉಪಚುನಾವಣೆ ಎದುರಾಗಿದ್ದು, ಎಲ್ಲವನ್ನೂ ಕಳೆದುಕೊಂಡು ಕಂಗಾಲಾಗಿರುವ ಸಂತ್ರಸ್ತರಿಗೆ ಗೌರವಯುತವಾದ ಪುನರ್ವಸತಿಯು ದೊರೆಯುವುದೇ ಎಂಬುದನ್ನು ಕಾದುನೋಡಬೇಕಾಗಿದೆ.

ಜನಪರ ಕಾಳಜಿಯುಳ್ಳ ವೈದ್ಯಕೀಯ ಸೇವಾ ಸಂಘಟನೆಯಾದ ಮೆಡಿಕಲ್ ಸರ್ವಿಸ್ ಸೆಂಟರ್ (ಎಂಎಸ್‌ಸಿ) ತನ್ನ ವೈದ್ಯರನ್ನು ವಯನಾಡಿಗೆ ಕಳುಹಿಸಿಕೊಟ್ಟಿದ್ದು, ತನ್ನ ಕೈಲಾದಷ್ಟು ಔಷಧಿಗಳನ್ನೂ ಕಳುಹಿಸಿಕೊಟ್ಟಿದೆ.




ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಡಿ.ಬಿ ಕುಪ್ಪೆ ಗ್ರಾಮ ಪಂಚಾಯಿತಿ ಎದುರು ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿ(AIJASC) ನೇತೃತ್ವದಲ್ಲಿ ಆದಿವಾಸಿ ಜನರಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಆಗ್ರಹಿಸಿ ಪ್ರತಿಭಟನೆ




ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಇರುವ ಜಾಗವನ್ನು ಯಾವುದೇ ಸಂಘ–ಸಂಸ್ಥೆಗಳಿಗೆ ಕೊಡುವ ನಿರ್ಧಾರವನ್ನು ಕೈಬಿಡಬೇಕೆಂದು, ಸರ್ಕಾರಿ ಪದವಿ ಮಹಾವಿದ್ಯಾಲಯ ಉಳಿಸಿ ವಿದ್ಯಾರ್ಥಿಗಳ ಹೋರಾಟ ಸಮಿತಿ ಹಾಗೂ ಎಐಡಿಎಸ್‌ಓ ಕಲಬುರಗಿ ಜಿಲ್ಲಾ ಸಮಿತಿಯಿಂದ ಪ್ರತಿಭಟಿಸಿ, ಜಿಲ್ಲಾಧಿಕಾರಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

## ಬಿಜೆಪಿ ಸರ್ಕಾರದ ನಿಷ್ಕ್ರಿಯತೆ ವಿರುದ್ಧ ಮತ್ತೆ ರೈತರ ಚಳುವಳಿಯ ಪ್ರಾರಂಭ : ಎಸ್‌ಕೆಎಂ ಕರೆ

ಹಿಂದಿನ ಬಿಜೆಪಿ ಸರ್ಕಾರ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಾಗ ದೇಶದ ರೈತ ಸಮುದಾಯದವರು ದೆಹಲಿಯ ಗಡಿಭಾಗಗಳಲ್ಲೇ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ 384 ದಿನಗಳ ಕಾಲ ಚಾರಿತ್ರಿಕ ಹೋರಾಟ ನಡೆಸಿದರು. ರೈತ ಚಳುವಳಿಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದರು. ರೈತರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಜಮಾಯಿಸಿದರು. ಚಳುವಳಿಯನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರ ಮಾಡಿದ ಕುತಂತ್ರಗಳೆಲ್ಲವನ್ನೂ ರೈತರು ಸೋಲಿಸಿದರು. ಹೋರಾಟದ ಕುರುಕ್ಷೇತ್ರದಲ್ಲಿ ಸುಮಾರು 750 ರೈತರು ಜೀವ ತೆತ್ತರು, ಆದರೆ ತಲೆಬಾಗಲಿಲ್ಲ. ಕೊನೆಗೆ ಬಿಜೆಪಿ ಸರ್ಕಾರ ರೈತರ ಮುಂದೆ ಮಂಡಿಯೂರಿ ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ತೆಗೆದುಕೊಂಡಿತು. ಆಗ ಎತ್ತಿದ್ದ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಬೇಕು ಮತ್ತು ಎಲ್ಲಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು, ವಿದ್ಯುಚ್ಛಕ್ತಿ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳಬೇಕು, ಮುಂತಾದ ಹಕ್ಕೊತ್ತಾಯಗಳಿಗೆ ನಂತರದಲ್ಲಿ ರೈತ ಸಂಘಟನೆಗಳನ್ನೂ ಒಳಗೊಂಡ ಸಮಿತಿ ರಚಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದೆಂದು ಬಿಜೆಪಿ ಸರ್ಕಾರ ವಚನ ನೀಡಿತು. ಆದರೆ ಬಿಜೆಪಿ ವಚನಭ್ರಷ್ಟವಾಯಿತು. ಕೊಟ್ಟ ಮಾತಿಗೆ ತಪ್ಪಿತು. ರಾಮ ಆದರ್ಶವೆನ್ನುವ ಬಿಜೆಪಿ ಪಕ್ಷಕ್ಕೆ ತಂದೆ ಕೊಟ್ಟ ಮಾತನ್ನು ಉಳಿಸಿಕೊಂಡ ರಾಮನ ನಡೆ ಮಾತ್ರ ಅಪಥ್ಯವಾಯಿತು. ಮೂರು ವರ್ಷಗಳು ಕಳೆದರೂ ಅದರ ಬಗ್ಗೆ ಚಕಾರವೆತ್ತದ ಬಿಜೆಪಿ ಸರ್ಕಾರದ ವಿರುದ್ಧ ಮತ್ತೆ ಸಂಯುಕ್ತ ಕಿಸಾನ್ ಮೋರ್ಚಾ ಹೋರಾಟವನ್ನು ಆರಂಭಿಸುತ್ತಿದೆ.

ದೆಹಲಿಯಲ್ಲಿ 2024, ಜುಲೈ 10 ರಂದು ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಸರ್ವ ಸದಸ್ಯರ ಸಭೆ ನಡೆಯಿತು. ಸರ್ವ ಸದಸ್ಯರ ಸಭೆಯಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯ (ಎಐಕೆಕೆಎಂಎಸ್) ರಾಷ್ಟ್ರಾಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಸೇರಿದಂತೆ, ಡಾ. ಅಶೋಕ್ ಧಾವಲೆ, ಡಾ. ದರ್ಶನ್ ಪಾಲ್, ಯುದ್ವೀರ್ ಸಿಂಗ್, ಬಲ್‌ಬೀರ್ ಸಿಂಗ್ ರಾಜೆವಾಲ್, ರೆವುಲ ವೆಂಕಯ್ಯ, ಮೇಧಾ ಪಾಟ್ಕರ್, ರುಡ್ಲು ಸಿಂಗ್ ಮಾನಸ, ಡಾ. ಸುನಿಲನ್, ಅವಿಕ್ ಸಹಾ, ಡಾ. ಆಶಿಶ್ ಮಿಟ್ಟಲ್, ತಾಜಿಂದರ್ ಸಿಂಗ್ ವಿರ್ಕ್ ಮತ್ತು ಕನ್ವರ್‌ಜಿತ್ ಸಿಂಗ್ ಇದ್ದರು. ಹನ್ನನ್ ಮೊಲ್ಲಾ ಪ್ರತಿನಿಧಿಗಳನ್ನು ಸ್ವಾಗತಿಸಿದರು. ದೇಶದ ಹದಿನೇಳು ರಾಜ್ಯಗಳ 143 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯು ಪಾರ್ಲಿಮೆಂಟರಿ ಚುನಾವಣೆಯಲ್ಲಿ ಬಿಜೆಪಿಯ ಕೋಮುವಾದಿ ಹಾಗೂ ಕಾರ್ಪೊರೇಟ್ ಪರವಾದ ಕಥನಗಳಿಗೆ ವಿರುದ್ಧವಾಗಿ ಜನರ ಜ್ವಲಂತ ಸಮಸ್ಯೆಗಳನ್ನು ಯಶಸ್ವಿಯಾಗಿ ಮುನ್ನೆಲೆಗೆ ತಂದು, ಬಿಜೆಪಿಯ 400 ಸೀಟುಗಳ ಗುರಿಯನ್ನು ಮಣ್ಣುಮುಕ್ಕಿಸಿದ ದೇಶದ ರೈತರು ಹಾಗೂ ಕಾರ್ಮಿಕರಿಗೆ ಅಭಿನಂದನೆಗಳನ್ನು ಸಲ್ಲಿಸಿತು. ಬಿಜೆಪಿಯು ಕಳೆದ ಹತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಕಳೆದ ಚುನಾವಣೆಗೆ ಹೋಲಿಸಿದರೆ 60 ಸೀಟುಗಳನ್ನು ಕಳೆದುಕೊಂಡು ಕೇವಲ 240 ಸೀಟುಗಳನ್ನು ಮಾತ್ರ ಪಡೆಯಿತು ಮತ್ತು ಅದಕ್ಕೆ ಸರಳ ಬಹುಮತವೂ ಬರಲಿಲ್ಲ.

ಸಂಯುಕ್ತ ಕಿಸಾನ್ ಮೋರ್ಚಾ, 'ಬಿಜೆಪಿಯ ಮುಖವಾಡ ತೆಗೆಯಿರಿ, ಬಿಜೆಪಿಯನ್ನು ವಿರೋಧಿಸಿ ಮತ್ತು ಶಿಕ್ಷಿಸಿ' ಘೋಷಣೆಯೊಂದಿಗೆ ಮಾಡಿದ ಪ್ರಚಾರವು ರೈತ ಚಳುವಳಿಯು ವ್ಯಾಪಕವಾಗಿ ಹರಡಿಕೊಂಡಿದ್ದ ಮತ್ತು ಕ್ರಿಯಾಶೀಲವಾಗಿದ್ದ ಕಡೆಗಳಲ್ಲೆಲ್ಲಾ ಬಲವಾದ ಪ್ರಭಾವ ಬೀರಿದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳ 38 ಗ್ರಾಮೀಣ ಕ್ಷೇತ್ರಗಳಲ್ಲಿ ಬಿಜೆಪಿ ಸೋಲುಂಡಿದ್ದು ಮತ್ತು ಆಗ ಕೇಂದ್ರ ಸಚಿವರಾಗಿದ್ದ ಉತ್ತರ ಪ್ರದೇಶದ ಲಖಿಂಪುರ್ ಖೇರಿ ಕ್ಷೇತ್ರದಲ್ಲಿ ಅಜಯ್ ಮಿಶ್ರಾ ತೇನಿ (ರೈತರ ಕೊಲೆಗಾರ) ಹಾಗೂ ಜಾರ್ಖಂಡ್‌ನ ಕುಂತಿ ಕ್ಷೇತ್ರದಲ್ಲಿ ಅರ್ಜುನ್ ಮುಂಡಾ (ಕೃಷಿ ಸಚಿವ) ಸೋಲು ಕಂಡಿದ್ದು ರೈತರ ಹೋರಾಟದ ಪ್ರಭಾವವನ್ನು ತೋರಿಸುತ್ತದೆ. ಬಿಜೆಪಿ ಪಕ್ಷವು ಗ್ರಾಮೀಣ ಪ್ರದೇಶವು ಹೆಚ್ಚಾಗಿದ್ದ 159 ಕ್ಷೇತ್ರಗಳಲ್ಲಿ ನೆಲಕಚ್ಚಿದೆ.

ಜನರ ಜೀವನೋಪಾಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಹೋರಾಟವನ್ನು ಮುಂದುವರೆಸಿದ್ದು ಮತ್ತು ತೀವ್ರಗೊಳಿಸಿದ್ದು ವಿಶಾಲ ಜನಸ್ತೋಮದಲ್ಲಿ ವಿಶ್ವಾಸವನ್ನು ತುಂಬಿತು; ಮಾಧ್ಯಮಗಳ ಮೇಲೆ ಪ್ರಭಾವ ಬೀರಿತು; ವಿರೋಧ ಪಕ್ಷಗಳು ಒಂದುಗೂಡಲು ಮತ್ತು ಭಾರತದ ಸಂವಿಧಾನದಲ್ಲಿರುವ ಪ್ರಜಾತಂತ್ರದ, ಧರ್ಮನಿರಪೇಕ್ಷತೆಯ ಹಾಗೂ ಮೀಸಲಾತಿಯನ್ನು ರಕ್ಷಿಸುವಂತಹ ಪ್ರಮುಖ ವಿಷಯಗಳನ್ನು ಮುನ್ನೆಲೆಗೆ ತರಲು ಸಹಾಯವಾಯಿತು. ಸರ್ವ ಸದಸ್ಯರ ಸಭೆಯು, ಲೋಕಸಭಾ ಕ್ಷೇತ್ರಗಳಲ್ಲಿ ವಿಜಯ ಸಾಧಿಸಿದ ರೈತ ನಾಯಕರಾದ ರಾಜಸ್ಥಾನದ ಸಿಖಾರ್ ಕ್ಷೇತ್ರದಿಂದ ಅಮರಮ್, ಬಿಹಾರ್‌ನ ಅರ್‍ರಾಹ್ ಕ್ಷೇತ್ರದಿಂದ ಸುಧಾಮ ಪ್ರಸಾದ್ ಮತ್ತು ತಮಿಳುನಾಡಿನ ದಿಂಡಿಗಲ್ ಕ್ಷೇತ್ರದಿಂದ ಆರ್. ಸಚ್ಚಿದಾನಂದನ್ ಇವರುಗಳನ್ನು ಶ್ಲಾಘಿಸಿತು.

ಸಭೆಯು 'ವ್ಯಾಪಾರ ಮಾಮೂಲಿಯಂತೆ' ಸಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ಪಟ್ಟು ಹಿಡಿದು ಕುಳಿತಿರುವುದರಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕಾರ್ಪೊರೇಟ್ ಪರ ನೀತಿಗಳನ್ನು ಬದಲಿಸಬಹುದೆಂಬ ಭ್ರಮೆ ಬೇಡವೆಂಬ ತೀರ್ಮಾನಕ್ಕೆ ಬಂದಿತು. ತೀವ್ರವಾದ ಸಂಕಷ್ಟಗಳು, ವ್ಯಾಪಕವಾದ ಸಾಲ, ನಿರುದ್ಯೋಗ ಮತ್ತು ಬೆಲೆ ಏರಿಕೆಗಳಿಂದ ತತ್ತರಿಸುತ್ತಿರುವ ಜನರಿಗೆ ಪರಿಹಾರ ಒದಗಿಸಲು ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರೊಂದಿಗೆ ರೈತರ ಹಾಗೂ ಕೃಷಿ ಕಾರ್ಮಿಕರ ಹೋರಾಟಗಳನ್ನು ತೀವ್ರಗೊಳಿಸುವುದು ಘಳಿಗೆಯ ಅವಶ್ಯಕತೆ. ಕೇಂದ್ರ ಸರ್ಕಾರ 2021 ರ ಡಿಸೆಂಬರ್ 9 ರಂದು ಎಸ್‌ಕೆಎಂ ಜೊತೆ ಮಾಡಿಕೊಂಡ ಒಪ್ಪಂದವನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಚಳುವಳಿಯನ್ನು ಮತ್ತೆ ಆರಂಭಿಸಿಬೇಕೆಂದು ಸರ್ವ ಸದಸ್ಯರ ಸಭೆಯು ನಿರ್ಧರಿಸಿತು. ಆ ಒಪ್ಪಂದದಲ್ಲಿ ಸಿ2+ಶೇ.50 (ಒಟ್ಟಾರೆ ವೆಚ್ಚ+ ಹೆಚ್ಚುವರಿ ಶೇ.50) ಸೂತ್ರದಡಿ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧವಾಗಿ ಖಚಿತಪಡಿಸಬೇಕು, ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವುದನ್ನು ಹಾಗೂ ಪಂಪ್‌ಸೆಟ್‌ಗಳಿಗೆ ಪ್ರೀಪೆಯ್ಡ್ ಸ್ಮಾರ್ಟ್ ಮೀಟರು ಅಳವಡಿಸುವುದನ್ನು ನಿಲ್ಲಿಸಬೇಕು, ಚಾರಿತ್ರಿಕ ದೆಹಲಿ ರೈತ ಚಳುವಳಿಯಲ್ಲಿ ಹುತಾತ್ಮರಾದವರಿಗೆ ಪರಿಹಾರ ನೀಡಬೇಕು, ರೈತ ಚಳುವಳಿಗೆ ಸಂಬಂಧಪಟ್ಟ ಎಲ್ಲಾ ಪ್ರಕರಣಗಳನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ಹುಲ್ಲಿಗೆ ಬೆಂಕಿ ಹಾಕಿದರೆ ಅಪರಾಧ ಎನ್ನುವುದನ್ನು ಮಾಲಿನ್ಯ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಬದಲಾಯಿಸಿ ರೈತರನ್ನು ಅಪರಾಧದಿಂದ ಮುಕ್ತರನ್ನಾಗಿ ಮಾಡಬೇಕು ಎನ್ನುವ ಹಕ್ಕೊತ್ತಾಯಗಳಿದ್ದವು. ರೈತರು ದೆಹಲಿ ಗಡಿಭಾಗಗಳಲ್ಲಿ 26 ನವೆಂಬರ್, 2020 ರಿಂದ 11 ಡಿಸೆಂಬರ್, 2021 ರವರೆಗೆ ಸತತವಾಗಿ ಸಮರಶೀಲ ಹೋರಾಟ ನಡೆಸಿದರು; ರೈತರು ಹುತಾತ್ಮರಾದರು ಮತ್ತು ಲಕ್ಷಾಂತರ ರೈತರು ಸಂಕಷ್ಟಗಳನ್ನು ಎದುರಿಸಿದರು; ಅವರು ಸರ್ಕಾರವನ್ನು ತಲೆಬಾಗುವಂತೆ ಮಾಡಿದರು; ಇಷ್ಟೆಲ್ಲಾ ತ್ಯಾಗ, ಬಲಿದಾನಗಳ ಹಿನ್ನೆಲೆಯಲ್ಲಿ ಮಾಡಿಕೊಂಡ ಒಪ್ಪಂದವನ್ನು ಮುರಿದಿರುವ ಬಿಜೆಪಿ ನೇತೃತ್ವದ ರೈತ ವಿರೋಧಿ ಸರ್ಕಾರವನ್ನು ಸರ್ವ ಸದಸ್ಯರ ಸಭೆಯು ಉಗ್ರವಾಗಿ ಖಂಡಿಸಿತು.

ಮರುಹೋರಾಟದ ಭಾಗವಾಗಿ ಎಸ್‌ಕೆಎಂ ಎಲ್ಲಾ ಲೋಕಸಭಾ ಸದಸ್ಯರಿಗೆ (ಹಾಗೆಯೇ ರಾಜ್ಯಸಭಾ ಸದಸ್ಯರಿಗೂ) ತಿದ್ದುಪಡಿ ಮಾಡಿದ ಹಕ್ಕೊತ್ತಾಯಗಳ ಪಟ್ಟಿಯನ್ನು ನೀಡಬೇಕು. ಎಸ್‌ಕೆಎಂ ರಾಜ್ಯ ನಾಯಕರ ತಂಡವು ಅವರನ್ನು ಭೇಟಿಯಾಗಿ ಎನ್‌ಡಿಎ ಸರ್ಕಾರ ಎಸ್‌ಕೆಎಂ ಒತ್ತಾಯಿಸುತ್ತಿರುವ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಒತ್ತಡ ಹೇರಲು ಮನವಿ ಮಾಡಿಕೊಳ್ಳಬೇಕು. ಎಸ್‌ಕೆಎಂ ಪ್ರಧಾನ ಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕರನ್ನು ಭೇಟಿಯಾಗಿ ಮನವಿ ಪತ್ರವನ್ನು ಸಲ್ಲಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿತು. ಅದರಂತೆ ಸಂಸದರಿಗೆ, ಪ್ರಧಾನ ಮಂತ್ರಿಗೆ ಹಾಗೂ ವಿರೋಧ ಪಕ್ಷದ ನಾಯಕರಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಎಸ್‌ಕೆಎಂ ಪತ್ರಿಕಾ ಗೋಷ್ಠಿಯನ್ನು ಕರೆದು, 2024 ರ ಆಗಸ್ಟ್ 9 ರಂದು ಕ್ವಿಟ್ ಇಂಡಿಯಾ ದಿನವನ್ನು ದೇಶದಾದ್ಯಂತ 'ಕಾರ್ಪೊರೇಟ್ ಕಂಪೆನಿಗಳೇ ಭಾರತ ಬಿಟ್ಟು ತೊಲಗಿ' ದಿನವನ್ನಾಗಿ ಆಚರಿಸಲು ಕರೆ ನೀಡಿತು. ಭಾರತ ವಿಶ್ವ ವ್ಯಾಪಾರ ಕೇಂದ್ರದಿಂದ ಹೊರಬರಬೇಕು, ಕೃಷಿ ಉತ್ಪಾದನೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಬೇಡ, ಕೃಷಿಕರ ಮಧ್ಯೆ ವ್ಯಾಪಾರವನ್ನು ಜನಪ್ರಿಯಗೊಳಿಸಬೇಕು ಎನ್ನುವುದು ಹಕ್ಕೊತ್ತಾಯವಾಗಿತ್ತು. ಅದರಂತೆ ದೇಶದೆಲ್ಲೆಡೆ ವಿವಿಧ ರೀತಿಯಲ್ಲಿ ಪ್ರತಿಭಟನೆಗಳು ನಡೆದವು.

ಎಸ್‌ಕೆಎಂ, ಪಂಜಾಬ್ ಘಟಕವು ಆಗಸ್ಟ್ 17 ರಂದು ಮುಖ್ಯಮಂತ್ರಿಗಳ ಮನೆಯೂ ಸೇರಿದಂತೆ ಎಲ್ಲಾ ಮಂತ್ರಿಗಳ ಮನೆ ಮುಂದೆ 3 ಗಂಟೆಗಳ ಕಾಲ ಪ್ರತಿಭಟನೆಯನ್ನು ಸಂಘಟಿಸುವುದೆಂದು ನಿರ್ಧಾರವಾಯಿತು. ತೀವ್ರವಾಗಿರುವ ನೀರಿನ ಬಿಕ್ಕಟ್ಟನ್ನು ಬಗೆಹರಿಸಬೇಕು, ಸಾಲದ ಹೊರೆಯನ್ನು ಇಳಿಸಬೇಕು, ರಸ್ತೆ ಕಾರಿಡಾರ್ ಮೂಲಕ ಭಾರತ–ಪಾಕಿಸ್ತಾನ ವ್ಯಾಪಾರವನ್ನು ಆರಂಭಿಸಬೇಕು ಮತ್ತು ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ವಿದ್ಯುತ್ ಹಾಗೂ ಸಂಪನ್ಮೂಲಗಳ ಕೇಂದ್ರೀಕರಣದ ವಿರುದ್ಧ ಪಂಜಾಬ್ ರಾಜ್ಯದ ಹಕ್ಕೊತ್ತಾಯಗಳಿಗಾಗಿ ಈ ಪ್ರತಿಭಟನೆ ನಡೆಯುತ್ತದೆ. ಅದೇ ದಿನ ಎಸ್‌ಕೆಎಂ ಎಲ್ಲಾ ರಾಜ್ಯಗಳಲ್ಲೂ ನೀರಿನ ಸಮಸ್ಯೆ, ಕೃಷಿ ಮೇಲೆ ಪರಿಣಾಮ ಬೀರುತ್ತಿರುವ ಹವಾಮಾನ ವೈಪರೀತ್ಯ ಮತ್ತು ನೀರು, ಭೂಮಿ, ಕಾಡು ಹಾಗೂ ಖನಿಜಗಳನ್ನು ಸರಕುಗಳನ್ನಾಗಿ ಮಾಡುವುದನ್ನು ವಿರೋಧಿಸಿ ಸಮಾವೇಶಗಳನ್ನು ಸಂಘಟಿಸುತ್ತದೆ. ಎಸ್‌ಕೆಎಂ ಹಕ್ಕೊತ್ತಾಯಗಳನ್ನು ಆಧರಿಸಿ ಮುಂದೆ ಬರುವ ವಿಧಾನಸಭಾ ಚುನಾಣೆಯಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಲು ಹರಿಯಾಣ, ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಂಯೋಜನಾ ಸಮಿತಿಗಳು ಸಭೆ ನಡೆಸಿ 'ಬಿಜೆಪಿಯ ಮುಖವಾಡ ತೆಗೆಯಿರಿ, ಬಿಜೆಪಿಯನ್ನು ವಿರೋಧಿಸಿ ಮತ್ತು ಶಿಕ್ಷಿಸಿ' ಪ್ರಚಾರವನ್ನು ಖಚಿತಪಡಿಸುತ್ತವೆ. ರಾಜ್ಯ ಘಟಕಗಳು ಕಾರ್ಮಿಕ ಸಂಘಟನೆಗಳು ಹಾಗೂ ಇನ್ನಿತರ ಸಮೂಹ ಮತ್ತು ವರ್ಗ ಸಂಘಟನೆಗಳೊಂದಿಗೆ ಸಂಯೋಜಿಸಿಕೊಂಡು ವಾಹನ ಜಾಥಾ, ಪಾದಯಾತ್ರೆ, ಮಹಾಪಂಚಾಯತ್‌ಗಳನ್ನು ಸಂಘಟಿಸುವ ಸಾಧ್ಯತೆಯನ್ನು ಹುಡುಕುತ್ತವೆ. ಎಲ್ಲಾ ರಾಜ್ಯಗಳಲ್ಲೂ ತಕ್ಷಣವೇ ರೈತರ ಜ್ವಲಂತ ಸಮಸ್ಯೆಗಳನ್ನು ಮತ್ತು ಕೇಂದ್ರೀಕೃತವಾಗಿ ನಡೆಯುವ ಹೋರಾಟದೊಂದಿಗೆ ಪ್ರತಿಭಟನಾ ಕಾರ್ಯಕ್ರಮಗಳನ್ನು ಯೋಜಿಸಲು ರಾಜ್ಯ ಮಟ್ಟದ ಸಂಯೋಜನಾ ಸಮಿತಿಗಳು ಸಭೆ ಸೇರುತ್ತವೆ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ದುಡಿಯುವ ಜನರ, ಕೃಷಿ ಕಾರ್ಮಿಕರ, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ ಹಾಗೂ ಇನ್ನಿತರ ಸಮೂಹ ಸಂಘಟನೆಗಳೊಂದಿಗೆ ಸಮನ್ವಯ ಸಮಿತಿಯ ಸಭೆಯನ್ನು ಕರೆಯಲಾಗುವುದೆಂದು ತೀರ್ಮಾನಿಸಲಾಯಿತು.

## 2022 – ಶ್ರೀಲಂಕಾದ ಜನ ಬಂಡಾಯ ಹೋರಾಟದ ಪ್ರಮುಖ ನಾಯಕರಿಗೆ ಸನ್ಮಾನ

ಶ್ರೀಲಂಕಾದ ಫ್ರಂಟ್‌ಲೈನ್ ಸೋಷಲಿಸ್ಟ್ ಪಾರ್ಟಿಯ ನಾಯಕರೂ ಹಾಗೂ ಪ್ರಖ್ಯಾತ ವಕೀಲರೂ ಆದ ಕಾಮ್ರೇಡ್ ನುವಾನ್ ಬೋಪೆಜ್ ಇತ್ತೀಚಿಗೆ ಕೊಲ್ಕತ್ತಾಗೆ ಭೇಟಿ ನೀಡಿದ್ದರು. ಅವರು 2022 ರ ಮೇ 'ಸಾಮೂಹಿಕ ದಂಗೆ'ಯ (ಅರಗಳಾಯ) ಪ್ರಮುಖ ಸಂಘಟಕರಾಗಿದ್ದರು. ಲಕ್ಷಾಂತರ ಜನರು ಜನ ಚಳುವಳಿಯ ಮೂಲಕ ಶ್ರೀಲಂಕಾದ ರಾಜಧಾನಿ ಕೊಲಂಬೊದಲ್ಲಿ ಅಧ್ಯಕ್ಷರ ಭವನವನ್ನು ವಶಪಡಿಸಿಕೊಂಡರು. ಈ ಆಂದೋಲನ 'ಗಾಲ್ ಫೇಸ್ ಪ್ರತಿಭಟನೆ' ಎಂದು ಜನಪ್ರಿಯವಾಗಿದೆ.

ಅವರು ಕೊಲ್ಕತ್ತಾದಲ್ಲಿದ್ದಾಗ ನಮ್ಮ ಪಕ್ಷವಾದ ಎಸ್‌ಯುಸಿಐ (ಕಮ್ಯುನಿಸ್ಟ್) ಜೊತೆ ರಾಜಕೀಯ ಚರ್ಚೆ ನಡೆಸಲು ಉತ್ಸುಕತೆ ತೋರಿಸಿದರು. ಅದರಂತೆ ಜುಲೈ 4 ರಂದು ಕಾಮ್ರೇಡ್ ನುವಾನ್ ಅವರಿಗೆ ಕೊಲ್ಕತ್ತಾದಲ್ಲಿರುವ ಕೇಂದ್ರ ಕಚೇರಿಯಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾ. ಸುಭಾಷ್ ದಾಸ್ ಗುಪ್ತಾ ಮತ್ತು ಕಾ. ದೇಬಶಿಶ್ ರಾಯ್ ಸನ್ಮಾನ ಮಾಡಿದರು. ಕಾಮ್ರೇಡ್ ಸುಭಾಷ್ ದಾಸ್ ಗುಪ್ತಾ ಕಾರ್ಮಿಕವರ್ಗದ ಮಹಾನ್ ನಾಯಕರಾದ ಹಾಗೂ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಿವದಾಸ್ ಘೋಷರ, ಅವರ ಸಹಯೋಧರು ಹಾಗೂ ಅವರ ನಂತರದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕಾಮ್ರೇಡ್ ನಿಹಾರ್ ಮುಖರ್ಜಿಯವರ ಮತ್ತು ಪ್ರಸ್ತುತ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರವಾಶ್ ಘೋಷರ ಕೃತಿಗಳನ್ನು ಕೊಡುಗೆಯಾಗಿ ನೀಡಿದರು.

ಅವರೊಂದಿಗೆ ನಡೆದ ಚರ್ಚೆ ಅತ್ಯಂತ ಸೌಹಾರ್ದಯುತವಾಗಿತ್ತು ಮತ್ತು ಫಲಪ್ರದವಾಗಿತ್ತು. ಕಾಮ್ರೇಡ್ ನುವಾನ್ ಶ್ರೀಲಂಕಾದ ಪ್ರಸ್ತುತ ಶೋಚನೀಯ ಪರಿಸ್ಥಿತಿಯನ್ನು, ಅದರ ಜೊತೆಗೆ ಎಡ ಹಾಗೂ ಕ್ರಾಂತಿಕಾರಿ ಚಳುವಳಿಯ ಸಮಸ್ಯೆಗಳನ್ನು ಮತ್ತು ಭವಿಷ್ಯವನ್ನು ಪರಿಚಯಿಸಿದರು. ಅವರು ಚರ್ಚೆಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದರು ಮತ್ತು ನಿಯತವಾದ ಪತ್ರ ವ್ಯವಹಾರ ಹಾಗೂ ಕಾಲಕಾಲಕ್ಕೆ ವಿಚಾರ ವಿನಿಮಯಗಳೊಂದಿಗೆ ನಮ್ಮ ಪಕ್ಷದೊಂದಿಗೆ ಸಂಪರ್ಕವನ್ನು ಹೊಂದಿರಲು ಬಯಸಿದರು. ಅವರನ್ನು ನಮ್ಮ ಪಕ್ಷದ ವಿದ್ಯಾರ್ಥಿ ಹಾಗೂ ಯುವ ಸಂಘಟನೆಗಳಾದ ಎಐಡಿಎಸ್‌ಓ ಮತ್ತು ಎಐಡಿವೈಓ ಸಹ ಸನ್ಮಾನಿಸಿದವು.



ಶ್ರೀಲಂಕಾದ ಕಾಮ್ರೇಡ್ ನುವಾನ್ ಬೋಪೆಜ್ ಅವರೊಂದಿಗೆ ಕಾ. ಸುಭಾಷ್ ದಾಸ್ ಗುಪ್ತಾ ಮತ್ತು ಕಾ. ದೇಬಶಿಶ್ ರಾಯ್

ಆಶಾ ಜಿಲ್ಲಾ ಸಮ್ಮೇಳನಗಳು

# ಕಲಬುರಗಿ, ಸೆಪ್ಟೆಂಬರ್ 13–14 : 'ಆಶಾ'ಗಳ ರಾಜ್ಯ ಸಮ್ಮೇಳನಕ್ಕೆ ಬರೆದ ಮುನ್ನುಡಿ

'ಪ್ರಪಂಚದ ಅತಿ ಹೆಚ್ಚು ಸಾಮೂಹಿಕ ಆರೋಗ್ಯ ಕಾರ್ಯಕರ್ತೆಯರನ್ನು ಹೊಂದಿರುವ ಯೋಜನೆ' –ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ನೇಮಕವಾದ ರಾಜ್ಯದ 42,000 ಆಶಾ ಕಾರ್ಯಕರ್ತೆಯರನ್ನು ಸದಸ್ಯರಾಗಿ ಹೊಂದಿರುವ ಏಕೈಕ ಆಶಾ ಕಾರ್ಯಕರ್ತೆಯರ ಸಂಘಟನೆ **'ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ'**ವು ಸೆಪ್ಟೆಂಬರ್ 13–14,2024 ರಂದು ಕಲಬುರಗಿಯಲ್ಲಿ ಪ್ರಥಮ ರಾಜ್ಯ ಮಟ್ಟದ ಸಮ್ಮೇಳನವನ್ನು ಸಂಘಟಿಸುತ್ತಿದೆ. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯದ ಎಲ್ಲೆಡೆ ತಾಲ್ಲೂಕು, ಜಿಲ್ಲಾ ಸಮ್ಮೇಳನಗಳು ಜರುಗುತ್ತಿವೆ.

ರಾಜ್ಯದಲ್ಲಿ ಆಶಾ ಕಾರ್ಯಕರ್ತೆಯರು 2008–09ರಲ್ಲಿ ಆರೋಗ್ಯ ಇಲಾಖೆಯಡಿ ನೇಮಕವಾದರೂ, ಅವರು ಸರಕಾರಿ ನೌಕರರಲ್ಲ. ಅವರನ್ನು ಕಾರ್ಮಿಕರೆಂದು ಪರಿಗಣಿಸದೆ ಅತ್ಯಲ್ಪ ಪ್ರೋತ್ಸಾಹಧನ ನೀಡಿ ಸರ್ಕಾರ ಅನ್ಯಾಯ ಎಸಗುತ್ತಿರುವುದನ್ನು ನಮ್ಮ ಕಾರ್ಮಿಕ ಮುಂದಳ ಎಐಯುಟಿಯುಸಿ ಕರ್ನಾಟಕ ರಾಜ್ಯ ಸಮಿತಿಯು ಗಮನಿಸಿ ರಾಜ್ಯದಾದ್ಯಂತ ಎಲ್ಲಾ ಗ್ರಾಮಗಳಲ್ಲಿ ಹರಿದು ಹಂಚಿಹೋಗಿದ್ದ, ಪರಸ್ಪರ ಗುರುತೇ ಇಲ್ಲದ ಈ ಆಶಾ ಕಾರ್ಯಕರ್ತೆಯರನ್ನು ಒಂದುಗೂಡಿಸಿತು. 2009ರಲ್ಲಿ ಆರಂಭವಾದ ಆಶಾ ಸಂಘಟನೆ ಸುದೀರ್ಘ 15 ವರ್ಷಗಳ ಹೋರಾಟದ ಹಾದಿಯ ಏಳು ಬೀಳುಗಳನ್ನು ಅವಲೋಕಿಸಿ ಮುಂದಿನ ಗುರಿಯನ್ನು ಸ್ಪಷ್ಟವಾಗಿ ಗುರುತಿಸಿ ಬಲಿಷ್ಠ ಚಳುವಳಿಯನ್ನು ರೂಪಿಸಿ, ಬೆಳೆಸಲು ಸಮ್ಮೇಳನಕ್ಕೆ ಸಜ್ಜಾಗುತ್ತಿದೆ.

ತಮ್ಮ ದುಃಖ ದುಮ್ಮಾನಗಳನ್ನು ಅರಿತು, ತಮ್ಮ ಧ್ವನಿಯಾದ ತಮ್ಮದೇ ಸಂಘದ ಸಮ್ಮೇಳನವನ್ನು ಹಬ್ಬದಂತೆ ಸಡಗರ ಸಂಭ್ರಮಗಳಿಂದ ಮಾಡತೊಡಗಿದ್ದಾರೆ. ತಳಿರು–ತೋರಣದಂತೆ ಧ್ವಜಗಳನ್ನು, ಫೆಸ್ಟೂನ್‌ಗಳನ್ನು ಬ್ಯಾನರ್‌ಗಳನ್ನು ಕಟ್ಟಿ, ಸಭಾಂಗಣದ ಮುಂದೆ ರಂಗೋಲಿಯನ್ನು ಇಟ್ಟು, ಬಣ್ಣ ಬಣ್ಣದ ಹಾರಗಳಿಂದ ಅಲಂಕೃತಗೊಳಿಸಿ, ಬೇಡಿಕೆಗಳನ್ನು ಏರು ಧ್ವನಿಯಲ್ಲಿ ಘೋಷಣೆ ಕೂಗುತ್ತ, ವರದಿ–ಗೊತ್ತುವಳಿಯನ್ನು ಉತ್ಸಾಹದಿಂದ ವಾಚಿಸುತ್ತ, ಉತ್ಕಟವಾದ ಭಾವೋದ್ವೇಗಗಳಿಂದ ಅನುಭವಗಳನ್ನು, ಅಭಿಪ್ರಾಯಗಳನ್ನು ಹೇಳುತ್ತಾ ಎಲ್ಲಾ ಕಲಾಪಗಳಲ್ಲಿ ಈ ಕಾರ್ಯಕರ್ತೆಯರು ತೊಡಗಿರುವುದು ಸ್ಫೂರ್ತಿದಾಯಕವಾಗಿದೆ.

ಈ ಸಮ್ಮೇಳನಗಳು ಅವರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಾದ ಹಕ್ಕೊತ್ತಾಯಗಳನ್ನು ಎತ್ತಿಹಿಡಿಯುತ್ತಿವೆ. ಅವುಗಳೆಂದರೆ, 'ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು, ಅಲ್ಲಿಯವರೆಗೆ ಅವರನ್ನು ಕಾರ್ಮಿಕರು ಎಂದು ಪರಿಗಣಿಸಿ ಎಲ್ಲಾ ಶಾಸನಬದ್ಧ ಸೌಲಭ್ಯಗಳನ್ನು ಒದಗಿಸಬೇಕು, ಆಶಾ ಕಾರ್ಯಕರ್ತೆಯರಿಗೆ ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸಬೇಕು, ಸಾರ್ವಜನಿಕ ಆರೋಗ್ಯವನ್ನು ಬಲಪಡಿಸಲು ಅಗತ್ಯವಿರುವಷ್ಟು ಬಜೆಟ್‌ನ್ನು ಒದಗಿಸಬೇಕು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಕನಿಷ್ಠ ರೂ.15,000 ಒಟ್ಟು ಪ್ರೋತ್ಸಾಹ ಧನ ನೀಡಬೇಕು, ನಗರ ಆಶಾ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕನಿಷ್ಠ ರೂ.2000ರಷ್ಟು ಗೌರವಧನವನ್ನು ಹೆಚ್ಚಿಗೆ ಮಾಡಬೇಕು, 60 ವರ್ಷಕ್ಕೆ ಸೇವಾ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇರುವಂತೆ ಇಡಿಗಂಟು ಅಥವಾ ನಿವೃತ್ತಿ ಪರಿಹಾರ ರೂ.3 ಲಕ್ಷಕ್ಕೆ ಹೆಚ್ಚಿಸಬೇಕು, ಆಶಾ ಕಾರ್ಯಕ್ರಮದಲ್ಲಿ ಫೆಸಿಲಿಟೇಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅವರ ಹುದ್ದೆಗೆ ತಕ್ಕಂತೆ ಮಾಸಿಕ ವೇತನ, ಪ್ರಯಾಣ ಭತ್ಯೆ ಇತ್ಯಾದಿಗಳನ್ನು ಹೆಚ್ಚಿಸಬೇಕು–ಇತ್ಯಾದಿ ಬೇಡಿಕೆಗಳೊಂದಿಗೆ ಅತ್ಯಂತ ಸಮರೋತ್ಸಾಹದಿಂದ ಸಮ್ಮೇಳನಗಳು ಜರುಗುತ್ತಿವೆ.

ಈ ಜಿಲ್ಲಾ ಸಮ್ಮೇಳನದ ಜೊತೆಗೆ ಪೂರ್ವಭಾವಿಯಾಗಿ ರಾಜ್ಯದಲ್ಲಿ ಒಟ್ಟಾರೆ 50 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ತಾಲ್ಲೂಕು ಸಮ್ಮೇಳನಗಳು ನಡೆದಿವೆ. ಎಐಯುಟಿಯುಸಿ ಕ್ರಾಂತಿಕಾರಿ ಕಾರ್ಮಿಕ ಸಂಘಟನೆ ಮಾರ್ಗದರ್ಶನದಲ್ಲಿ ಆಶಾ ಕಾರ್ಯಕರ್ತೆಯರು ಹೋರಾಟದ ಅಗ್ನಿಕುಂಡದಲ್ಲಿ ಹದಗೊಂಡ ಉಕ್ಕಿನಂತೆ ದಿಟ್ಟ ಹೋರಾಟಗಾರ್ತಿಯರಾಗಿ ಹೊರಹೊಮ್ಮಿರುವುದು, ಈ ಸಮ್ಮೇಳನದ ತಯಾರಿಯಿಂದ ಹಿಡಿದು, ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಆಶಾ ಕಾರ್ಯಕರ್ತೆಯರು ತೊಡಗಿರುವುದೇ ಸಾಕ್ಷಿಯಾಗಿದೆ. ಮುಂಬರುವ ರಾಜ್ಯ ಸಮ್ಮೇಳನದ ಮೂಲಕ ಮುಂದಿನ ದಿನಗಳಲ್ಲಿ ಈ ದಿಟ್ಟ ಹೋರಾಟಗಾರ್ತಿಯರು ರಾಜ್ಯದ, ದೇಶದ ಕಾರ್ಮಿಕ ಚಳುವಳಿಗೆ ಹೊಸ ಅಧ್ಯಾಯವನ್ನು ಬರೆಯುವಂತಹ ಸಮರಶೀಲ ಚಳುವಳಿಯ ರೂಪುರೇಷೆಯೊಂದಿಗೆ, ಹೆಚ್ಚಿನ ಉತ್ಸಾಹ, ತಿಳುವಳಿಕೆಯೊಂದಿಗೆ ದೃಢಸಂಕಲ್ಪದೊಂದಿಗೆ ಬರಲಿ.











































## ದಾವಣಗೆರೆ : ಬೀದಿ ಬದಿ ವ್ಯಾಪಾರಸ್ಥರ ಬೃಹತ್ ಪ್ರತಿಭಟನೆ

ದಾವಣಗೆರೆ ಜಿಲ್ಲಾ ಸ್ಥಿರ ಹಾಗೂ ಸಂಚಾರಿ ಚಿಲ್ಲರೆ ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ದಾವಣಗೆರೆ ನಗರದ ಸಮಸ್ತ ಬೀದಿ ಬದಿ ವ್ಯಪಾರಸ್ಥರು ಬೃಹತ್ ಪ್ರತಿಭಟನೆ ಮಾಡಿದರು.

ವ್ಯಾಪಾರಸ್ಥರ ಪ್ರಬಲ ಹೋರಾಟಕ್ಕೆ ಮಣಿದು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀಮತಿ ರೇಣುಕಾರವರು ವ್ಯಾಪಾರಸ್ಥರನ್ನು ಯಾವುದೇ ಕಾರಣಕ್ಕೂ ತಮ್ಮ ಸ್ಥಳದಿಂದ ಒಕ್ಕಲೆಬ್ಬಿಸುವುದಿಲ್ಲ ಎಂದು ಭರವಸೆ ನೀಡಿದರು. ಹಾಗೂ ಮುಂದೆ ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಟೌನ್ ವೆಂಡಿಂಗ್ ಸಮಿತಿಯ ಸಭೆ ನಡೆಸಿ ಅವರ ಒಪ್ಪಿಗೆಯ ಮೇರೆಗೆ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರು.








## ಕಾರ್ಯಕರ್ತರ ಶಿಬಿರ

4ನೇ ಪುಟದಿಂದ ಸಂಪಾದಿಸಿಕೊಂಡರು. ಎಐಡಿಎಸ್ಓಗೆ ಪ್ರೇರಕಶಕ್ತಿಯಾಗಿರುವ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರು ಹಾಗೂ ವಿಶ್ವದ ಕಾರ್ಮಿಕ ವರ್ಗದ ಮಹಾನ್ ನಾಯಕರಾದ ಕಾ.ಶಿವದಾಸ್ ಘೋಷ್ ಸೇರಿದಂತೆ ಪ್ರಪಂಚದ ಎಲ್ಲ ಮಹಾನ್ ವ್ಯಕ್ತಿಗಳು ಬಯಸಿದಂತೆ ಸಮಾಜದಲ್ಲಿರುವ ಅಸಮಾನತೆಯನ್ನು ತೊಲಗಿಸಲು ವಿದ್ಯಾರ್ಥಿಗಳು ಹೋರಾಟವನ್ನು ನಡೆಸಬೇಕೆಂದು ಎಸ್.ಯು.ಸಿ.ಐ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯುರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಕರೆ ನೀಡಿದರು.

ಶಿಬಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಮೂರು ದಿನದ ಕಾರ್ಯಾಗಾರದಲ್ಲಿ ತರಬೇತಿ ಪಡೆದ ಹಾಡುಗಳು, ನಾಟಕಗಳು ಹಾಗೂ ನೃತ್ಯಗಳ ಪ್ರದರ್ಶನ ನೀಡಲಾಯಿತು.

ಎಐಡಿಎಸ್ಓ ರಾಜ್ಯ ಅಧ್ಯಕ್ಷರಾದ ಕಾ.ಅಶ್ವಿನಿ ಕೆ.ಎಸ್, ರಾಜ್ಯ ಕಾರ್ಯದರ್ಶಿಗಳಾದ ಕಾ.ಅಜಯ್ ಕಾಮತ್, ಉಪಾಧ್ಯಕ್ಷರುಗಳಾದ ಕಾ. ಹಣಮಂತು ಎಚ್.ಎಸ್, ಅಭಯಾ ದಿವಾಕರ್, ಅಪೂರ್ವ, ಚಂದ್ರಕಲಾ, ರಾಜ್ಯ ಖಜಾಂಚಿ ಸುಭಾಷ್, ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ವಿವಿಧ ಘೋಷ್ಠಿಗಳ ನೇತೃತ್ವ ವಹಿಸಿದ್ದರು. ವಿವಿಧ ಜಿಲ್ಲೆಗಳಿಂದ 650 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.

## ರೈಲ್ವೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಎಲ್ಲಾ ರೈಲುಗಳಲ್ಲಿ ಕಾಯ್ದಿರಿಸದ ಮತ್ತು ಸ್ಲೀಪರ್ ಕ್ಲಾಸ್ ಕೋಚ್‌ಗಳನ್ನು ಹೆಚ್ಚಿಸಲು ಆಗ್ರಹಿಸಿ ಎಐಡಿವೈಓ ನೇತೃತ್ವದಲ್ಲಿ ವಿವಿಧ ರೈಲ್ವೆ ಸ್ಟೇಷನ್‌ಗಳಲ್ಲಿ ಸಹಿ ಸಂಗ್ರಹ ಅಭಿಯಾನ



ಧಾರವಾಡ



ಕೊಪ್ಪಳ



ಹೊಸಪೇಟೆ, ವಿಜಯನಗರ



ಮೈಸೂರು

## ವಿನೇಶ್ ಪೋಗಟ್‌ಗೆ ಒಲಿಂಪಿಕ್ಸ್ ಕುಸ್ತಿಪಂದ್ಯದ ಅಂತಿಮ ಸುತ್ತಿಗೆ ಅನರ್ಹತೆ:

### ಈ ಬಗ್ಗೆ ಎಸ್‌ಯುಸಿಐ(ಸಿ) ಹರ್ಯಾಣ ರಾಜ್ಯದ ಹೇಳಿಕೆ

ಎಸ್‌ಯುಸಿಐ(ಸಿ) ಹರ್ಯಾಣ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ರಾಜೇಂದರ್ ಸಿಂಗ್ ಅವರು 08.08.24 ರಂದು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅತ್ಯುತ್ತಮ ಆಟ ಪ್ರದರ್ಶಿಸಿ, ವಿಶ್ವದ ಹೆಸರಾಂತ ಕುಸ್ತಿಪಟುಗಳನ್ನು ಸೋಲಿಸಿ ಅಂತಿಮ ಸುತ್ತಿಗೆ ತಲುಪಿ, ದೇಶಕ್ಕೆ ಕೀರ್ತಿ ತಂದಂಥ ವಿನೇಶ್ ಪೋಗಟ್‌ರವರನ್ನು ಶ್ಲಾಘಿಸಿದ್ದಾರೆ. ಕುಸ್ತಿಪಟು ವಿನೇಶ್‌ರವರು ಜಪಾನಿನ ಯು ಸುಸಾಕಿ ಮತ್ತು ಉಕ್ರೇನಿನ ಒಕ್ಸಾನಾ ಲಿವಾಖ್‌ರನ್ನು ಕ್ವಾಟರ್ ಫೈನಲ್ಸ್‌ನಲ್ಲಿ ಮತ್ತು ಕ್ಯೂಬಾದ ಯುಸ್‌ನೇಯ್ಲಿಸ್ ಗುಜ್‌ಮ್ಯಾನ್ ಲೊಪೆಜ್‌ರನ್ನು ಸೆಮಿ ಫೈನಲ್ಸ್‌ನಲ್ಲಿ ಗೆದ್ದು ಅಂತಿಮ ಸುತ್ತಿಗೆ ತಲುಪಿರುವುದು, ದೇಶಕ್ಕೆ ಹೆಮ್ಮೆಯ ವಿಷಯ. “ಆದರೆ, ಭಾರತದ ಸರ್ಕಾರ ವಿನೇಶ್ ವಿರುದ್ಧ ಇರುವಂತೆ ತೋರುತ್ತದೆ. ಇಡೀ ದೇಶ ವಿನೇಶ್‌ರವರನ್ನು ಅಭಿನಂದಿಸುತ್ತಿರುವಾಗ, ಮತ್ತವರು ಸುವರ್ಣ ಪದಕವನ್ನು ಗೆಲ್ಲುವ ಹೊಸ್ತಿಲಲ್ಲಿರುವಾಗ, ತಾರಾ ಕ್ರೀಡಾಪಟುಗಳ ಬಗ್ಗೆ ತಮಗೆ ಎಷ್ಟೊಂದು ಹೆಮ್ಮೆ ಇದೆ ತೋರಿಸಲು ಸದಾ ಅವರ ಮಧ್ಯೆ ಇರುವ ಪ್ರಧಾನಿ ಮೋದಿಯವರು, ವಿನೇಶ್ ಅವರ ಅಮೋಘ ಪ್ರದರ್ಶನದ ಬಗ್ಗೆ ಒಂದು ಮಾತೂ ಆಡಲಿಲ್ಲ. ಅವರ ಮತ್ತು ಅವರ ಸರ್ಕಾರದ ಈ ವಿವರಣೆಗೆ ಸಿಗದ ಮೌನ ಕಣ್ಣುಕುಕ್ಕುವಂಥಾದ್ದು. ಆದರೆ, ಹೆಚ್ಚಿನ ತೂಕದ ಕಾರಣದಿಂದ ವಿನೇಶ್‌ರನ್ನು ಅನರ್ಹಗೊಳಿಸಿದಾಕ್ಷಣವೇ, ಮೋದಿಯವರು ತಮ್ಮ ಮೌನವನ್ನು ಮುರಿದು, ಈ ಹಿನ್ನಡೆ ನೋವು ತರುತ್ತಿದೆ, ತಮಗೆ ಇದರಿಂದ ಬೇಸರವಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಕ್ರೀಡಾ ಸಚಿವರು, ವಿನೇಶ್‌ರವರಿಗೆ ಸಿಗಬೇಕಾದ ರಜತ ಪದಕವನ್ನು ದೊರಕಿಸಲು ಒಲಿಂಪಿಕ್ಸ್‌ನ ಅತ್ಯುನ್ನತ ಸಮಿತಿಯನ್ನು ಆಗ್ರಹಿಸುತ್ತಾ, ತಪ್ಪಾದ ನಿರ್ಧಾರದಿಂದೇನಾದರೂ ವಿನೇಶ್ ಬಲಿಪಶುವಾಗಿದ್ದಾರೆಯೇ ಎಂಬುದನ್ನು ಕಂಡು ಹಿಡಿಯಲು ಒಂದು ಪುನರಾವಲೋಕನದ ಅರ್ಜಿ ಹಾಕುವ ಬದಲಿಗೆ, ಅವರಿಗಾಗಿ ಸರ್ಕಾರ ಮಾಡಿರುವ ಒಟ್ಟಾರೆ ವೆಚ್ಚದ ಬಗ್ಗೆ ಸಂಸತ್ತಿನಲ್ಲಿ ಮಂಡಿಸಿದರು. ವಿನೇಶ್‌ರವರ ಆಹಾರ ತಜ್ಞರು ಹಾಗೂ ಇತರ ನೆರವಿನ ತಜ್ಞರನ್ನು ಒಳಗೊಂಡ ತಜ್ಞ ತಂಡದವರು ತಮ್ಮ ಕರ್ತವ್ಯವನ್ನು ಮತ್ತು ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಎಲ್ಲಾದರೂ ಸೋತಿದ್ದಾರೆಯೇ ಎಂದು ಕಂಡು ಹಿಡಿಯಲು ಮತ್ತು ವಿನೇಶ್ ಅವರು ಮಾಡಿರುವ ಷಡ್ಯಂತ್ರದ ಆರೋಪದ ವಿಚಾರಣೆ ನಡೆಸಲು ಕ್ರೀಡಾ ಸಚಿವರು ಪ್ಯಾರಿಸ್‌ಗೆ ಧಾವಿಸಬೇಕಾಗಿತ್ತು.

ಮಹಿಳಾ ಕುಸ್ತಿಪಟುಗಳನ್ನು ಬಹಳ ಕಾಲ ಲೈಂಗಿಕ ದೌರ್ಜನ್ಯಕ್ಕೆ ಗುರಿ ಮಾಡಿದ್ದ ಆರೋಪ ಹೊಂದಿದ್ದ ಬಿಜೆಪಿ ಸಂಸದ ಮತ್ತು ಭಾರತೀಯ ಕುಸ್ತಿ ಮಂಡಲಿಯ ಮಾಜಿ ಅಧ್ಯಕ್ಷನಾದ ಬ್ರಿಜ್ ಭೂಷಣ್ ಸಿಂಗ್‌ರ ವಿರುದ್ಧ ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದ ಕಾರಣಕ್ಕೆ ವಿನೇಶ್‌ರವರು ಸರ್ಕಾರದ ಅಸಮಾಧಾನಕ್ಕೆ ತುತ್ತಾಗಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಭಾರತ ಸರ್ಕಾರ, ಒಲಿಂಪಿಕ್ಸ್‌ನ ಈ ಕುಸ್ತಿಪಂದ್ಯದಲ್ಲಿ ನಿಜವಾಗಿ ನಡೆದಿದ್ದೇನು ಎಂದು ವಿಚಾರಣೆ ನಡೆಸಲು ಹೋಗದ್ದಕ್ಕೆ ಕಾರಣ ಇದೇ ಇರಬಹುದೇ? ಎಸ್‌ಯುಸಿಐ(ಸಿ), ವಿನೇಶ್ ಅವರನ್ನು ಕುಸ್ತಿಕ್ರೀಡೆಯಲ್ಲಿ ರಾಷ್ಟ್ರೀಯ ಹೆಮ್ಮೆ ಎಂದು ಗೌರವಿಸಲು ಹಾಗೂ ಸುವರ್ಣ ಪದಕವನ್ನು ಗೆಲ್ಲಲು ಅವರಿಗೆ ಅವಕಾಶ ನೀಡುವಂತೆ ಬಲವಾಗಿ ಆಗ್ರಹಿಸಲು ಕ್ರೀಡಾಪ್ರೇಮಿ ಜನರಲ್ಲಿ ಮನವಿ ಮಾಡಿಕೊಳ್ಳುತ್ತದೆ.”

# ಭಾರತೀಯ ರೈಲ್ವೆಯ ಭಯಾನಕ ಪ್ರಯಾಣ

ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಾರತವು ಹಲವಾರು ಮಾರಣಾಂತಿಕ ರೈಲು ಅಪಘಾತಗಳಿಗೆ, ಸರಕು ಮತ್ತು ಪ್ರಯಾಣಿಕರ ರೈಲುಗಳ ಹಳಿತಪ್ಪುವಿಕೆಗೆ ಸಾಕ್ಷಿಯಾಗಿದೆ. ಅಧಿಕೃತ ಅಂಕಿಅಂಶಗಳ ಪ್ರಕಾರ 2014 ರಿಂದ ಮಾರ್ಚ್ 2023 ರವರೆಗೆ, ಬಿಜೆಪಿ ಆಡಳಿತದಲ್ಲಿ 638 ಅಪಘಾತಗಳು ಸಂಭವಿಸಿದ್ದು 781 ಸಾವುಗಳಾಗಿವೆ ಮತ್ತು 1,543 ಗಾಯಾಳುಗಳಾಗಿದ್ದಾರೆಂದು ದಾಖಲಿಸಲಾಗಿದೆ. ಬಿಸಿನೆಸ್ ಸ್ಟ್ಯಾಂಡರ್ಡನಲ್ಲಿ ವರದಿಯಾದ ಸಚಿವಾಲಯದ ದತ್ತಾಂಶದಂತೆ ಕಳೆದ ಐದು ವರ್ಷಗಳಲ್ಲಿ ಪ್ರತಿ ತಿಂಗಳಿಗೆ ಸರಾಸರಿ ಮೂರು ರೈಲು ಅಪಘಾತಗಳು ನಡೆದಿವೆ. ಜಾರ್ಖಂಡ್‌ನ ಬಾರಾಬಾಂಬೂ ಸಮೀಪ ನಡೆದ ಹೌರಾ–ಮುಂಬೈ ರೈಲು ದುರಂತ, ಪಶ್ಚಿಮ ಬಂಗಾಳದ ರಂಗಾಪಾನಿಯಲ್ಲಿ ನಡೆದ ಕಾಂಚನಜುಂಗಾ ಎಕ್ಸ್‌ಪ್ರೆಸ್ ಅಪಘಾತ, ಉತ್ತರ ಪ್ರದೇಶದ ಗೊಂಡಾ ಬಳಿ ನಡೆದ ಅಪಘಾತಗಳು ಇದರಲ್ಲಿ ಒಳಗೊಂಡಿವೆ. ಕಳೆದ ಆರು ವಾರಗಳಲ್ಲಿ ರೈಲು ದುರಂತಗಳಲ್ಲಿ 17 ಸಾವುಗಳು ಉಂಟಾಗಿ ನೂರಾರು ಜನ ಗಾಯಗೊಂಡಿದ್ದಾರೆ. ಹೃದಯ ವಿದ್ರಾವಕ ಬಾಲಸೋರ್ (ಒರಿಸ್ಸಾ) ರೈಲು ದುರಂತದಲ್ಲಿ 300ಕ್ಕೂ ಹೆಚ್ಚು ಜೀವಗಳು ಬಲಿಯಾಗಿರುವುದು ಇನ್ನೂ ನೆನಪಲ್ಲಿ ಹಸಿಯಾಗಿದೆ. 2015–2022 ರ ನಡುವೆ ಪ್ರತಿವರ್ಷ ಸರಾಸರಿ 56 ಜನ ಈ ರೈಲು ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ.

ಕಳೆದ ಐದು ವರ್ಷಗಳಲ್ಲಿ, ಪ್ರಧಾನಿ ಮೋದಿಯವರು ಬಹಳ ದೊಡ್ಡ ಪ್ರಚಾರದೊಂದಿಗೆ ವಂದೇ ಭಾರತ್ ರೈಲುಗಳ ಉದ್ಘಾಟನೆ ಮಾಡಿದ ಕಾರಣಕ್ಕಾಗಿ ಭಾರತೀಯ ರೈಲ್ವೆಯು ಸುದ್ದಿಯಲ್ಲಿದೆ. 2019ರಿಂದ ಅವರು ಅಂತಹ 50 ರೈಲುಗಳಿಗೆ ಚಾಲನೆ ನೀಡಿದ್ದರು, ಅದರಲ್ಲಿ ಹತ್ತು ರೈಲುಗಳಿಗೆ ಒಂದೇ ದಿನ ಹಸಿರು ನಿಶಾನೆ ತೋರುವ ಮೂಲಕ ಅದರ ಶ್ರೇಯವನ್ನು ಮುಡಿಗೇರಿಸಿಕೊಂಡು ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲು ಪ್ರಯತ್ನಿಸಿದರು. ಇಂತಹ ಹಲವಾರು ಅತಿ ವೇಗದ ರೈಲುಗಳನ್ನು ಆರಂಭಿಸುವುದಾಗಿ ಮೋದಿಯವರು ಕೊಚ್ಚಿಕೊಂಡಿದ್ದಾರೆ. ಆದರೆ ದುಬಾರಿ ಪ್ರಯಾಣ ದರದಿಂದಾಗಿ ಅವು ಸಾಮಾನ್ಯ ಪ್ರಯಾಣಿಕರಿಗೆ ಗಗನ ಕುಸುಮವಾಗಿವೆ. ಇಷ್ಟಾಗ್ಯೂ ನಿರಂತರವಾಗಿ ರೈಲು ಅಪಘಾತಗಳು ಸಂಭವಿಸಿ ನೂರಾರು ಪ್ರಯಾಣಿಕರು ಬಲಿಯಾದಾಗಲೂ ಪ್ರಧಾನಿಯವರು ಮೌನವಾಗಿರುವುದು ಕಣ್ಣಿಗೆ ರಾಚುತ್ತಿದೆ. ಭಯಾನಕ ಬಾಲಸೋರ್ ರೈಲು ದುರಂತ ಸಂಭವಿಸಿದ ಸರಿಯಾದ ಒಂದು ವರ್ಷಕ್ಕೆ ಕಾಂಚನಜುಂಗಾ ಅಪಘಾತವಾಗಿದೆ. ಪ್ರತಿ ದುರಂತದ ನಂತರ ನಡೆಯುವ ತನಿಖೆಗಳು ರೈಲು ಸುರಕ್ಷತೆಯ ಕುರಿತು ಎಚ್ಚರಿಸಿವೆ. ಅವು ರೈಲ್ವೆಯ ಸಿಗ್ನಲಿಂಗ್ ವ್ಯವಸ್ಥೆಯ ಆಧುನೀಕರಣ ಹಾಗೂ ರೈಲು ಸುರಕ್ಷತಾ ಕ್ರಮಗಳನ್ನು ಮೇಲ್ದರ್ಜೆಗೇರಿಸುವ ಕುರಿತು ಒತ್ತಿ ಹೇಳುತ್ತಲೇ ಇವೆ. ರೈಲು ಮಂತ್ರಿ ಅಶ್ವಿನಿ ವೈಷ್ಣವ್, ರೈಲುಗಳ ಢಿಕ್ಕಿ ತಡೆಗಟ್ಟುವ 'ಕವಚ' ಉಪಕರಣವನ್ನು ಅಳವಡಿಸುವ ಕುರಿತು ದೊಡ್ಡದಾಗಿ ಘೋಷಿಸುತ್ತಲೇ ಇದ್ದಾರೆ. ಆದರೂ ವಾಸ್ತವವೆಂದರೆ ಒಟ್ಟು 1,04,000 ಕಿಮೀ ಉದ್ದದ ರೈಲು ಹಳಿಯ ಕೇವಲ ಪ್ರತಿಶತ 1ರಷ್ಟು ಮಾತ್ರ ಈ ವ್ಯವಸ್ಥೆಯಡಿ ತರಲು ಸಾಧ್ಯವಾಗಿದೆ.

### ಸತ್ಯದ ವಿಡಂಬನೆ

ಅಪಘಾತಗಳ ಸರಮಾಲೆಯು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ರಾಜೀನಾಮೆಯನ್ನು ನೀಡಬೇಕೆಂಬ ಆಗ್ರಹಕ್ಕೆ ಕಾರಣಾವಾಗಿದೆ. ಹಾಗಾಗಿ, ಬಿಜೆಪಿ ಪಾಳಯವು, ಹಿಂದಿನ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಸಂಭವಿಸಿದ ರೈಲು ಅಪಘಾತಗಳಿಗೆ ಹೋಲಿಸಿದರೆ ಬಿಜೆಪಿ ಆಡಳಿತದ ಅವಧಿಯಲ್ಲಿ ರೈಲು ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ತಮ್ಮ ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ವಿಷಯದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರಗಳೂ ಸಹ ಬೇಜವಾಬ್ದಾರಿಯುತವಾಗಿದ್ದವು ಮತ್ತು ಸಂಪೂರ್ಣ ದೋಷಪೂರಿತ ನಡೆಗಳನ್ನು ಹೊಂದಿದ್ದವು ಎಂಬುದು ನಿಜ. 2004 ರಿಂದ 2014 ರವರೆಗಿನ ಕಾಂಗ್ರೆಸ್ ಆಡಳಿತದಲ್ಲಿ ಒಟ್ಟು 1,711 ರೈಲ್ವೆ ಅಪಘಾತಗಳು ಸಂಭವಿಸಿ 2,453 ಜೀವಗಳು ಬಲಿಯಾಗಿ 4,485 ಜನ ಗಾಯಾಳುವಾಗಿದ್ದಾರೆ. ಬಿಜೆಪಿ ಅವಧಿಯಲ್ಲಿ 781 ಸಾವುಗಳು ಉಂಟಾಗಿ 1,543 ಜನ ಗಾಯಗೊಂಡಿದ್ದಾರೆ.

ಈ ಸಂಖ್ಯೆಗಳು ನಿಜವಾಗಿದ್ದರೂ, ಇದು ಕೇವಲ ಅರ್ಧ ಕಥಾನಕವಷ್ಟೇ. 2003–04 ರಿಂದ ರೈಲು ಅಪಘಾತಗಳ ಸಂಖ್ಯೆ ನಿರಂತರವಾಗಿ ಇಳಿಮುಖವಾಗಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 2014–15ರಲ್ಲಿ ಅಪಘಾತಗಳ ಸಂಖ್ಯೆ ತೀವ್ರವಾಗಿ ಹೆಚ್ಚಾಗಿದೆ. ಹಾಗಾಗಿ ಭಾರತೀಯ ರೈಲ್ವೇ ಬಿಜೆಪಿಯ ಅವಧಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿಕೊಳ್ಳುವುದು ಸತ್ಯದ ವಿಡಂಬನೆಯಾಗುತ್ತದೆ. ಇಂದು ಹೆಚ್ಚು ಸುಧಾರಿತ ತಂತ್ರಜ್ಞಾನ ಲಭ್ಯವಿರುವುದರಿಂದ ಅಪಘಾತಗಳ ಸಂಖ್ಯೆಯನ್ನು ಬಹುತೇಕ ಶೂನ್ಯಕ್ಕೆ ಇಳಿಸಬಹುದು. ಆದರೆ, ಜರುಗುತ್ತಿರುವ ಅಪಘಾತಗಳಿಗೆ ಕೊನೆಯೆಂಬುದೇ ಇಲ್ಲ.

### ಸುರಕ್ಷತಾ ಕ್ರಮಗಳಿಗಾಗಿ ಅರೆಕಾಸಿನ ಬಜೆಟ್ ಹಂಚಿಕೆ

ಪ್ರತಿ ಅಪಘಾತದ ನಂತರದ ತನಿಖೆಗಳು ರೈಲು ಸುರಕ್ಷತೆಯ ಬಗ್ಗೆ ಪದೇ ಪದೇ ಅಪಾಯದ ಸೂಚನೆಗಳನ್ನು ನೀಡುತ್ತಲೇ ಇವೆ. ಸಿಗ್ನಲಿಂಗ್ ವ್ಯವಸ್ಥೆಯನ್ನು ಆಧುನೀಕರಿಸುವ ಮತ್ತು ರೈಲ್ವೆ ಸುರಕ್ಷತಾ ಕ್ರಮಗಳನ್ನು ನವೀಕರಿಸುವ ಅಗತ್ಯವನ್ನು ಅವು ಎತ್ತಿ ತೋರಿಸಿವೆ. ಆದರೆ ಇಲ್ಲಿಯವರೆಗೆ, 98% ರೈಲ್ವೆ ಹಳಿಗಳು ಅಸುರಕ್ಷಿತವಾಗಿವೆ. 2023–2024ರ ಬಜೆಟ್‌ನಲ್ಲಿ 710 ಕೋಟಿ ರೂ.ಗಳನ್ನು ಹಳಿಗಳ ವ್ಯವಸ್ಥೆಗೆ ಮೀಸಲಿಡಲಾಗಿತ್ತು. 2025 ರ ಹಣಕಾಸು ವರ್ಷದ ಮಧ್ಯಂತರ ಬಜೆಟ್‌ನಲ್ಲಿ ರೂ. 560 ಕೋಟಿ ಮೀಸಲಿಡಲಾಗಿತ್ತು. ಆದರೆ, ಇಡೀ ಭಾರತೀಯ ರೈಲ್ವೆ ಜಾಲಕ್ಕೆ 100 ಪ್ರತಿಶತದಷ್ಟು ಕವಚ ವ್ಯವಸ್ಥೆಯನ್ನು ಅಳವಡಿಸಲು ಒಟ್ಟು 42,500 ಕೋಟಿ ರೂ. ಅಗತ್ಯವಿದೆ. ಮತ್ತೊಂದೆಡೆ, ಅವಶ್ಯಕತೆಯೇ ಇಲ್ಲದಂತಹ ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಯೋಜನೆಗೆ ನಿಗದಿಪಡಿಸಲಾಗಿರುವ ಒಟ್ಟು ಬಜೆಟ್ ರೂ. 1,08,000 ಕೋಟಿ. ಈಗಾಗಲೇ 2024ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಗೆ 21,000 ಕೋಟಿ ಮೀಸಲಿಡಲಾಗಿದೆ. ಈಗ, ಒಂದು ಪ್ರಮುಖ ಪ್ರಶ್ನೆಯೆಂದರೆ: ದೇಶಕ್ಕೆ ಯಾವುದು ಹೆಚ್ಚು ಮುಖ್ಯ? ಬೆರಳೆಣಿಕೆಯಷ್ಟು ಅತಿ ಶ್ರೀಮಂತರ ಪ್ರಯಾಣಕ್ಕಿರುವ ಐಷಾರಾಮಿ "ಬುಲೆಟ್ ರೈಲೋ" ಅಥವಾ ಕೋಟ್ಯಾಂತರ ಜನಸಾಮಾನ್ಯರ ಸುರಕ್ಷಿತ ಪ್ರಯಾಣವೋ?

### ರೈಲ್ವೇಯಲ್ಲಿ ಭಾರೀ ಮಾನವ ಸಂಪನ್ಮೂಲ ಕೊರತೆ

ಅಪಘಾತ ಸಂಭವಿಸಿದಾಗಲೆಲ್ಲಾ, ಕ್ಯಾಬಿನ್ ಸಿಬ್ಬಂದಿ, ಸ್ಟೇಷನ್ ಮಾಸ್ಟರ್, ಪಾಯಿಂಟ್–ಮೆನ್ ಅಥವಾ ಲೊಕೊ–ಪೈಲಟ್‌ಗಳನ್ನು ಬಲಿಪಶು ಮಾಡಲಾಗುತ್ತದೆ. ಆದರೆ ವಿಶೇಷವಾಗಿ ಸುರಕ್ಷತಾ ವಲಯದಲ್ಲಿ ನೌಕರರ ತೀವ್ರ ಕೊರತೆ ಇದೆ ಎಂಬ ಸತ್ಯವನ್ನು ಹತ್ತಿಕ್ಕಲಾಗಿದೆ. ರೈಲ್ವೇ "ಸುರಕ್ಷತೆ"ಗೆ ಅಗತ್ಯವಾದ ಸುಮಾರು 1.5 ಲಕ್ಷ ಹುದ್ದೆಗಳು ಖಾಲಿ ಉಳಿದಿವೆ ಎಂದು ಬಿಜೆಪಿ ಸರ್ಕಾರವು ಈ ವರ್ಷದ ಆರಂಭದಲ್ಲಿ ಒಂದು ಮಾಹಿತಿ ಹಕ್ಕು ಕಾಯಿದೆಯ ಪ್ರಶ್ನೆಗೆ ನೀಡಿದ ಪ್ರತಿಕ್ರಿಯೆಯಲ್ಲಿ ತಿಳಿಸಿದೆ. ಒಟ್ಟಾರೆಯಾಗಿ, ರೈಲ್ವೆಯು 2023 ರವರೆಗಿನ ಐದು ವರ್ಷಗಳಲ್ಲಿ 3,02,550 ಅಭ್ಯರ್ಥಿಗಳನ್ನು ದಾಖಲಿಸಿದೆ. ಆದರೆ ಉದ್ಯೋಗಿಗಳ ನಿಜವಾದ ಸಂಖ್ಯೆ ಯಾರಿಗೂ ತಿಳಿದಿಲ್ಲ. ವಾಸ್ತವವಾಗಿ, ಟ್ರ್ಯಾಕ್ ತಪಾಸಣೆ ಇತ್ಯಾದಿ ಸೇರಿದಂತೆ ಹಲವು ಪ್ರಮುಖ ಕಾರ್ಯಗಳನ್ನು ಈಗ ಹೊರಗುತ್ತಿಗೆಗೆ ನೀಡಲಾಗಿದೆ ಮತ್ತು ಈ ಗುತ್ತಿಗೆ ಪಡೆದ ಏಜೆನ್ಸಿಗಳು ಕೆಲಸದ ಮೇಲೆ ಯಾವುದೇ ಮೇಲ್ವಿಚಾರಣೆಯನ್ನು ನಡೆಸಿಲ್ಲ. ಭಾರತೀಯ ರೈಲ್ವೆಯು ನಿರಂತರವಾಗಿ ವಿಸ್ತಾರವಾಗುತ್ತಿದ್ದರೂ–ಕಾಂಗ್ರೆಸ್ ಸರ್ಕಾರಗಳು, ವಾಜಪೇಯಿ ನೇತೃತ್ವದ ಮೊದಲನೇ ಎನ್‌ಡಿಎ ಸರ್ಕಾರ, ಎರಡು ಯುಪಿಎ ಸಾರ್ಕಾರಗಳು ಅಥವಾ ಬಿ ಜೆ ಪಿ ನೇತೃತ್ವದ ಸರ್ಕಾರಗಳು– ಎಲ್ಲವೂ ಭಾರಿ ಸಂಖ್ಯೆಯಲ್ಲಿ ರೈಲ್ವೆ ನೌಕರರನ್ನು ವಜಾಗೊಳಿಸಿವೆ.

ಪರಿಣಾಮವಾಗಿ, ಲೋಕೋ ಪೈಲಟ್‌ಗಳು ಮತ್ತು ಸಹಾಯಕ ಲೋಕೋ ಪೈಲಟ್‌ಗಳ ಮೇಲೆ ಕೆಲಸದ ಹೊರೆ ಹೆಚ್ಚಾಗಿದೆ. ವಿವಿಧ ಸುರಕ್ಷತಾ ಸಮಿತಿಯ ಶಿಫಾರಸುಗಳ ಅನುಸಾರ, ಲೋಕೋಪೈಲಟ್‌ಗಳು ಎರಡು ಸತತ ರಾತ್ರಿಗಳಿಗಿಂತ ಹೆಚ್ಚು ಕೆಲಸ ಮಾಡಬಾರದು. ಆದರೆ ರೈಲ್ವೆ ಅಧಿಕಾರಿಗಳು ಈ ಶಿಫಾರಸುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಲೋಕೋಪೈಲಟ್‌ಗಳು ಹಾಗೂ ಸಹಾಯಕ ಲೋಕೋಪೈಲಟ್‌ಗಳು ನಿಗದಿತ ಗಂಟೆಗಳನ್ನು ಮೀರಿ ಕೆಲಸ ಮಾಡುವಂತೆ ಒತ್ತಡ ಹೇರುತ್ತಾರೆ. ಇದರಿಂದಾಗಿ ಅವರಿಗೆ ವಿಶ್ರಾಂತಿಯ ಕೊರತೆಯುಂಟಾಗಿ ಅಪಘಾತಗಳಿಗೆ ಕಾರಣವಾಗುತ್ತದೆ. ಉದಾಹರಣೆಗೆ, ಆಗ್ನೇಯ ಮಧ್ಯ ರೈಲ್ವೆಯಲ್ಲಿ, 12 ಗಂಟೆಗಳಿಗೂ ಹೆಚ್ಚು ಕಾಲ ಕರ್ತವ್ಯದಲ್ಲಿದ್ದ ಲೋಕೊಪೈಲೆಟ್‌ಗಳ ಕರ್ತವ್ಯದ ಅವಧಿಯನ್ನು ಈ ವರ್ಷದ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕ್ರಮವಾಗಿ 35.99%, 34.53% ಮತ್ತು 33.26% ರಷ್ಟು ಹೆಚ್ಚಿಸಲಾಗಿತ್ತು. ಕಾಂಚನಜುಂಗಾ ಅಪಘಾತಕ್ಕೆ ಕಾರಣವಾದ ಲೋಕೋಪೈಲಟ್ ಸತತ ಮೂರು ರಾತ್ರಿಗಳ ಕರ್ತವ್ಯ ಮಾಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ನಾಲ್ಕನೇ ರಾತ್ರಿ ಅವರನ್ನು ರೈಲು ಅಧಿಕಾರಿಗಳು ಬಲವಂತವಾಗಿ 2 ಗಂಟೆಗೆ ಎಬ್ಬಿಸಿ ಗೂಡ್ಸ್ ರೈಲನ್ನು ಚಲಾಯಿಸಲು ಹೇಳಿದ್ದರು. ಅವರು ವಿರೋಧ ವ್ಯಕ್ತಪಡಿಸಿದರೂ ಅಂತಿಮವಾಗಿ ಬೆಳಿಗ್ಗೆ 6.30 ಕ್ಕೆ ರೈಲಿನ ಚಾರ್ಜ್ ತೆಗೆದುಕೊಳ್ಳಲು ಬಂದರು. ಕಳೆದ ಜೂನ್ 3 ರಂದು ಪಂಜಾಬ್‌ನ ಅಂಬಾಲಾದಲ್ಲಿ ಗೂಡ್ಸ್ ರೈಲಿನ ಲೋಕೋ ಪೈಲಟ್ ಹಾಗೂ ಸಹಾಯಕ ಲೋಕೋ ಪೈಲಟ್ ಇಬ್ಬರೂ ಸಣ್ಣ ನಿದ್ದೆಗೆ ಜಾರಿದ್ದಾಗ ಈ ರೈಲು ಮತ್ತೊಂದು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿದೆ. ಈ ಲೋಕೋಪೈಲಟ್ ಸತತ 4 ನೇ ರಾತ್ರಿ ಕರ್ತವ್ಯದ ಮೇಲಿದ್ದರು. ಅವರಿಗೆ ಈಗಾಗಲೇ ತಿಂಗಳಲ್ಲಿ 12 ರಾತ್ರಿ ಪಾಳಿಗಳನ್ನು ಬಲವಂತವಾಗಿ ಮಾಡಿಸಲಾಗಿತ್ತು. ಉನ್ನತ ರೈಲ್ವೆ ಅಧಿಕಾರಿಗಳು ಸುರಕ್ಷತೆ ವರ್ಗದ ಕಾರ್ಮಿಕರ ಮೇಲೆ ತೀವ್ರ ಒತ್ತಡ ಹೇರುತ್ತಿರುವುದು ಅಪಘಾತ ಹೆಚ್ಚಳಕ್ಕೆ ಮತ್ತೊಂದು ಪ್ರಮುಖ ಕಾರಣ. ಹಳಿಗಳಲ್ಲಿನ ದೋಷಗಳು ಮತ್ತು ಅಸಮರ್ಪಕ ನಿರ್ವಹಣೆಯೂ ಸಹ ಇತರ ಪ್ರಮುಖ ಕಾರಣಗಳಾಗಿವೆ.

### ಉದ್ದೇಶಪೂರ್ವಕ ನಿರ್ಲಕ್ಷ್ಯವು ಖಾಸಗೀಕರಣದೆಡಗಿನ ಹೆಜ್ಜೆಯೇ?

ಮಾರಣಾಂತಿಕ ಅಪಘಾತಗಳ ಸರಣಿಯು, ಸರ್ಕಾರದ ಹೇಳಿಕೆಗೆ ವಿರುದ್ಧವಾಗಿ, ಕೆಲಸದ ನಿಯಮಗಳ ಬುಡಮೇಲು, ಪ್ರಯಾಣಿಕರ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿನ ನಿರ್ಲಕ್ಷತೆ, ಸುರಕ್ಷತಾ ಸಾಧನಗಳ ಕಳಪೆ ನಿರ್ವಹಣೆ, ರೈಲುಗಳು ಮತ್ತು ಮಾನವಶಕ್ತಿಯ ಕೊರತೆ, ಇತ್ಯಾದಿಗಳಿಂದ ರೈಲ್ವೆ ನಿರ್ವಹಣೆಯು ತೊಡಕುಗಳಿಂದ ತುಂಬಿ ತುಳುಕುತ್ತಿದೆ ಎಂಬುದನ್ನು ತೋರಿಸುತ್ತದೆ. ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಸೂಕ್ತವಲ್ಲದ ಬುಲೆಟ್ ರೈಲುಗಳು, ವಂದೇ ಭಾರತ್ ಅಥವಾ ತೇಜಸ್ ಎಕ್ಸ್‌ಪ್ರೆಸ್‌ನಂತಹ ಹೈ–ಸ್ಪೀಡ್ ರೈಲುಗಳ ಮೇಲೆ ಅಮೂಲ್ಯವಾದ ಸಂಪನ್ಮೂಲಗಳನ್ನು ಪೋಲು ಮಾಡಲಾಗುತ್ತಿದೆಯೇ? ಸಾಮಾನ್ಯ ಜನರ ಜೀವಗಳ ಕಾಳಜಿಯ ಮುಖ್ಯ ಪ್ರಶ್ನೆಯೇ ನಿರ್ಲಕ್ಷ್ಯಕ್ಕೊಳಗಾಗಿರುವಾಗ ಬುಲೆಟ್ ರೈಲುಗಳನ್ನು ಓಡಿಸುವ 'ಅದ್ಭುತ' ಕಲ್ಪನೆ ಏಕೆ ಬೇಕು? ರೈಲುಗಳು ಜನರ ಮುಖ್ಯ ಸಾರಿಗೆ ಸಾಧನವಾಗಿವೆ ಮತ್ತು ಪ್ರಯಾಣಿಕರ ಜೀವ ಅತ್ಯಮೂಲ್ಯವಾಗಿದೆ. ಆದರೆ ಯಾವುದೇ ಭೇದವಿಲ್ಲದೆ ಬಂಡವಾಳಶಾಹಿ ಸರ್ಕಾರಗಳು ಈ ವಿಷಯದಲ್ಲಿ ಅತ್ಯಂತ ಕ್ರೂರವಾದ ನಿರ್ಲಕ್ಷ್ಯ ತೋರುತ್ತಿವೆ. ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಾಮಾನ್ಯ ಪ್ರಯಾಣಿಕರ ಸೌಲಭ್ಯಗಳನ್ನು ನಿರಂತರವಾಗಿ ಕಡಿತ ಮಾಡುತ್ತಿದೆ. ಬಹುತೇಕ ರೈಲುಗಳಲ್ಲಿ ಸ್ಲೀಪರ್ ಕೋಚ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಮೇಲಾಗಿ, ಉಳಿದಿರುವ ಸ್ಲೀಪರ್ ಕೋಚ್‌ನ ಅನೇಕ ಆಸನಗಳನ್ನು ಡೈನಾಮಿಕ್ ದರದಲ್ಲಿ (ನಿಸ್ಸಂಶಯವಾಗಿ ಅವು ಹೆಚ್ಚು ದುಬಾರಿ) ಕಾಯ್ದಿರಿಸಲಾಗಿದೆ. ಮುರುಕು ಜನರಲ್ ಬೋಗಿಗಳಲ್ಲಿ ಜನರನ್ನು ಕುರಿಗಳಂತೆ ತುಂಬಲಾಗಿರುತ್ತದೆ. ಅವರು ಶೌಚಾಲಯಕ್ಕೆ ಹೋಗಲು ಸಹ ಸಾಧ್ಯವಿಲ್ಲ. ಜನರಲ್ ಹಾಗೂ ಕಾಯ್ದಿರಿಸಲಾದ ಬೋಗಿಗಳೂ ಶಿಥಿಲಾವಸ್ಥೆಯಲ್ಲಿವೆ. ರೈಲಗಳು ಸಮಯಕ್ಕೆ ಸರಿಯಾಗಿ ಚಲಿಸುವುದು ಬಹಳ ಹಿಂದೆಯೇ ನಿಂತುಹೋಗಿದೆ. ರಾಜಧಾನಿ ಎಕ್ಸ್‌ಪ್ರೆಸ್‌ನಂತಹ ಪ್ರಮುಖ ರೈಲುಗಳು ಕೂಡ ಕೆಲವೊಮ್ಮೆ 10–12 ಗಂಟೆ ತಡವಾಗಿ ಚಲಿಸುತ್ತವೆ. ಆದರೆ ಪ್ರಯಾಣಿಕರು ಮಾತ್ರ ಸಂಪೂರ್ಣ ಹಣ ತೆತ್ತಬೇಕು. ಅಷ್ಟೇ ಅಲ್ಲ. ವೇಗದೂತ ರೈಲುಗಳಲ್ಲಿ ಜನರಲ್ ಬೋಗಿಗಳನ್ನು ಅತ್ಯಂತ ಕಡಿಮೆ ಮಾಡಿ ಇರುವ ಒಂದೆರಡು ಬೋಗಿಗಳಲ್ಲಿ ಜನರನ್ನು ಪ್ರಾಣಿಗಳಂತೆ ತುಂಬುವ ಪರಿಸ್ಥಿತಿಗೆ ದೂಡಲಾಗಿದೆ.

ಕರೋನಾ ಸಾಂಕ್ರಾಮಿಕ ಸಮಯದಲ್ಲಿ, ಪ್ರಯಾಣಿಕರ ರೈಲುಗಳ ಹಾಗೂ ಎಕ್ಸ್‌ಪ್ರೆಸ್ ರೈಲುಗಳ ದರಗಳನ್ನು ವಿಪರೀತವಾಗಿ ಏರಿಸಲಾಯಿತು. 150 ಕಿಮೀಗಿಂತ ಹೆಚ್ಚು ದೂರ ಚಲಿಸುತ್ತಿದ್ದ ಪ್ಯಾಸೆಂಜರ್ ರೈಲುಗಳನ್ನು ಎಕ್ಸ್‌ಪ್ರೆಸ್ ರೈಲುಗಳಾಗಿ ಮಾರ್ಪಡಿಸಿ ಪ್ರಯಾಣ ದರವನ್ನು ದ್ವಿಗುಣಗೊಳಿಸಲಾಗಿದೆ. ಆದರೆ ಎಕ್ಸ್‌ಪ್ರೆಸ್ ರೈಲಿನ ಸೌಲಭ್ಯ ಮಾತ್ರ ಸೊನ್ನೆ. ಇತ್ತೀಚೆಗೆ "ಪ್ರೀಮಿಯಂ ತತ್ಕಾಲ್" ಎಂಬ ಟಿಕೆಟಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದು ಬೆಂಗಳೂರಿನಿಂದ ಕಲ್ಕತ್ತಾಗೆ ಎಸಿ 2 ಟೈರ್ ಬೋಗಿಯ ಟಿಕೆಟ್ ದರವನ್ನು ರೂ. 2900 ದಿಂದ ರೂ. 10000 ಕ್ಕೆ ಏರಿಸಲಾಗಿದೆ! ಜನರಲ್ ಬೋಗಿಗಳು ರೈಲಿನ ಎರಡೂ ತುದಿಗಳಲ್ಲಿರುವುದರಿಂದ ಅಪಘಾತಗಳು ಸಂಭವಿಸಿದಾಗ ಸಾಮಾನ್ಯ ಜನ ನಾಯಿ, ನರಿಗಳ ಹಾಗೆ ಸಾಯುತ್ತಾರೆ. ಅವರ ಮೃತದೇಹಗಳೂ ಸಿಗದೇ ಮೃತರ ಕುಟುಂಬಗಳಿಗೆ ಕನಿಷ್ಠ ಪರಿಹಾರವೂ ದೊರೆಯುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ರೈಲುಗಳೂ ಸಹ ನಿಗದಿತ ಸಮಯಕ್ಕಿಂತ ಹೆಚ್ಚು ತಡವಾಗಿ ಓಡುತ್ತಿವೆ. ಆದ್ದರಿಂದ, ಭಾರತದಲ್ಲಿ ರೈಲು ಪ್ರಯಾಣವೆಂಬುದು ನಿಜಕ್ಕೂ ದುಃಸ್ವಪ್ನವಾಗಿ ಮಾರ್ಪಟ್ಟಿದೆ.

ಆದರೆ ಇಂತಹ ಸಂಪೂರ್ಣ ಅವ್ಯವಸ್ಥೆಯ ಹಿಂದಿನ ರಹಸ್ಯ ಯೋಜನೆ ಏನು? ಟೆಲಿಕಾಂ ಇಲಾಖೆಯಂತೆ, ಸರ್ಕಾರವು ರೈಲ್ವೆಯನ್ನು ಹಂತಹಂತವಾಗಿ ಖಾಸಗೀಕರಣಗೊಳಿಸಲು ಉದ್ದೇಶಿಸಿದೆ. ಅನೇಕ ನಿಲ್ದಾಣಗಳು, ರೈಲುಗಳು, ಮಾರ್ಗಗಳು, ಅಡುಗೆ ಸೇವೆಗಳು, ಟಿಕೆಟ್–ಬುಕಿಂಗ್ ವ್ಯವಸ್ಥೆಗಳು ಮತ್ತು ಶುಚಿಗೊಳಿಸುವ ವಿಭಾಗಗಳನ್ನು ಈಗಾಗಲೇ ಖಾಸಗಿ ಉದ್ಯಮಿಗಳಿಗೆ ಹಸ್ತಾಂತರಿಸಲಾಗಿದೆ. ರೈಲ್ವೆಯ ವೈಫಲ್ಯ ಹೆಚ್ಚಾದಷ್ಟು ಖಾಸಗೀಕರಣ ಪ್ರಕ್ರಿಯೆಗೆ ಹೆಚ್ಚು ಅನುಕೂಲವಾಗುತ್ತದೆ. ಅದಕ್ಕಾಗಿ ಕಾರ್ಪೊರೇಟ್ ತಿಮಿಂಗಲಗಳು ದುರಾಸೆಯಿಂದ ಕಾಯುತ್ತಿವೆ. ದೇಶದ ಶೋಷಿತ ಜನರು ಈ ರೀತಿಯ ದೌರ್ಜನ್ಯವನ್ನು ಒಪ್ಪಿಕೊಳ್ಳಬೇಕೇ ಅಥವಾ ಸಾಮಾನ್ಯ ಪ್ರಯಾಣಿಕರು–ರೈಲ್ವೆ ನೌಕರರ ಸಂಘಟಿತ ಜಂಟಿ ಪ್ರತಿಭಟನೆಯ ತುರ್ತು ಅಗತ್ಯವಿದೆಯೇ? ಇಂತಹ ಜನವಿರೋಧಿ ನೀತಿಗಳ ವಿರುದ್ಧ ದೇಶದ ಜನತೆ ಸುಸಂಘಟಿತರಾಗಿ ಪ್ರತಿರೋಧವನ್ನು ತೋರುವ ಮೂಲಕ ಸರಕಾರದ ಇಂತಹ ಹುನ್ನಾರವನ್ನು ವಿಫಲಗೊಳಿಸಬೇಕಿದೆ.

# ಕೊಲ್ಕತ್ತಾದ ಆರ್ ಜಿ ಕರ್ ಆಸ್ಪತ್ರೆಯಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆಯ ಒಂದು ಪೈಶಾಚಿಕ ಘಟನೆ

## ಕಾಡ್ಗಿಚ್ಚಿನಂತೆ ವ್ಯಾಪಿಸಿದ ಹೋರಾಟಕ್ಕೆ ಕ್ರಾಂತಿಕಾರಿ ಶುಭಾಶಯಗಳು

### ಹಿನ್ನೆಲೆ

ಕೊಲ್ಕತ್ತಾದ ಆರ್ ಜಿ ಕರ್ ಆಸ್ಪತ್ರೆಯಲ್ಲಿ ಆಗಸ್ಟ್ 9ರ ಬೆಳಗ್ಗೆ 3ಘಂಟೆಯ ಸುಮಾರಿಗೆ ಒಂದು ಪೈಶಾಚಿಕ ಕೃತ್ಯ ನಡೆಯಿತು. 31 ವರ್ಷದ ಸ್ನಾತಕ್ಕೋತ್ತರ ಟ್ರೈನಿಯ ಅತ್ಯಾಚಾರ ಮತ್ತು ಕೊಲೆ ಜನಸಾಮಾನ್ಯರಲ್ಲಿ ಮೈನಡುಕ ಹುಟ್ಟಿಸಿತು. ಸತತ 36 ಘಂಟೆಗಳ ಕೆಲಸ ಮುಗಿಸಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಲು 3ನೇ ಮಹಡಿಯಲ್ಲಿದ್ದ ಸೆಮಿನಾರ್ ಕೊಠಡಿಗೆ ಹೋದದ್ದೇ ಈ ಹುಡುಗಿಗೆ ಮುಳುವಾಯಿತು. ಮಾರನೆಯ ದಿನ ಬೆಳಗ್ಗೆ 11.30ರ ಸುಮಾರಿಗೆ ಆಕೆಯ ಅರೆನಗ್ನ ದೇಹ ಆಸ್ಪತ್ರೆಯ ಸಿಬ್ಬಂದಿಯೊಬ್ಬರ ಕಣ್ಣಿಗೆ ಬಿತ್ತು. ಆಕೆಯ ಮೇಲೆ ಅತ್ಯಾಚಾರ ಮತ್ತು ಕ್ರೂರ ಕೊಲೆಯಾಗಿರುವುದು ಕಣ್ಣಿಗೆ ರಾಚುತ್ತಿತ್ತು. ಪ್ರಾಥಮಿಕ ಮರಣೋತ್ತರ ಪರೀಕ್ಷೆ ವೈದ್ಯೆಯ ಮೇಲೆ ಲೈಂಗಿಕವಾಗಿ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ ಎಂದು ದೃಢಪಡಿಸಿತು. ಆಸ್ಪತ್ರೆಯ ಮೂರನೇ ಮಹಡಿಗೆ ಹೋಗಿ ಈ ಕೃತ್ಯ ಎಸಗಿದವರು ಯಾರು? ಭದ್ರತಾ ತಪಾಸಣೆ ಮೀರಿದವರು ಯಾರು? ಡ್ಯೂಟಿಯಲ್ಲಿದ್ದ ವೈದ್ಯೆ ರಾತ್ರಿ 3ರಿಂದ ಬೆಳಗ್ಗೆ 11.30 ರವರೆಗೆ ಕಾಣದಿದ್ದಾಗ ಯಾರಿಗೂ ಗೊತ್ತಾಗಲಿಲ್ಲವೇ? ಹೀಗೆ ಹಲವಾರು ಪ್ರಶ್ನೆಗಳಿಗೆ ಉತ್ತರ ನಿಗೂಢವಾಯಿತು. ಸತ್ಯವನ್ನು ಮುಚ್ಚಿಹಾಕಲು ರಾಜ್ಯ ಸರ್ಕಾರ, ಪೊಲೀಸ್ ಆಡಳಿತ ಮತ್ತು ಆಸ್ಪತ್ರೆ ಅಧಿಕಾರಿಗಳು ಸರ್ವ ಪ್ರಯತ್ನಗಳನ್ನು ಮಾಡಿದರು! ಆಸ್ಪತ್ರೆಯ ಅಧಿಕಾರಿಗಳು ಮೊದಲು ಇದನ್ನು ಆತ್ಮಹತ್ಯೆ ಎಂದು ಕರೆದರು ಮತ್ತು ಎಲ್ಲಾ ಸಾಕ್ಷ್ಯಗಳನ್ನು ನಾಶಗೊಳಿಸಲು ಸಂಚು ರೂಪಿಸಿದರು.




ಪ್ರತಿಭಟನೆಯಲ್ಲಿ ಪಾಲ್ಗೊಂಡ ಪಶ್ಚಿಮ ಬಂಗಾಳದ ವಿವಿಧ ಭಾಗಗಳ ಸಾವಿರಾರು ಮಹಿಳೆಯರು

### ಬೀದಿಗೆ ಬಂದ ವೈದ್ಯಕೀಯ ಸಮುದಾಯ

ಆಗಸ್ಟ್ 10ಕ್ಕೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳು, ಪ್ಯಾರಾಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜುಗಳು ಮುಷ್ಕರಕ್ಕೆ ಕರೆ ನೀಡಿದವು. ವೈದ್ಯ ವಿದ್ಯಾರ್ಥಿಗಳು, ಕಿರಿಯ ವೈದ್ಯರು, ದಾದಿಯರು, ಮತ್ತು ಬಹುತೇಕ ಎಲ್ಲಾ ಆರೋಗ್ಯ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದರು. “ನಮಗೆ ನ್ಯಾಯ ಬೇಕು”, “ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ಆಗಬೇಕು”, “ಘಟನೆಯ ನಿಷ್ಪಕ್ಷಪಾತ ತನಿಖೆ ಆಗಬೇಕು” “ಕರ್ತವ್ಯನಿರತ ವೈದ್ಯಕೀಯ ಸಿಬ್ಬಂದಿಗೆ ಸುರಕ್ಷತೆ ಒದಗಿಸಬೇಕು”, “ವೈದ್ಯರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯಗಳು ಒದಗಿಸಬೇಕು”.....; ಹೀಗೆ ಹಲವಾರು ಹಕ್ಕೊತ್ತಾಯಗಳೊಂದಿಗೆ ರಾಜ್ಯಾದ್ಯಂತ ಹೋರಾಟಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋದವು. ಇಡೀ ಪಶ್ಚಿಮ-ಬಂಗಾಳ ಹಾಗೂ ದೇಶವೇ ಪ್ರತಿಭಟನೆಯಲ್ಲಿ ಭಾಗಿಯಾಯಿತು. ಪ್ರತಿಭಟನೆಯು ದೇಶದ ಗಡಿಯನ್ನೂ ದಾಟಿ ನೆರೆಯ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಯುರೋಪ್, ಯುಎಸ್‌ಎ, ಆಸ್ಟ್ರೇಲಿಯಾ ಮತ್ತು ಇತರ ದೇಶಗಳಲ್ಲಿಯೂ ಹರಡಿತು. ಎಲ್ಲೆಡೆ ಒಂದೇ ಒಂದು ಬೇಡಿಕೆ ಇದೆ - “ನಮಗೆ ನ್ಯಾಯ ಬೇಕು”!

ಕರ್ತವ್ಯದಲ್ಲಿದ್ದಾಗ ಆಸ್ಪತ್ರೆಯ ಆವರಣದಲ್ಲೇ ಪೈಶಾಚಿಕ ಅತ್ಯಾಚಾರ ಮತ್ತು ಕೊಲೆಗೆ ಬಲಿಯಾದ ಎರಡನೇ ವರ್ಷದ ಪಿಜಿಟಿ ವೈದ್ಯರಿಗೆ ನ್ಯಾಯ ಸಿಗಬೇಕು. ಈ ಕ್ರೌರ್ಯ ಎಸಗಿದ ಅಪರಾಧಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ರಕ್ಷಿಸದಂತೆ ಕ್ರಮ ಕೈಗೊಳ್ಳಬೇಕು. ತನಿಖೆಯ ಹೆಸರಿನಲ್ಲಿ ಸಾಕ್ಷ್ಯಗಳನ್ನು ನಾಶಪಡಿಸಬಾರದು ಅಥವಾ ಮುಚ್ಚಿಡಬಾರದು. ವೈದ್ಯರು, ದಾದಿಯರು ಮತ್ತು ಆರೋಗ್ಯ ಕಾರ್ಯಕರ್ತರು ಮಾತ್ರವಲ್ಲದೆ, ಬಹುತೇಕ ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು, ಬುದ್ಧಿಜೀವಿಗಳು, ಕಲಾವಿದರು, ಎಲ್ಲಾ ವೃತ್ತಿಪರರು, ಕಾರ್ಮಿಕರು ಮತ್ತು ರೈತರು, ಬೀದಿಗಿಳಿದು ಪ್ರತಿಭಟಿಸಿದರು. ಅನೇಕ ಫುಟ್ಬಾಲ್ ಆಟಗಾರರು ಮತ್ತು ಇತರ ಕ್ರೀಡಾ ವ್ಯಕ್ತಿಗಳು ಮತ್ತು ಕ್ರೀಡಾ ಪ್ರೇಮಿಗಳು ಚಳುವಳಿಯಲ್ಲಿ ಭಾಗಿಯಾದರು. ನ್ಯಾಯವನ್ನು ಕೋರುವ ಈ ಒಗ್ಗಟ್ಟಿನ ಧ್ವನಿ ಮತ್ತೆ ಭರವಸೆಯನ್ನು ನೀಡುತ್ತದೆ ಮತ್ತು ಸ್ಫೂರ್ತಿಯ ಸೆಲೆಯಾಗಿದೆ. ಬಹಳ ಸಮಯದ ನಂತರ ಪಶ್ಚಿಮ ಬಂಗಾಳ ರಾಜ್ಯವು ಅನ್ಯಾಯದ ವಿರುದ್ಧ ಹೋರಾಡುವ ತನ್ನ ಹಿಂದಿನ ಇತಿಹಾಸಕ್ಕೆ ಮರಳಿದೆ.

### “ರಾತ್ರಿಯನ್ನು ಮರಳಿ ಪಡೆಯಲು ಆಗಸ್ಟ್ 14ರ ಮಧ್ಯ ರಾತ್ರಿ ಹೋರಾಟ”

ಅತ್ಯಂತ ಗಮನಾರ್ಹವಾದದ್ದು ಆಗಸ್ಟ್ 14ರ ಮಧ್ಯರಾತ್ರಿ. ಹದಿಹರೆಯದವರಿಂದ ಇಳಿವಯಸ್ಸಿನವರವರೆಗೆ ಲಕ್ಷಗಟ್ಟಲೆ ಪ್ರತಿಭಟನಾಕಾರರು ದೇಶದ ಹಲವಾರು ನಗರಗಳು ಮತ್ತು ಹಳ್ಳಿಗಳ ಬೀದಿಗಳಲ್ಲಿ “ರಾತ್ರಿಯನ್ನು ಮರಳಿ ಪಡೆಯರಿ” ಎಂಬ ಘೋಷಣೆಯೊಂದಿಗೆ ಅಭೂತಪೂರ್ವ ಸಭೆಗಳನ್ನು ಸಂಘಟಿಸಿದರು. ಹೆಣ್ಣನ್ನು ಪುರುಷನಿಗೆ ಅಧೀನವಾಗಿ ಮತ್ತು ಕೇವಲ ಭೋಗದ ವಸ್ತುವಾಗಿ ನೋಡುವ ಪುರುಷಪ್ರಧಾನ ಸಮಾಜದ ಧೋರಣೆಯ ವಿರುದ್ಧದ ಮಹಿಳಾಪರ ಪ್ರತಿಭಟನೆ ಇದಾಗಿತ್ತು. ನೊಂದ ತಾಯಂದಿರು, ಸಹೋದರಿಯರು ಮತ್ತು ಗೃಹಿಣಿಯರ ಇಂತಹ ಶೌರ್ಯ ಮತ್ತು ಸ್ಥೈರ್ಯದ ಪ್ರದರ್ಶನವು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲೂ ಕಂಡು ಬಂದಿರಲಿಲ್ಲ. ಇದು ಮಹಿಳಾ ಚಳವಳಿಯ ಇತಿಹಾಸದ ಪುಟಗಳಲ್ಲಿ ಪ್ರತಿಷ್ಠಾಪಿಸಲ್ಪಡುವ ಅದ್ಭುತ ಘಟನೆಯಾಗಿದೆ! ವಾಸ್ತವವಾಗಿ ಇದು ಬಂಗಾಳದ ಕ್ರಾಂತಿಕಾರಿ ಕವಿ ಕಾಜಿ ನಜ್ರುಲ್ ಇಸ್ಲಾಂ ಅವರ “ರೈಸ್-ಓ ವುಮೆನ್, ದಿ ಫ್ಲೇಮ್” ಎಂಬ ಸಾಲುಗಳ ಜೀವಂತ ಪ್ರದರ್ಶನವಾಗಿತ್ತು.

ಆಗಸ್ಟ್ 14 ರಂದು ರಾತ್ರಿ ಪ್ರತಿಭಟನಾಕಾರರು, ಮಹಿಳೆಯರು ಮತ್ತು ಪುರುಷರಿಂದ ಬೀದಿಗಳು ತುಂಬಿ ತುಳುಕುತ್ತಿದ್ದಾಗ, ದುಷ್ಕರ್ಮಿಗಳ ಗುಂಪು ಆರ್ ಜಿ ಕರ್ ಆಸ್ಪತ್ರೆಯನ್ನು, ವಿಶೇಷವಾಗಿ ತುರ್ತು ಚಿಕಿತ್ಸಾ ವಿಭಾಗವನ್ನು ಧ್ವಂಸಗೊಳಿಸಿತು. ಇದಕ್ಕೂ ಮುನ್ನ ಆಸ್ಪತ್ರೆ ಎದುರು ಹಾಕಲಾಗಿದ್ದ ಪ್ರತಿಭಟನಾ ಟೆಂಟ್‌ಗಳನ್ನು ಧ್ವಂಸಗೊಳಿಸಿ, ಪ್ರತಿಭಟನಾಕಾರರ ಮೇಲೆ ದೈಹಿಕ ಹಲ್ಲೆ ನಡೆಸಿದ ದುಷ್ಕರ್ಮಿಗಳು, ಕರ್ತವ್ಯದಲ್ಲಿದ್ದ ದಾದಿಯರನ್ನು ಬೆದರಿಸಿದರು. ಅಸಭ್ಯ ಭಂಗಿಗಳನ್ನು ಮಾಡುತ್ತಾ ಪ್ರತಿಭಟನೆ ಮುಂದುವರಿಸಿದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಕೊಟ್ಟರು! ಇಡೀ ಕಾರ್ಯಾಚರಣೆಯ ಸಮಯದಲ್ಲಿ ಆರ್‌ಎಎಫ್ ಸಿಬ್ಬಂದಿಯೊಂದಿಗೆ ಪೊಲೀಸರ ದೊಡ್ಡ ತುಕಡಿ ಮೂಕ ಪ್ರೇಕ್ಷಕನಂತೆ ನಿಂತಿತ್ತು.

### ಪ್ರತಿಭಟನಾಕಾರರ ಮೇಲೆ ಹಲ್ಲೆ ಖಂಡಿಸಿ ಆಗಸ್ಟ್ 16 – ಪಶ್ಚಿಮ ಬಂಗಾಲ ಮುಷ್ಕರ

ಪ್ರತಿಭಟನಾಕಾರರ ಮೇಲೆ ಬೆದರಿಕೆ ಮತ್ತು ವಿಧ್ವಂಸಕ ಕೃತ್ಯಗಳ ಹಿಂದೆ ಯಾರ ಕೈವಾಡವಿದೆ ಎಂಬುದನ್ನು ಜನಸಾಮಾನ್ಯರು ನಿರ್ಧರಿಸಲಿ. ಆಡಳಿತಾರೂಢ ಟಿಎಂಸಿ ಹೊರತುಪಡಿಸಿ ಬೇರೆ ಯಾರಿಗೆ ಇದರಿಂದ ಲಾಭವಾಗಿದೆ? ಇಂತಹ ಗೂಂಡಾಗಿರಿಯನ್ನು ವಿರೋಧಿಸಿ ನಮ್ಮ ಪಕ್ಷ ಎಸ್‌ಯುಸಿಐ(ಸಿ) ಆಗಸ್ಟ್ 16 ರಂದು 12 ಗಂಟೆಗಳ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲು ಹಿಂದಿನ ದಿನ, ಅಂದರೆ 15 ರಂದು ಮಧ್ಯರಾತ್ರಿ ನಿರ್ಧರಿಸಿತು. ನಮ್ಮ ಕರೆಗೆ ಇಷ್ಟು ತ್ವರಿತವಾಗಿ ಮತ್ತು ಅಗಾಧವಾಗಿ ಪ್ರತಿಕ್ರಿಯಿಸಿದ್ದಕ್ಕಾಗಿ ನಾವು ಜನರನ್ನು ಅಭಿನಂದಿಸುತ್ತೇವೆ. ಈ ರಾಜ್ಯದಲ್ಲಿ ಮುಷ್ಕರಗಳನ್ನು ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದರು. ಕಾಂಗ್ರೆಸ್ ಆಡಳಿತದಲ್ಲಿ, ಸಿಪಿಐಎಂ ಆಡಳಿತದ ಅವಧಿಯಲ್ಲಿ ನಮ್ಮ ಪಕ್ಷವು ಹಲವಾರು ಜನವಿರೋಧಿ ನೀತಿಗಳು ಮತ್ತು ದೌರ್ಜನ್ಯಗಳನ್ನು ವಿರೋಧಿಸಿ ಅನೇಕ ಸಂದರ್ಭಗಳಲ್ಲಿ ಸಾರ್ವತ್ರಿಕ ಮುಷ್ಕರಗಳಿಗೆ ಕರೆ ನೀಡಿತ್ತು. ಈ ಬಾರಿಯೂ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿಯೂ ನಾವು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದೇವೆ ಏಕೆಂದರೆ ಈ ಹಕ್ಕು ಚಳವಳಿ ಮಾಡಿ ದಕ್ಕಿಸಿಕೊಂಡ ಪ್ರಜಾಪ್ರಭುತ್ವದ ಹಕ್ಕು!

ಆರ್ ಜಿ ಕರ್ ಆಸ್ಪತ್ರೆಯ ಭೀಕರ ಘಟನೆ ಪಶ್ಚಿಮ-ಬಂಗಾಲದಲ್ಲಿ ಇದೇ ಮೊದಲಲ್ಲ. ಈ ಹಿಂದೆಯೂ ಸಹ ಕಮ್ದುನಿ, ಬಂಟಲ ಹಾಗೂ ಸಿಂಗೂರು,



ಪೊಲೀಸ್ ದಾಳಿಯನ್ನು ಭೇದಿಸಿ ಮುನ್ನುಗ್ಗಿದ ಎಸ್‌ಯುಸಿಐ(ಸಿ) ಕಾರ್ಯಕರ್ತರು

ನಂದಿಗ್ರಾಮ ಸೇರಿದಂತೆ ಇತರ ಸ್ಥಳಗಳಲ್ಲಿ ಅಮಾಯಕ ಮಹಿಳೆಯರ ಮೇಲೆ ಇದೇ ರೀತಿಯ ಮೃಗೀಯ ದಾಳಿಗಳು ನಡೆದಿವೆ. ಆದರೆ, ತಪ್ಪಿತಸ್ಥರು ಇಂದಿಗೂ ಶಿಕ್ಷೆಗೊಳಗಾಗದೆ ಉಳಿದಿದ್ದಾರೆ. ಸಿಪಿಐಎಂ, ಕಾಂಗ್ರೆಸ್ ಆಡಳಿತದ ಅವಧಿಯಲ್ಲಿಯೂ ಇಂತಹ ಘಟನೆಗಳು ನಡೆದಿವೆ. ಅಪ್ರಾಪ್ತ ಬಾಲಕಿಯರನ್ನೂ ಒಳಗೊಂಡಂತೆ ಮಹಿಳೆಯರ ಮೇಲೆ ಕ್ರೂರ ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆಯ ಸುದ್ದಿಗಳು ಬಿಜೆಪಿ ಅಥವಾ ಕಾಂಗ್ರೆಸ್ ಆಡಳಿತವಿರುವ ಬೇರೆ ರಾಜ್ಯಗಳಿಂದಲೂ ವರದಿಯಾಗುತ್ತವೆ.

ಬಿಜೆಪಿ ಆಡಳಿತದ ಉತ್ತರ-ಪ್ರದೇಶ ಈ ವಿಷಯದಲ್ಲಿ ಅಗ್ರಸ್ಥಾನದಲ್ಲಿದೆ ಮತ್ತು ಪಶ್ಚಿಮ ಬಂಗಾಳದಲ್ಲಿ ಮಹಿಳಾ ಕಳ್ಳಸಾಗಣೆ ಅತಿ ಹೆಚ್ಚು. ಸಿಪಿಐ(ಎಂ) ಆಡಳಿತವಿರುವ ಕೇರಳದಲ್ಲಿಯೂ ಇಂತಹ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದ ಘಟನೆಗಳು ನಡೆಯುತ್ತಿವೆ. ಬಿಜೆಪಿ, ಕಾಂಗ್ರೆಸ್ ಅಥವಾ ಸಿಪಿಐ(ಎಂ) ಪಕ್ಷಗಳು ತಾವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಏಕೆ ಯಾವುದೇ ಚಳವಳಿಗಳನ್ನು ಸಂಘಟಿಸುತ್ತಿಲ್ಲ? ಚಳವಳಿಯ ಒತ್ತಡದಲ್ಲಿ, ಆರ್ ಜಿ ಕರ್ ಆಸ್ಪತ್ರೆಯ ಘಟನೆಯ ಆರೋಪಿಗಳಿಗೆ ಶಿಕ್ಷೆ ಆಗಬಹುದು, ಆಗದೆಯೂ ಇರಬಹುದು. ಎಲ್ಲರೊಂದಿಗೆ ಒಗ್ಗೂಡಿ, ತಪ್ಪಿತಸ್ಥರಿಗೆ ಮಾದರಿ ಶಿಕ್ಷೆಗೆ ನಾವು ಒತ್ತಾಯಿಸುತ್ತೇವೆ. ಅದೇ ಸಮಯದಲ್ಲಿ, ದೇಶಾದ್ಯಂತ, ಈವ್-ಟೀಸಿಂಗ್, ಅಪಹರಣ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆಗಳು ದಿನದಿಂದ ದಿನಕ್ಕೆ ಅವ್ಯಾಹತವಾಗಿ ನಡೆಯುತ್ತಿವೆ ಮತ್ತು ಹೆಚ್ಚುತ್ತಿವೆ.

### ದೌರ್ಜನ್ಯಗಳಿಗೆ ಕಾರಣ ಮತ್ತು ನಮ್ಮ ಮುಂದಿನ ದಾರಿ

ಮಹಿಳೆಯರ ವಿರುದ್ಧ ಇಂತಹ ಆತಂಕಕಾರಿ ಘಟನೆಗಳು ಏಕೆ ನಡೆಯುತ್ತಿವೆ? ಯಾರೂ ಅತ್ಯಾಚಾರಿಗಳಾಗಿ ಹುಟ್ಟುವುದಿಲ್ಲ ಅಥವಾ ಮಾನವೀಯ ಮೌಲ್ಯಗಳೊಂದಿಗೆ ಜನಿಸುವುದಿಲ್ಲ. ಹೋರಾಟದ ಮೂಲಕ ಸಮಾಜದಿಂದ ಮಾನವೀಯ ಮೌಲ್ಯಗಳನ್ನು ಪಡೆಯುತ್ತಾರೆ. ಅಂತೆಯೇ, ಈ ಕೊಳೆತ ಸಮಾಜವು ಬೆಳೆಸಿದ ದುರ್ಗುಣಗಳಿಂದ ಪ್ರಭಾವಿತರಾಗುತ್ತಾರೆ. ಒಮ್ಮೆ ಈ ದೇಶದ ಯುವಕರು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಗಾರರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದರು. ಗುಂಡುಗಳು ಮತ್ತು ಲಾಠಿಗಳು, ನೇಣುಗಂಭವನ್ನು ನಗುತ್ತಾ ಅಪ್ಪಿಕೊಂಡರು. ಆದರೆ ಸ್ವತಂತ್ರ ಭಾರತದಲ್ಲಿ, ಯುವಜನತೆಯ ಒಂದು ವರ್ಗದಲ್ಲಿ ಇಂತಹ ವಿಕೃತ ಪ್ರವೃತ್ತಿಗಳು ಮತ್ತು ಕ್ರಿಮಿನಲ್ ಮನಸ್ಸು ಏಕೆ ಕಂಡುಬರುತ್ತದೆ? ಉತ್ತರವನ್ನು ಎಸ್‌ಯುಸಿಐ(ಸಿ) ನ ಸ್ಥಾಪಕ ಪ್ರಧಾನ ಕಾರ್ಯದರ್ಶಿ ಮತ್ತು ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಒದಗಿಸಿದ್ದಾರೆ.

ಅವರು ಹೇಳಿದರು: “...ಎಷ್ಟೇ ತೀವ್ರ ಸ್ವರೂಪದ ದಬ್ಬಾಳಿಕೆ ಮತ್ತು ನಿರ್ಗತಿಕತನವನ್ನು ಒಂದು ದೇಶದ ಜನರು ಅನುಭವಿಸಿದರೂ, ತೀವ್ರವಾದ ಚಿತ್ರಹಿಂಸೆಯ ನಡುವೆಯೂ ಆ ರಾಷ್ಟ್ರದ ನೈತಿಕ ಶಕ್ತಿ ಕ್ಷೀಣಿಸದಿದ್ದರೆ ಅದು ದೃಢವಾಗಿ ಮತ್ತು ತಲೆ ಎತ್ತಿ ನಿಲ್ಲಬಹುದು ... ಭಾರತೀಯ ಬೂರ್ಜ್ವಾಸಿಗೂ ಅದು ತಿಳಿದಿದೆ. ಅವರು ಇತಿಹಾಸದಿಂದ ಈ ಪಾಠವನ್ನು ಕಲಿತಿದ್ದಾರೆ. ಕೇವಲ ದಬ್ಬಾಳಿಕೆಯ ಮೂಲಕ, ರಾಜ್ಯ ಯಂತ್ರದ ಬಲವಂತದ ಮೂಲಕ ಮತ್ತು ಪೊಲೀಸ್ ಹಾಗೂ ಮಿಲಿಟರಿಯ ಕ್ರೂರ ದಮನದ ಮೂಲಕ - ಅಂತಿಮವಾಗಿ ಜನರನ್ನು ನಿಗ್ರಹದಲ್ಲಿರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಬೂರ್ಜ್ವಾಸಿ ರಾಷ್ಟ್ರದ ಬೆನ್ನೆಲುಬನ್ನು ಮುರಿಯಲು ಪಿತೂರಿ ನಡೆಸುತ್ತದೆ; ಜನರ ನೈತಿಕ ಬೆನ್ನೆಲುಬನ್ನು ಜಾಣತನದಿಂದ ನಾಶಮಾಡುತ್ತದೆ! ಮೂಲ ಪ್ರವೃತ್ತಿ ಮತ್ತು ನೀಚ ಗುಣ, ದುರಾಸೆ, ಹೇಡಿತನದ ಆಕ್ರಮಣ, ಅಸಭ್ಯತೆ,

12ನೇ ಪುಟಕ್ಕೆ

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಅತ್ಯಾಚಾರ ಮತ್ತು ಕೊಲೆಯ ಒಂದು ಪೈಶಾಚಿಕ ಘಟನೆ

11ನೇ ಪುಟದಿಂದ ಕೀಳರಿಮೆ, ಸೈಕೋಫಾನ್ಸಿ, ವ್ುುಖಸ್ತ್ತಿಗ್ಳ್ನ್ನ್ ಬೆಳೆಸಿಕೊಳ್ಳಲು ಪ್ರೋತ್ಸಾಹಿಸುತ್ತದೆ. ಅವರು ರಾಷ್ಟ್ರದ ನೈತಿಕ ಬೆನ್ನೆಲುಬನ್ನು ಮುರಿಯಲು ಬಯಸುತ್ತಾರೆ, ಅದಕ್ಕೆ ಅವರು ಮನುಷ್ಯನನ್ನು ಸ್ವ–ಕೇಂದ್ರಿತವಾಗಿ ಮಾಡಲು ಬಯಸುತ್ತಾರೆ, ರಾಜಕೀಯದ ವಿರುದ್ಧ ದ್ವೇಷವನ್ನು ಬೆಳೆಸುತ್ತಾರೆ, ಎಲ್ಲಾ ಮೌಲ್ಯಗಳ ಸಾರವನ್ನು ಕೆಸರಿನಲ್ಲಿ ತುಳಿದು ನಾಶಪಡಿಸುತ್ತಾರೆ.”

ಈ ಎಚ್ಚರಿಕೆ ಇಂದು ಕಟು ವಾಸ್ತವವಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿ, ಊಳಿಗಮಾನ್ಯ ಸಂಪ್ರದಾಯ, ಮೂಢ ನಂಬಿಕೆಗಳು ಮತ್ತು ಅಂಧಶ್ರದ್ಧೆ ಕೂಡಿದ ಸಮಾಜದಲ್ಲಿ, ರಾಜಾ ರಾಮಮೋಹನ್ ರಾಯ್, ವಿದ್ಯಾಸಾಗರ್, ರವೀಂದ್ರನಾಥ್, ಜೋತಿಬಾ ಫುಲೆ, ಶರತ್ಚಂದ್ರ, ಪ್ರೇಮಚಂದ್, ನಜ್ರುಲ್, ಸುಬ್ರಹ್ಮಣ್ಯ ಭಾರತಿ, ನೇತಾಜಿ ಸುಭಾಷ್, ಭಗತ್‌ಸಿಂಗ್, ಜ್ಯೋತಿಪ್ರಸಾದ್ ಅಗರ್ವಾಲ್, ಲಾಲಾ ಲಜಪತ್ ರಾಯ್, ಮಾಸ್ಟರ್ದಾ ಸೂರ್ಯ ಸೇನ್, ಚಂದ್ರಶೇಖರ್ ಆಜಾದ್ ಮತ್ತು ಇತರರು, ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಹೊಸ ಉನ್ನತ ನೀತಿ ಮತ್ತು ನೈತಿಕತೆಯನ್ನು ತುಂಬಲು ಪ್ರಯತ್ನಿಸಿದರು. ಇಂದು, ಆಳುವ ಏಕಸ್ವಾಮ್ಯಾಧಿಪತಿಗಳು ಮತ್ತು ಅವರ ಸೇವಕರು ಈ ಮಹಾಪುರುಷರನ್ನು ಮತ್ತು ಅವರ ಬೋಧನೆಗಳನ್ನು ಉಪೇಕ್ಷಿಸುವಂತೆ ಹೇಯವಾದ ವಿನ್ಯಾಸವನ್ನು ರೂಪಿಸಿದ್ದಾರೆ. ಮದ್ಯ, ಮಾದಕ ದ್ರವ್ಯ, ಜೂಜು, ಅಶ್ಲೀಲತೆ ಮತ್ತು ಇತರ ವಿಷಗಳಿಗೆ ಆಮಿಷವೊಡ್ಡುವ ಮೂಲಕ ಯುವಕರನ್ನು ಸಾಂಸ್ಕೃತಿಕ ಅವನತಿ ಮತ್ತು ಲೈಂಗಿಕ ವಿಕೃತಿಯಲ್ಲಿ ಮುಳುಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅಂತಹ ಆತ್ಮಸಾಕ್ಷಿಯಿಲ್ಲದ ಯುವಕರ ಗುಂಪು ಪ್ರತಿಗಾಮಿ ಆಡಳಿತ ಪ್ರಭುತ್ವಗಳ ಕೈಯಲ್ಲಿ ದಾಳಗಳಾಗುತ್ತಿವೆ. ಹಣಕ್ಕಾಗಿ ಜನರನ್ನು ಕೊಲ್ಲಲು, ಚುನಾವಣೆಯ ಸಮಯದಲ್ಲಿ ಭಯೋತ್ಪಾದನೆ ಮತ್ತು ವಿಧ್ವಂಸಕ ಕೃತ್ಯಗಳಿಗೆ ಉಪಯೋಗಿಸಲ್ಪಡುತ್ತಾರೆ. ಬಂಡವಾಳಶಾಹಿ ವರ್ಗ ಇರುವವರೆಗೆ, ಇತರ ಎಲ್ಲ ಬಿಕ್ಕಟ್ಟುಗಳಂತೆ, ಕೊಲೆ ಮತ್ತು ಅತ್ಯಾಚಾರಗಳಿಗೆ ಯಾವುದೇ ಇಳಿಕೆ ಇರುವುದಿಲ್ಲ.

ಹಾಗಂತ ಜನರು ನಿಷ್ಕ್ರಿಯವಾಗಿ ಉಳಿಯಬೇಕೇ? ಖಂಡಿತಾ ಇಲ್ಲ. ಆರ್ ಜಿ ಕರ್ ಆಸ್ಪತ್ರೆ ಸಂತ್ರಸ್ತೆಗೆ ನ್ಯಾಯಕ್ಕಾಗಿ ನಡೆಯುತ್ತಿರುವ ಚಳವಳಿಯಂತೆ, ಒಂದರ ನಂತರ ಒಂದರಂತೆ ಪ್ರಬಲವಾದ ಜನಾಂದೋಲನಗಳು ನಡೆಯಬೇಕು. ಜೊತೆಗೆ ಹದಿಹರೆಯದವರು ಮತ್ತು ಯುವಕರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೊಸ ಪೀಳಿಗೆಗೆ ಮಹಾನ್ ವ್ಯಕ್ತಿಗಳ ಜೀವನ ಮತ್ತು ಬೋಧನೆಗಳನ್ನು ತಿಳಿಸುವುದು ಅತ್ಯಗತ್ಯ. ಎಲ್ಲಾ ಅನ್ಯಾಯದ ವಿರುದ್ಧ ಪ್ರತಿಭಟನೆ ಮತ್ತು ಪ್ರತಿರೋಧ ಚಳುವಳಿಗಳನ್ನು ಮುನ್ನಡೆಸುವ ಪ್ರಾಮಾಣಿಕ ಧೈರ್ಯಶಾಲಿ ಪುರುಷರು ಮತ್ತು ಮಹಿಳೆಯರು ಒಗ್ಗೂಡಿ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಸಮಿತಿಗಳು ಮತ್ತು ಸ್ವಯಂಸೇವಕ ದಳಗಳನ್ನು ನಿರ್ಮಿಸುವುದು ಅಗತ್ಯವಾಗಿದೆ.

ನಮ್ಮ ಮಹಾನ್ ನಾಯಕ ಮತ್ತು ಶಿಕ್ಷಕ ಕಾಮ್ರೇಡ್ ಶಿವದಾಸ್ ಘೋಷ್ ಹೇಳಿದ್ದರು: “ನೀವು ಅನ್ಯಾಯದ ವಿರುದ್ಧ ಧ್ವನಿ ಎತ್ತದಿದ್ದರೆ, ನೀವು ಮನುಷ್ಯರು ಎಂದು ಕರೆಯಿಸಿಕೊಳ್ಳಲು ಅರ್ಹರಲ್ಲ.” ಈ ಅಮೂಲ್ಯವಾದ ಬೋಧನೆಯ ಆಧಾರದ ಮೇಲೆ ನಾವು ಕಾರ್ಯಪ್ರವೃತ್ತರಾಗೋಣ.

# ಬಳ್ಳಾರಿಯ ವಿಮ್ಸ್ ಗುತ್ತಿಗೆ ಕಾರ್ಮಿಕರ ಸಮ್ಮೇಳನ

ಬಳ್ಳಾರಿಯ ವಿಮ್ಸ್‌ನ ಬಿ.ಸಿ ರಾಯ್ ಸಭಾಂಗಣದಲ್ಲಿ ವಿಮ್ಸ್ ಗುತ್ತಿಗೆ ಕಾರ್ಮಿಕರ ಸಮ್ಮೇಳನ ಜರುಗಿತು. ಮುಖ್ಯ ಭಾಷಣಕಾರರಾಗಿ ಎಐಯುಟಿಯುಸಿ ರಾಜ್ಯಾಧ್ಯಕ್ಷರಾದ ಕಾ.ಕೆ.ಸೋಮಶೇಖರ್ ಅವರು ಮಾತನಾಡುತ್ತಾ “ಇಂದು ಒಂದೆಡೆ ಕಾರ್ಮಿಕ ವಿರೋಧಿ ನೀತಿಗಳನ್ನು ಸರ್ಕಾರಗಳು ಜಾರಿಗೆ ತರುತ್ತಿವೆ. ಮತ್ತೊಂದೆಡೆ ದೊಡ್ಡ ಕಾರ್ಪೋರೇಟ್ ಮಾಲೀಕರ ಹಿತಾಸಕ್ತಿಯನ್ನು ಕಾಪಾಡುತ್ತಿವೆ. ಪ್ರಸಕ್ತ ಕೇಂದ್ರ ಬಿಜೆಪಿ ಸರ್ಕಾರ ಕಾರ್ಮಿಕ ಕಾಯ್ದೆಗಳಲ್ಲಿ ತಿದ್ದುಪಡಿ ತಂದು, ಕಾರ್ಮಿಕ ಹಕ್ಕುಗಳನ್ನು ಕಿತ್ತುಕೊಳ್ಳಲು ಹೊರಟಿದೆ. ವಿಮ್ಸ್ ಗುತ್ತಿಗೆ ನೌಕರರು ತಮ್ಮ ಬೇಡಿಕೆಗಳಿಗಾಗಿ ಒಗ್ಗಟ್ಟಿನಿಂದ ಹೋರಾಟವನ್ನು ರೂಪಿಸುತ್ತಲೇ, ಇಡೀ ಕಾರ್ಮಿಕ ವರ್ಗದ ಚಳುವಳಿಯ ಭಾಗವಾಗಬೇಕೆಂದು” ಕರೆ ನೀಡಿದರು.



ಎಐಯುಟಿಯುಸಿ ರಾಜ್ಯಾಧ್ಯಕ್ಷರಾದ ಕಾ.ಕೆ.ಸೋಮಶೇಖರ್ ಅವರು ಮಾತನಾಡುತ್ತಿರುವುದು


ಸಮ್ಮೇಳನದ ಪ್ರತಿನಿಧಿಗಳು

## ಕೊಲ್ಕತ್ತದ ಅರ್ ಜಿ ಕರ್ ಆಸ್ಪತ್ರೆಯಲ್ಲಿ ವೈದ್ಯೆಯ ಮೇಲೆ ನಡೆದ ಅಮಾನವೀಯ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಎಐಎಮ್‌ಎಸ್‌ಎಸ್, ಎಐಡಿಎಸ್‌ಓ ಹಾಗೂ ಎಐಡಿವೈಓ ಸಂಘಟನೆಗಳಿಂದ ಪ್ರತಿಭಟನೆ!













Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA